# ಭಾರತದ ಸಂವಿಧಾನ ರಚನಾಸಭೆಯ ಚರ್ಚೆಗಳು (ನಡವಳಿಗಳು)

## ಸಂಪುಟ ೩

### ಗುರುವಾರ, ೪ನೇ ನವೆಂಬರ್, ೧೯೪೮

ಭಾರತದ ಸಂವಿಧಾನ ರಚನಾಸಭೆಯು ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ ಬೆಳಗ್ಗೆ ೧೧ ಗಂಟೆಗೆ ಗೌರವಾನ್ವಿತ ಸಭಾಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದ್, ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

**ಪರಿಚಯಪತ್ರಗಳನ್ನು ನೀಡುವುದು ಮತ್ತು ರಿಜಿಸ್ಟರಿನಲ್ಲಿ ಸಹಿ ಮಾಡುವುದು**

ಕೆಳಕಂಡ ಸದಸ್ಯರು ತಮ್ಮ ಪರಿಚಯಪತ್ರಗಳನ್ನು ಸಲ್ಲಿಸಿ ರಿಜಿಸ್ಟರಿನಲ್ಲಿ ಸಹಿಯನ್ನು ಮಾಡಿದರು:

(೧) ಶ್ರೀ ಎಚ್. ಸಿದ್ಧವೀರಪ್ಪ (ಮೈಸೂರು ರಾಜ್ಯ)

(೨) ಶ್ರೀ ಕೆ.ಎ. ಮೊಹಮ್ಮದ್ (ತಿರುವಾಂಕೂರು ರಾಜ್ಯ)

(೩) ಶ್ರೀ ಆರ್. ಶಂಕರ್ (ತಿರುವಾಂಕೂರು ರಾಜ್ಯ)

(೪) ಶ್ರೀ ಅಮೃತ್‌ಲಾಲ್ ವಿಠಲ್‌ದಾಸ್ ಠಕ್ಕರ್ [ಕಾಥೇವಾಡ ಸಂಯುಕ್ತ ರಾಜ್ಯ (ಸೌರಾಷ್ಟ್ರ)]

(೫) ಶ್ರೀ ಕಾಲೂರಾಮ್ ವಿರೂಲ್ಕರ್ [ಗ್ವಾಲಿಯರ್, ಇಂದೋರ್, ಮಾಳವ ಸಂಯುಕ್ತ ರಾಜ್ಯ (ಮಧ್ಯ ಭಾರತ)]

(೬) ಶ್ರೀ ರಾಧಾವಲ್ಲಭ ವಿಜಯವರ್ಗೀಯ [ಗ್ವಾಲಿಯರ್, ಇಂದೋರ್, ಮಾಳವ ಸಂಯುಕ್ತ ರಾಜ್ಯ (ಮಧ್ಯ ಭಾರತ)]

(೭) ಶ್ರೀ ರಾಮಚಂದ್ರ ಉಪಾಧ್ಯಾಯ (ಮತ್ಸ್ಯ ಸಂಯುಕ್ತ ರಾಜ್ಯ)

(೮) ಶ್ರೀ ರಾಜ್ ಬಹಾದೂರ್ (ಮತ್ಸ್ಯ ಸಂಯುಕ್ತ ರಾಜ್ಯ)

(೯) ಶ್ರೀ ಠಕ್ಕರ್ ಕೃಷ್ಣ ಸಿಂಗ್ (ಉಳಿದ ರಾಜ್ಯಗಳು)

(೧೦) ಶ್ರೀ ವಿ. ರಾಮಯ್ಯ (ಮದ್ರಾಸ್ ರಾಜ್ಯ)

(೧೧) ಡಾ. ವೈ.ಎಸ್. ಪರಮಾರ್ (ಹಿಮಾಚಲ ಪ್ರದೇಶ)

**ಪ್ರಮಾಣವಚನ ಸ್ವೀಕಾರ**

ಕೆಳಕಂಡ ಸದಸ್ಯರು ಪ್ರಮಾಣವಚನವನ್ನು ಸ್ವೀಕರಿಸಿದರು:

ಶ್ರೀ ಶ್ಯಾಮನಂದನ ಸಹಾಯ

**ರಾಷ್ಟ್ರಪಿತನಿಗೆ ಶ್ರದ್ಧಾಂಜಲಿ**

**ಮಾನ್ಯ ಸಭಾಧ್ಯಕ್ಷರು :** ಮಾನ್ಯ ಸದಸ್ಯರೆ, ಕಾರ್ಯಕ್ರಮದ ಪಟ್ಟಿಯಲ್ಲಿರುವ ವಿಷಯವನ್ನು ತೆಗೆದುಕೊಳ್ಳುವ

ಮೊದಲು, ನಮ್ಮ ಮೃತ ಮಾಂಸಖಂಡಗಳಿಗೆ, ಎಲುಬುಗಳಿಗೆ ಜೀವವನ್ನು ತುಂಬಿದ, ವಿಷಾದ ಮತ್ತು ನಿರಾಶೆಯ ಅಂಧಕಾರದಿಂದ ಮೇಲೆತ್ತಿ ಭರವಸೆ ಮತ್ತು ಸಾಧನೆಯ ಬೆಳಕನ್ನು ಮತ್ತು ಸೂರ್ಯನ ಕಿರಣಗಳನ್ನು ನಮಗೆ ಕಾಣಿಸಿದ, ಹಾಗೂ ಗುಲಾಮಗಿರಿಯಿಂದ ಸ್ವಾತಂತ್ರ್ಯದತ್ತ ನಮ್ಮನ್ನು ಮುನ್ನಡೆಸಿದ ರಾಷ್ಟ್ರಪಿತನಿಗೆ ತಾವೆಲ್ಲರೂ ತಮ್ಮ ತಮ್ಮ ಸ್ಥಳದಲ್ಲಿಯೇ ನಿಂತುಕೊಂಡು ಗೌರವಪೂರ್ಣ ಶ್ರದ್ಧಾಂಜಲಿಯನ್ನು ಸಮರ್ಪಿಸಬೇಕೆಂದು ವಿನಂತಿಸುತ್ತೇನೆ. ಅವರ ಬಾಳು ಮತ್ತು ಬೋಧನೆಗಳು ನಮ್ಮನ್ನು ನಮ್ಮ ಗುರಿಯತ್ತ ಒಯ್ಯುವ ದಾರಿದೀಪವಾಗಲಿ.

(ಎಲ್ಲ ಸದಸ್ಯರೂ ನಿಂತುಕೊಂಡು ಮೌನವನ್ನು ಆಚರಿಸಿದರು)

**ಖೈದ್–ಎ–ಅಜ಼ಾಮ್ ಮೊಹಮ್ಮದ್ ಅಲಿ ಜಿನ್ನಾ, ಶ್ರೀ ಡಿ.ಪಿ. ಖೈತಾನ್ ಮತ್ತು ಡಿ.ಎಸ್. ಗುರುಂಗ್ ಅವರ ಮರಣಕ್ಕೆ ಸಂತಾಪ ಸೂಚನೆ**

**ಮಾನ್ಯ ಸಭಾಧ್ಯಕ್ಷರು** : ಸದಸ್ಯರೆ, ತಮ್ಮ ದೃಢ ನಿರ್ಧಾರದಿಂದ ಮತ್ತು ಅಚಲವಾದ ಶ್ರದ್ಧೆಯಿಂದ ಪಾಕಿಸ್ತಾನವನ್ನು ಸೃಷ್ಟಿಸಿದ ಖೈದ್–ಎ–ಅಜ಼ಾಮ್ ಮೊಹಮ್ಮದ್ ಅಲಿ ಜಿನ್ನಾ ಅವರ ನಿಧನಕ್ಕೆ ತಾವೆಲ್ಲರೂ ತಮ್ಮ ತಮ್ಮ ಸ್ಥಳದಲ್ಲಿಯೇ ನಿಂತುಕೊಂಡು ತಮ್ಮ ಸಂತಾಪವನ್ನು ಸೂಚಿಸಬೇಕೆಂದು ಕೋರುತ್ತೇನೆ. ಅವರ ನಿಧನವು ನಮಗೆಲ್ಲರಿಗೂ ತುಂಬಲಾರದ ನಷ್ಟವಾಗಿದೆ. ನಮ್ಮ ನೆರೆಯ ದೇಶದವರಿಗೆ ನಮ್ಮ ಸಂತಾಪವನ್ನು ತಿಳಿಸುತ್ತೇವೆ.

(ಎಲ್ಲ ಸದಸ್ಯರೂ ನಿಂತುಕೊಂಡು ಮೌನವನ್ನು ಆಚರಿಸಿದರು)

**ಮಾನ್ಯ ಸಭಾಧ್ಯಕ್ಷರು** : ಸಂವಿಧಾನ ರಚನಾಸಭೆಯು ಕಳೆದ ಬಾರಿ ಸಭೆ ಸೇರಿದಂದಿನಿಂದ ಈಚೆಗೆ, ಅದರ ಇಬ್ಬರು ಸದಸ್ಯರು ನಿಧನರಾಗಿದ್ದಾರೆ. ಅವರೆಂದರೆ ಶ್ರೀ ದೇಬಿ ಪ್ರಸಾದ್ ಖೈತಾನ್ ಮತ್ತು ದಾರ್ಜಿಲಿಂಗ್‌ನ ಶ್ರೀ ದಾಂಬರ್ ಸಿಂಗ್ ಗುರುಂಗ್ ಅವರು. ಅವರು ತಮ್ಮ ತಮ್ಮ ಕ್ಷೇತ್ರಗಳನ್ನು ಬಹಳ ಶ್ರದ್ಧೆಯಿಂದ ಪ್ರತಿನಿಧಿಸುತ್ತಿದ್ದರು ಮತ್ತು ಅವರಿಂದ ನಮ್ಮ ಚರ್ಚೆಗಳಿಗೆ ಬಹಳ ಸಹಾಯವಾಗುತ್ತಿತ್ತು. ಅವರಿಬ್ಬರ ನಿಧನಕ್ಕೆ ಸಂತಾಪವನ್ನು ಹಾಗೂ ಅವರಿಗೆ ಗೌರವವನ್ನು ಸೂಚಿಸಲು ತಾವು ತಮ್ಮ ತಮ್ಮ ಸ್ಥಳಗಳಲ್ಲಿಯೇ ನಿಂತು ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಎಲ್ಲ ಸದಸ್ಯರೂ ನಿಂತುಕೊಂಡು ಮೌನವನ್ನು ಆಚರಿಸಿದರು)

**ಸಂವಿಧಾನ ರಚನಾಸಭೆಯ ೫–ಎ ಮತ್ತು ೫–ಬಿ ನಿಯಮಗಳಿಗೆ ತಿದ್ದುಪಡಿ**

**ಮಾನ್ಯ ಸಭಾಧ್ಯಕ್ಷರು** : ನಾವೀಗ ಕಾರ್ಯಕ್ರಮದ ಪಟ್ಟಿಯಲ್ಲಿರುವ ವಿಷಯವನ್ನು ಕೈಗೆತ್ತಿಕೊಳ್ಳೋಣ. ಮೊದಲನೆಯ ವಿಷಯವೆಂದರೆ ಶ್ರೀ ಗೋವಿಂದ ಮೆನನ್ ಮತ್ತು ಶ್ರೀಮತಿ ದುರ್ಗಾಬಾಯಿಯವರು ಮಂಡಿಸಿರುವ ಪ್ರಸ್ತಾವ. ಇದರ ಸೂಚನೆಯನ್ನು ಈಗಾಗಲೇ ಎಲ್ಲರಿಗೂ ನೀಡಲಾಗಿದೆ. ಪ್ರಸ್ತಾವವನ್ನು ಮಂಡಿಸುವಂತೆ ನಾನು ಶ್ರೀಮತಿ ದುರ್ಗಾಬಾಯಿಯವರನ್ನು ಕೇಳಿಕೊಳ್ಳುತ್ತೇನೆ.

**ಶ್ರೀಮತಿ ದುರ್ಗಾಬಾಯಿ** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ನಾನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ :

ಸಂವಿಧಾನ ರಚನಾಸಭೆಯ ದಿನಾಂಕ ೧೯೪೭ರ ಆಗಸ್ಟ್ ೨೮ ಸಿಎ/೪೩/ಎಸ್‌ಇಆರ್/೪೭–ಐ ಸೂಚನಾ ಪತ್ರದಲ್ಲಿ ನಮೂದಿಸಿರುವ ಉಪಬಂಧಗಳನ್ನು ಈ ಕೆಳಗಿನ ತಿದ್ದುಪಡಿಯೊಂದಿಗೆ ಸೇರಿಸಿಕೊಂಡು ೧೯೪೭ರ ಆಗಸ್ಟ್ ೨೮ರಿಂದಲೇ ಜಾರಿಗೆ ಬರುವಂತೆ ಸಂವಿಧಾನ ರಚನಾಸಭೆಯ ನಿಯಮಗಳ ಭಾಗವಾಗಿ ಪರಿಗಣಿಸತಕ್ಕದ್ದು:

(೧) ನಿಯಮ ೫–ಎ ಮತ್ತು ೫–ಬಿ –

೫–ಎ ಮತ್ತು ೫–ಬಿ ನಿಯಮಗಳಿಗೆ ಬದಲಿಯಾಗಿ ಮುಂದೆ ನೀಡಿರುವುದನ್ನು ಸೇರಿಸಿಕೊಳ್ಳಬೇಕು:

"೫-ಎ. ಈ ನಿಯಮಗಳ ಅನುಸೂಚಿಯ ಅನುಬಂಧದ ಅಂಕಣ ೧ರಲ್ಲಿ ಕೊಟ್ಟಿರುವ ಭಾರತೀಯ ರಾಜ್ಯವೊಂದನ್ನು ಅಥವಾ ಒಂದಕ್ಕಿಂತ ಹೆಚ್ಚು ರಾಜ್ಯಗಳನ್ನು ಸಂವಿಧಾನ ರಚನಾಸಭೆಯನ್ನು ಪ್ರತಿನಿಧಿಸುವ ಸದಸ್ಯರ ಸ್ಥಾನವು ನಿಧನ, ರಾಜಿನಾಮೆ ಅಥವಾ ಇನ್ನಾವುದಾದರೂ ರೀತಿಯಲ್ಲಿ ಖಾಲಿಯಾದರೆ, ಅಧ್ಯಕ್ಷರು ಅನುಬಂಧದ ೩ನೆಯ ಅಂಕಣದಲ್ಲಿ ಹೆಸರಿಸಿರುವ ಅಧಿಕಾರಿಗೆ, ಖಾಲಿಯಾಗಿರುವ ಸ್ಥಾನವು ಅನುಬಂಧದ ಮೊದಲ ಭಾಗಕ್ಕೆ ಸಂಬಂಧಿಸಿದ ರಾಜ್ಯವಾದರೆ ಸಾಧ್ಯವಾದಷ್ಟು ಬೇಗ ಆಯಾ ಸಂದರ್ಭಕ್ಕೆ ತಕ್ಕಂತೆ ಚುನಾವಣೆಯ ಅಥವಾ ನಾಮಕರಣದ ಮೂಲಕ ತುಂಬುವಂತೆ ಅಥವಾ ಅನುಬಂಧದ ಎರಡನೆಯ ಭಾಗಕ್ಕೆ ಸಂಬಂಧಿಸಿದ ರಾಜ್ಯವಾದರೆ ಚುನಾವಣೆಯ ಮೂಲಕ ತುಂಬುವಂತೆ ಲಿಖಿತ ಕೋರಿಕೆಯನ್ನು ನೀಡಬೇಕು.

ಹಾಗೆ ಮಾಡುವಾಗ, ಖಾಲಿಯಾಗಿರುವ ಸ್ಥಾನವು ಈ ಮೊದಲು ಹೇಳಿದ ಅನುಬಂಧ-೧ ರಲ್ಲಿರುವ ರಾಜ್ಯಕ್ಕೆ ಸೇರಿದ್ದು ಆ ಸ್ಥಾನವನ್ನು ಹಿಂದೆ ನಾಮನಿರ್ದೇಶನದ ಮೂಲಕ ಭರ್ತಿ ಮಾಡಲ್ಪಟ್ಟಿದ್ದರೆ, ಈಗ ಅದನ್ನು ಚುನಾವಣೆಯ ಮೂಲಕ ಭರ್ತಿ ಮಾಡಬೇಕು.

ಅಲ್ಲದೆ, ಈ ನಿಯಮದ ಅಡಿಯಲ್ಲಿ ಸ್ಥಾನವನ್ನು ಭರ್ತಿ ಮಾಡಲು ಕೋರಿಕೆಯನ್ನು ಸಲ್ಲಿಸುವಾಗ, ರಾಷ್ಟ್ರಪತಿಗಳು ಚುನಾವಣೆಯನ್ನು ತಾವು ಸೂಚಿಸುವ ಒಂದು ನಿರ್ದಿಷ್ಟ ಸಮಯದ ಒಳಗೆ ನಡೆಸತಕ್ಕದ್ದು ಎಂದು ತಿಳಿಸಬಹುದು.

(೨) ನಿಯಮ ೫೧ ರಲ್ಲಿ

"(ಬಿ) 'ಆಯ್ಕೆಯಾದ ಅಭ್ಯರ್ಥಿ'ಯೆಂದರೆ, ಅನುಸೂಚಿಯ ಅನುಬಂಧದ ೧ನೆಯ ಅಂಕಣದಲ್ಲಿ ಸೂಚಿಸಿರುವ ಭಾರತೀಯ ರಾಜ್ಯವೊಂದರ ಅಥವಾ ರಾಜ್ಯಗಳ ಪ್ರತಿನಿಧಿಯಾಗಿ ಸಂವಿಧಾನ ರಚನಾಸಭೆಗೆ ಆಯ್ಕೆಯಾಗಿದ್ದಾರೆಂದು ಅಧಿಕೃತ ರಾಜ್ಯಪತ್ರದಲ್ಲಿ ಸೂಚಿಸಿ ಪ್ರಕಟಿಸಿದ ಅಭ್ಯರ್ಥಿ ಅಥವಾ ಅನುಸೂಚಿಯ ೫ನೆಯ ಕಂಡಿಕೆಯಲ್ಲಿ ಹೇಳಿರುವ ನಿಯಮಗಳಿಗೆ ಅನುಸಾರವಾಗಿ ಇಂತಹ ಅಭ್ಯರ್ಥಿಯು ಆಯ್ಕೆಯಾಗಿದ್ದಾರೆ ಎಂದು ರಾಷ್ಟ್ರಪತಿಗಳಿಗೆ ಸೂಚಿಸಲ್ಪಟ್ಟ ಅಭ್ಯರ್ಥಿ ಎಂದು ಅರ್ಥವಾಗುತ್ತದೆ.

(೩) ಅನುಸೂಚಿಯಲ್ಲಿ

೩,೪,೫ ಮತ್ತು ೬ನೆಯ ಕಂಡಿಕೆಗಳಿಗೆ ಈ ಕೆಳಗೆ ಕೊಟ್ಟಿರುವುದನ್ನು ಬದಲಿಯಾಗಿ ಸೇರಿಸಬೇಕು:

"೩.(೧) ಸಂವಿಧಾನ ರಚನಾಸಭೆಯಲ್ಲಿ ಒಂದು ರಾಜ್ಯಕ್ಕೆ ಅಥವಾ ರಾಜ್ಯಗಳ ಕೂಟಕ್ಕೆ ನೀಡಿದ್ದ ಪ್ರಾತಿನಿಧ್ಯವನ್ನು ಕಂಡಿಕೆ ೨ರಲ್ಲಿನ ನಿಯಮಗಳಿಗೆ ಅನುಸಾರವಾದ ಆದೇಶದ ಮೂಲಕ ಅಥವಾ ಈ ಅನುಸೂಚಿಯ ಅನುಬಂಧವನ್ನು ತಿದ್ದುಪಡಿ ಮಾಡುವ ಮೂಲಕ ಬದಲಾಯಿಸಿದರೆ, ರಾಷ್ಟ್ರಪತಿಗಳು ತಮ್ಮ ಒಂದು ಆದೇಶದ ಮೂಲಕ –

(ಎ) ಆದೇಶದಲ್ಲಿ ತಿಳಿಸಿರುವ ರೀತಿಯಲ್ಲಿ ಪ್ರತಿನಿಧಿಗಳಿಗೆ ಒಂದು ರಾಜ್ಯವನ್ನು ಅಥವಾ ರಾಜ್ಯಗಳನ್ನು ಪ್ರತಿನಿಧಿಸುವಂತೆ ನಿರ್ದಿಷ್ಟಗೊಳಿಸಬಹುದು;

(ಬಿ) ಕಂಡಿಕೆ ೨ರ ಅಡಿಯಲ್ಲಿ ನೀಡಿದ ಆದೇಶದಿಂದಾಗಿ ಅಥವಾ ಅನುಸೂಚಿಯ ಅನುಬಂಧದ ತಿದ್ದುಪಡಿಯಿಂದಾಗಿ ಯಾವುದೇ ರಾಜ್ಯದ ಅಥವಾ ರಾಜ್ಯಗಳನ್ನು ಸಂವಿಧಾನ ರಚನಾಸಭೆಯಲ್ಲಿ ಪ್ರತಿನಿಧಿಸುವ ಪ್ರತಿನಿಧಿಗಳ ಸ್ಥಾನವು ಅಥವಾ ಸ್ಥಾನಗಳು ಬಾಧಿತವಾಗಿದ್ದರೆ, ಅಂತಹ ಸ್ಥಾನಗಳು ಖಾಲಿಯಾಗಿವೆ ಎಂದು ಘೋಷಿಸಬಹುದು.

"೩.(೨) ಒಬ್ಬ ಸದಸ್ಯರ ಪ್ರಾತಿನಿಧ್ಯವನ್ನು ಉಪ-ಕಂಡಿಕೆ(೧)ರ ಖಂಡ (ಎ)ಯ ಅಡಿಯಲ್ಲಿ ನೀಡಿದ ಆದೇಶದ ಪ್ರಕಾರ ಬದಲಾಯಿಸಿ, ಅವರ ಸ್ಥಾನವನ್ನು ಖಾಲಿಯಾಗಿದೆ ಎಂದು ಮೇಲೆ ಹೇಳಿದ ಉಪ-ಕಂಡಿಕೆ (೨)ರ ಖಂಡ (ಬಿ)ಯ ಅಡಿಯಲ್ಲಿ ಘೋಷಿಸದೆ ಇದ್ದರೆ, ಸದರಿ ಸದಸ್ಯರು ಆ ರಾಜ್ಯ ಅಥವಾ ರಾಜ್ಯಗಳಿಂದ ಆಯ್ಕೆಯಾದ ಸದಸ್ಯರೆಂದು ಪರಿಗಣಿಸಲಾಗುವುದು.

"೩. (೩) ಉಪ-ಕಂಡಿಕೆ (೧)ರ ಖಂಡ (ಬಿ)ಯ ಪ್ರಕಾರ ಒಂದು ಆದೇಶವನ್ನು ನೀಡಿ, ಒಬ್ಬ ಸದಸ್ಯರ ಸ್ಥಾನವು

ಖಾಲಿಯಾಗಿದೆ ಎಂದು ಅದರಲ್ಲಿ ಘೋಷಿಸಿದಾಗ, ಮುಂದಿನ ಸದಸ್ಯರು ಚುನಾಯಿತರಾಗಿ ಸಂವಿಧಾನ ರಚನಾಸಭೆಯಲ್ಲಿ ತಮ್ಮ ಸ್ಥಾನವನ್ನು ವಹಿಸಿಕೊಳ್ಳುವವರೆಗೆ ಸದರಿ ಸದಸ್ಯರು, ಸದಸ್ಯರಾಗಿಯೇ ಮುಂದುವರಿಯುತ್ತಾರೆ.

"೪. (೧) ಸಂವಿಧಾನ ರಚನಾಸಭೆಯ ಒಟ್ಟು ಸದಸ್ಯರಲ್ಲಿ ಶೇ. ೫೦ಕ್ಕೆ ಕಡಿಮೆಯಿಲ್ಲದ ಸಂಖ್ಯೆಯ ಸದಸ್ಯರು ಅನುಸೂಚಿಯ ಅನುಬಂಧದ ಮೊದಲನೆಯ ಭಾಗದಲ್ಲಿರುವ ಮೊದಲನೆಯ ಅಂಕಣದಲ್ಲಿ ನಮೂದಿಸಿರುವ ರಾಜ್ಯಗಳ ಶಾಸನಸಭೆಗಳಿಗೆ ಚುನಾಯಿತರಾಗಿರುವ ಸದಸ್ಯರುಗಳಿಂದ ಅಥವಾ ಅಂತಹ ಶಾಸನಸಭೆಗಳು ಇಲ್ಲದಿರುವ ಕಡೆಗಳಲ್ಲಿ, ಮೊದಲನೆಯ ಭಾಗದಲ್ಲಿರುವ ಮೂರನೆಯ ಅಂಕಣದಲ್ಲಿ ಸೂಚಿತವಾಗಿರುವಂತೆ ಶಾಸನಬದ್ಧವಾಗಿ ರಚಿತವಾಗಿರುವ ಮತದಾರ ಸಮುದಾಯದಿಂದ ಚುನಾಯಿತರಾಗಿರಬೇಕು.

"೪. (೨) ಸಂವಿಧಾನ ರಚನಾಸಭೆಯ ಎಲ್ಲ ಸದಸ್ಯರೂ ಅನುಸೂಚಿಯ ಅನುಬಂಧದ ಎರಡನೆಯ ಭಾಗದಲ್ಲಿರುವ ಮೊದಲನೆಯ ಅಂಕಣದಲ್ಲಿ ನಮೂದಿಸಿರುವ ರಾಜ್ಯಗಳ ಶಾಸನಸಭೆಗಳಿಗೆ ಚುನಾಯಿತರಾಗಿರುವ ಸದಸ್ಯರುಗಳಿಂದ, ಅಥವಾ ಅಂತಹ ಶಾಸನಸಭೆಗಳು ಇಲ್ಲದಿರುವ ಕಡೆಗಳಲ್ಲಿ, ಮೊದಲನೆಯ ಭಾಗದಲ್ಲಿರುವ ಮೂರನೆಯ ಅಂಕಣದಲ್ಲಿ ಸೂಚಿತವಾಗಿರುವಂತೆ ಶಾಸನಬದ್ಧವಾಗಿ ರಚಿತವಾಗಿರುವ ಮತದಾರ ಸಮುದಾಯದಿಂದ ಚುನಾಯಿತರಾಗಿರಬೇಕು.

"೫. ಈ ಅನುಸೂಚಿಯ ಅನುಬಂಧದ ಒಂದನೆಯ ಅಂಕಣದಲ್ಲಿ ನಮೂದಿಸಿರುವ ರಾಜ್ಯ ಅಥವಾ ರಾಜ್ಯಗಳ ಪ್ರತಿನಿಧಿ ಅಥವಾ ಪ್ರತಿನಿಧಿಗಳ ಚುನಾವಣೆ ಅಥವಾ ನಾಮಕರಣದ ಪ್ರಕ್ರಿಯೆಯು ಮುಗಿದ ಅನಂತರ, ಅನುಬಂಧದ ಮೂರನೆಯ ಅಂಕಣದಲ್ಲಿ ನಮೂದಿಸಿರುವ ಅಧಿಕಾರಿಯು ತನ್ನ ಸಹಿ ಮತ್ತು ಮೊಹರನ್ನು ಹಾಕಿದ ಸೂಚನಾಪತ್ರವೊಂದನ್ನು ಹೊರಡಿಸಿ ಇಂತಹ ಸದಸ್ಯರು ಚುನಾಯಿತರಾಗಿದ್ದಾರೆ ಅಥವಾ ನಾಮನಿರ್ದೇಶನಗೊಂಡಿದ್ದಾರೆ ಎಂದು ಅವರ ಹೆಸರುಗಳನ್ನು ಅದರಲ್ಲಿ ನಮೂದಿಸಿ ವಿಧಾಯಕ ಸಭೆಯ ಸಭಾಧ್ಯಕ್ಷರಿಗೆ ಸಲ್ಲಿಸತಕ್ಕದ್ದು."

ಮಾನ್ಯರೆ, ಸದನದ ಮುಂದೆ ಈ ಪ್ರಸ್ತಾವವನ್ನು ಮಂಡಿಸುವ ಮೊದಲು, ಈ ತಿದ್ದುಪಡಿಗಳು ಏಕೆ ಆವಶ್ಯಕವಾಗಿವೆ ಎಂಬುದನ್ನು ಕುರಿತು ಕೆಲವು ಮಾತುಗಳನ್ನು ಆಡಲು ಇಚ್ಛಿಸುತ್ತೇನೆ.

ಮಾನ್ಯರೆ, ಸಂವಿಧಾನ ರಚನಾಸಭೆಯ ೫–ಎ ಮತ್ತು ೫–ಬಿ ನಿಯಮಗಳು ಭಾರತದ ರಾಜ್ಯವೊಂದರ ಅಥವಾ ಒಂದಕ್ಕಿಂತ ಹೆಚ್ಚು ರಾಜ್ಯಗಳ ಪ್ರತಿನಿಧಿಗಳ ಖಾಲಿ ಬೀಳುವ ಸ್ಥಾನವನ್ನು ಭರ್ತಿ ಮಾಡುವ ವಿಧಾನಗಳನ್ನು ಹೇಳುತ್ತವೆ ಮತ್ತು ನಿಯಮಗಳ ಅನುಸೂಚಿಯಲ್ಲಿ ರಾಜ್ಯಗಳಿಗೆ ಅಥವಾ ರಾಜ್ಯಗಳ ಕೂಟಕ್ಕೆ ಸ್ಥಾನಗಳನ್ನು ನಿಗದಿ ಪಡಿಸಲಾಗಿದೆ ಹಾಗೂ ಪ್ರತಿನಿಧಿಗಳನ್ನು ಆಯ್ಕೆಮಾಡುವ ಮತ್ತು ಚುನಾವಣೆಗಳನ್ನು ನಡೆಸಲು ಸಂಚಾಲಕರನ್ನು ನೇಮಿಸುವ ವಿಧಾನಗಳನ್ನು ವಿವರಿಸಲಾಗಿದೆ. ಈ ೫–ಎ ಮತ್ತು ೫–ಬಿ ನಿಯಮಗಳನ್ನು ರಾಜರ ಒಕ್ಕೂಟ ಮತ್ತು ಸಂವಿಧಾನ ರಚನಾಸಭೆಗಳು ನೇಮಿಸಿದ್ದ ಸಂಧಾನ ಸಮಿತಿಯ ನಿರ್ಣಯಗಳ ಅನುಸಾರವಾಗಿ ರೂಪಿಸಲಾಗಿತ್ತು.

ಮಾನ್ಯರೆ, ಎಲ್ಲರಿಗೂ ತಿಳಿದಿರುವಂತೆ, ಅಲ್ಲಿಂದೀಚೆಗೆ ದೂರಗಾಮಿ ಪರಿಣಾಮವುಳ್ಳಂತಹ ಹಲವು ಬದಲಾವಣೆಗಳು ಆಗಿವೆ ಮತ್ತು ಈ ಬದಲಾವಣೆಗಳು ಸಂವಿಧಾನದ ಹಾಗೂ ರಾಜ್ಯಗಳ ಆಡಳಿತಾತ್ಮಕ ಪರಿಧಿಯಲ್ಲಿ ನಡೆದಿವೆ. ಉದಾಹರಣೆಗೆ, ಕೆಲವು ರಾಜ್ಯಗಳು ಒಟ್ಟುಗೂಡಿ ಸಂಯುಕ್ತ ರಾಜ್ಯಗಳಾಗಿದ್ದರೆ, ಮತ್ತೆ ಕೆಲವು ಅಕ್ಕಪಕ್ಕದ ರಾಜ್ಯಗಳಲ್ಲಿ ಸೇರಿಹೋಗಿವೆ ಮತ್ತು ಕೆಲವು ಕೇಂದ್ರಾಡಳಿತ ಪ್ರದೇಶಗಳಾಗಿವೆ.

ಮಾನ್ಯರೆ, ಈ ಬದಲಾವಣೆಗಳು ಸಂವಿಧಾನ ರಚನಾಸಭೆಯಲ್ಲಿನ ರಾಜ್ಯಗಳ ಪ್ರಾತಿನಿಧ್ಯದ ಮೇಲೆ ಮೂಲಭೂತ ಪರಿಣಾಮವನ್ನುಂಟುಮಾಡಿವೆ. ಇದರಿಂದಾಗಿ, ಕೆಲವು ರಾಜ್ಯಗಳ ಪಂಗಡವನ್ನು ಪುನರ್ವಿಂಗಡಣೆ ಮಾಡುವುದು ಮತ್ತು ಅವುಗಳ ನಡುವೆ ಸ್ಥಾನಗಳ ಹೊಂದಾಣಿಕೆಯನ್ನು ಮಾಡುವುದು ಅಗತ್ಯವಾಗಿದೆ.

ಅಲ್ಲದೆ, ಚುನಾವಣೆಗಳನ್ನು ನಡೆಸುವ ಸಲುವಾಗಿ ಈಗ ನೇಮಿಸಿರುವ ಸಂಚಾಲಕರನ್ನೂ ಬದಲಾಯಿಸಬೇಕು. ಇದಕ್ಕಾಗಿ ನಾವು ಸಂವಿಧಾನ ರಚನಾಸಭೆಯ ಕೆಲವು ನಿಯಮಗಳಿಗೆ ತಿದ್ದುಪಡಿಯನ್ನು ಮಾಡಬೇಕು. ಈ ಎಲ್ಲ ವಿಷಯಗಳನ್ನೂ ಗೌರವಾನ್ವಿತ ಸಭಾಧ್ಯಕ್ಷರು, ರಾಜ್ಯಗಳ ಮಂತ್ರಿಗಳು, ರಾಜಪ್ರಮುಖರು, ಕೇಂದ್ರಾಡಳಿತ ಮತ್ತು ಇತರ ರಾಜ್ಯಗಳ ಸಂಬಂಧಪಟ್ಟ ಉನ್ನತ ವ್ಯಕ್ತಿಗಳು, ಮೇಲೆ ಹೇಳಿದ ಪರಿಣಾಮದಿಂದ ಪೀಡಿತರಾಗಿರುವ ಹಲವು ಪ್ರಾಂತ್ಯಗಳ ಮುಖ್ಯಸ್ಥರೂ, ಹಾಗೂ ಸಂವಿಧಾನ ರಚನಾಸಭೆಯ ಸಚಿವಾಲಯದ ಅಧಿಕಾರಿಗಳು ಮತ್ತು ರಾಜ್ಯಗಳ ಸಚಿವಾಲಯದ ಅಧಿಕಾರಿಗಳು ಸೇರಿದ್ದ ಸಭೆಯಲ್ಲಿ ಪರಿಗಣಿಸಲಾಯಿತು. ಆ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ಸಂವಿಧಾನ ರಚನಾಸಭೆಯ ನಿಯಮಗಳಲ್ಲಿ ಅಳವಡಿಸುವುದನ್ನು ಈ ತಿದ್ದುಪಡಿಗಳಲ್ಲಿ ಪ್ರಸ್ತಾವಿಸಲಾಗಿದೆ.

ಮಾನ್ಯರೆ, ಈಗ ಈ ನಿಲುವಳಿಯಲ್ಲಿ ಉದ್ದೇಶಿಸಿರುವ ಬದಲಾವಣೆಗಳಲ್ಲಿನ ಪ್ರಮುಖ ಲಕ್ಷಣವೆಂದರೆ, ಹೊಸದಾಗಿ ರಚಿಸಲ್ಪಟ್ಟ ರಾಜ್ಯಗಳ ಕೂಟಗಳ ಅಥವಾ ಸಂಯುಕ್ತ ರಾಜ್ಯಗಳ – ಉದಾ. ಸಂವಿಧಾನದಲ್ಲಿ ಪ್ರತ್ಯೇಕ ಪ್ರಾತಿನಿಧ್ಯವನ್ನು ನೀಡಿರುವ ಕಛ್ ಮತ್ತು ಜುನಾಗಡ್‌ಗಳು – ಖಾಲಿ ಇರುವ ಸ್ಥಾನಗಳಿಗೆ ತಮ್ಮ ಪ್ರತಿನಿಧಿಗಳನ್ನು ಆಯಾ ರಾಜ್ಯದ ಚುನಾಯಿತ ಶಾಸಕರಿಂದ, ಅಥವಾ ಅಂತಹ ಚುನಾಯಿತ ವಿಧಾನಸಭೆ ಇರದಿದ್ದ ಪಕ್ಷದಲ್ಲಿ, ಸೂಕ್ತವಾದ ಇತರ ಚುನಾವಣಾ ಸಮುದಾಯದಿಂದ ಆಯ್ಕೆಯನ್ನು ಮಾಡಬಹುದು. ಹಳೆಯ ನಿಯಮಗಳ ಪ್ರಕಾರ, ಕೆಲವು ಸ್ಥಾನಗಳನ್ನು ನಾಮನಿರ್ದೇಶನದ ಮೂಲಕ ಭರ್ತಿ ಮಾಡಬಹುದು. ಮಾನ್ಯರೆ, ಇಲ್ಲಿ ಮಾಡಲಾಗಿರುವ ಬದಲಾವಣೆಗಳು ತಮಗೆ ಈಗಾಗಲೇ ತಿಳಿದಿರುವುದರಿಂದ, ಈ ವಿಷಯವನ್ನು ಇನ್ನಷ್ಟು ವಿಸ್ತರಿಸಲು ನಾನು ಬಯಸುವುದಿಲ್ಲ. ಈಗ ನಾನು ನನ್ನ ಪ್ರಸ್ತಾವವನ್ನು ಸದನದ ಮುಂದೆ ಮಂಡಿಸಬಯಸುತ್ತೇನೆ. ಮಾನ್ಯರೆ, ಪ್ರಸ್ತಾವವನ್ನು ಮಂಡಿಸಿದ್ದೇನೆ.

**ಮಾನ್ಯ ಅಧ್ಯಕ್ಷರು** : ಈ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ಕೆಲವೊಂದು ತಿದ್ದುಪಡಿಗಳು ನನ್ನ ಬಳಿಗೆ ಬಂದಿವೆ. ಶ್ರೀ ಕಾಮತ್ ಅವರೇ, ನೀವು ಮಂಡಿಸಬೇಕು.

**ಶ್ರೀ ಎಚ್.ವಿ. ಕಾಮತ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ನಾನು ಮಂಡಿಸುತ್ತೇನೆ.

> "ಅನುಸೂಚಿಯ ಮೂರನೆಯ ಕಂಡಿಕೆಯ ಅಡಿಯಲ್ಲಿನ ಉಪ–ಪರಿಚ್ಛೇದ (೧)ರಲ್ಲಿರುವ 'ಸಂವಿಧಾನ ಮಂಡಲಿಯಲ್ಲಿ ಮಾಡಿರುವ ಬಿಡಿಯಾದ ರಾಜ್ಯಗಳಿಗೆ ಅಥವಾ ರಾಜ್ಯಗಳ ಕೂಟಕ್ಕೆ' ಎಂಬ ಪದಗಳಿಗೆ ಬದಲಾಗಿ 'ಸಂವಿಧಾನ ಸಭೆಯಲ್ಲಿ, ರಾಜ್ಯಗಳಿಗೆ – ಅವು ಬಿಡಿಯಾಗಿರಲಿ ಅಥವಾ ಒಂದು ಕೂಟಕ್ಕೆ ಸೇರಿರಲಿ' ಎಂಬ ಪದಗಳನ್ನು ಸೇರಿಸಿಕೊಳ್ಳಬೇಕು."

ಅಂದರೆ, ಈ ತಿದ್ದುಪಡಿಯನ್ನು ಒಪ್ಪಿಕೊಂಡರೆ, ಪ್ರಸ್ತಾವವು ಈ ರೀತಿ ಇರುತ್ತದೆ: ಈಗ ಪ್ರಸ್ತಾವವು ಈ ರೀತಿ ಇದೆ – ರಾಜ್ಯಗಳಿಗೆ ಪ್ರತ್ಯೇಕವಾಗಿ ಅಥವಾ ಒಂದು ಕೂಟವಾಗಿ ಪ್ರಾತಿನಿಧ್ಯವನ್ನು 'ಸಂವಿಧಾನ ಮಂಡಲಿಯಲ್ಲಿ ನೀಡಿದಾಗ'. ಇದಕ್ಕೆ ಬದಲಾಗಿ ತಿದ್ದುಪಡಿಗೆ ಒಳಗಾದರೆ ಪ್ರಸ್ತಾವವು 'ಸಂವಿಧಾನ ಮಂಡಲಿಯಲ್ಲಿ ರಾಜ್ಯಗಳಿಗೆ, ಪ್ರತ್ಯೇಕವಾಗಿ ಅಥವಾ ಒಂದು ಕೂಟವಾಗಿ ಪ್ರಾತಿನಿಧ್ಯವನ್ನು ನೀಡಿದಾಗ' ಎಂದಾಗುತ್ತದೆ. ನಾನು ಇದರ ಬಗ್ಗೆ ವಿಸ್ತೃತವಾಗಿ ಮಾತನಾಡುವ ಆವಶ್ಯಕತೆಯಿದೆಯೆಂದು ನನಗೆ ಎನಿಸುವುದಿಲ್ಲ. ಈ ಕಂಡಿಕೆ ನೀಡಲು ಉದ್ದೇಶಿಸಿರುವ ಸಂದೇಶವು ನನ್ನ ತಿದ್ದುಪಡಿಯ ಮೂಲಕ ಸ್ಪಷ್ಟತೆಯನ್ನು ಪಡೆದುಕೊಳ್ಳುತ್ತದೆ. ರಾಜ್ಯಗಳು ಒಟ್ಟುಗೂಡಿ ಕೂಟವಾಗಿರುವುದು ಸಂವಿಧಾನ ರಚನಾಸಭೆಯ ಉದ್ದೇಶಕ್ಕಾಗಿ ಅಲ್ಲ. ಆದ್ದರಿಂದ ಅದು 'ಸಂವಿಧಾನ ಸಭೆಯಲ್ಲಿ ರಾಜ್ಯಗಳಿಗೆ ಪ್ರಾತಿನಿಧ್ಯವನ್ನು ನೀಡಿದಾಗ' ಎಂದಾಗಬೇಕು. ಇದು ಮೊದಲನೆಯ ತಿದ್ದುಪಡಿ.

ಮಾನ್ಯರೆ, ಎರಡನೆಯ ತಿದ್ದುಪಡಿ ಹೀಗಿದೆ:

"ಅನುಸೂಚಿಯ ಮೂರನೆಯ ಪರಿಚ್ಛೇದದ ಉಪ-ಪರಿಚ್ಛೇದ (೩)ರಲ್ಲಿ 'ಖಾಲಿಯಾಗಿದೆ ಎಂದು ಘೋಷಿಸಲಾಗಿದೆ' ಎಂಬ ಪದಗಳಿಗೆ ಬದಲಾಗಿ 'ಖಾಲಿಯಾಗಿದೆಯೆಂದು ಘೋಷಿಸಲ್ಪಟ್ಟಿರುವ' ಎಂಬ ಪದಗಳನ್ನು ಸೇರಿಸಬೇಕು."

ಹೇಳಬಹುದಾದರೆ, ಈ ತಿದ್ದುಪಡಿಯು ಕೇವಲ ಭಾಷಿಕವಾದುದು. ಒಂದು ಸ್ಥಾನವು ಖಾಲಿಯಾದ ನಂತರ ಉದ್ಭವಿಸುವ ಪರಿಸ್ಥಿತಿಗೆ ಇದು ಅನ್ವಯವಾಗುತ್ತದೆ ಎಂದೆನಿಸುತ್ತದೆ. 'ಒಂದು ಸ್ಥಾನವು ಖಾಲಿಯಾಗಿದೆಯೆಂದು ಘೋಷಿಸಲ್ಪಟ್ಟಾಗ' ಎಂಬ ಪದಗಳು ಸರಿಯಾಗಿವೆ ಮತ್ತು ಹೆಚ್ಚು ಸೂಕ್ತವಾಗಿವೆ.

ಆದ್ದರಿಂದ, ಮಾನ್ಯರೆ, ನಾನು ಈಗ ಈ ತಿದ್ದುಪಡಿಯನ್ನು ಒಪ್ಪಿಗೆಗಾಗಿ ಸದನದ ಮುಂದೆ ಮಂಡಿಸುತ್ತಿದ್ದೇನೆ. ನಾನು ಈ ಪ್ರಸ್ತಾವದ ಮೇಲೆ ಮಾತನಾಡಬಯಸುತ್ತೇನೆ. ಅಪ್ಪಣೆಯಿದೆಯೇ?

**ಮಾನ್ಯ ಸಭಾಧ್ಯಕ್ಷರು** : ಆಗಬಹುದು.

**ಶ್ರೀ ಎಚ್.ವಿ. ಕಾಮತ್** : ಮಾನ್ಯರೆ, ಈ ಪ್ರಸ್ತಾವದಿಂದ ಉದ್ಭವವಾಗಿರುವ ಕೆಲವು ಅಂಶಗಳ ಬಗ್ಗೆ ಪ್ರಸ್ತಾವವನ್ನು ಮಂಡಿಸಿದ ನನ್ನ ಮಾನ್ಯ ಮಿತ್ರರಾದ ಶ್ರೀಮತಿ ದುರ್ಗಾಬಾಯಿಯವರಿಂದ ವಿವರಣೆಯನ್ನು ಬಯಸುತ್ತೇನೆ. ಮಾನ್ಯರೆ, ಈ ಮಂಡಲಿಯ ಒಟ್ಟು ಸದಸ್ಯರ ಸಂಖ್ಯೆ ೩೨೪. ಆದರೆ, ವಾಸ್ತವವಾಗಿ ಇರುವ ಸದಸ್ಯರ ಸಂಖ್ಯೆ ೩೦೩. ಹೈದರಾಬಾದ್, ಕಾಶ್ಮೀರ ಮತ್ತು ಭೂಪಾಲ ರಾಜ್ಯಗಳನ್ನು ಪ್ರತಿನಿಧಿಸಬೇಕಾದ ಸದಸ್ಯರು ನಮ್ಮೊಂದಿಗೆ ಇಲ್ಲ. ಉಳಿದ ೩೦೩ ಸದಸ್ಯರಲ್ಲಿಯೂ ಕೂಡ, ಪಾಟಿಯಾಲ ಮತ್ತು ಪೂರ್ವ ಪಂಜಾಬ್ ರಾಜ್ಯಗಳು ತಮ್ಮ ಪ್ರತಿನಿಧಿಗಳನ್ನು ಚುನಾಯಿಸಿಲ್ಲ ಎಂಬ ಸುದ್ದಿಯನ್ನು ನಿನ್ನೆಯ ಪತ್ರಿಕೆಗಳು ನಮಗೆ ತಿಳಿಸಿವೆ. ಸಂವಿಧಾನ ರಚನಾ ಸಭೆಯ ಬಹಳ ಮುಖ್ಯವಾಗಿರುವ ಈ ಕೊನೆಯ ಅಧಿವೇಶನದಲ್ಲಿ ಈ ರಾಜ್ಯಗಳಿಗೆ ಅಥವಾ ರಾಜ್ಯಗಳ ಕೂಟಗಳಿಗೆ ಪ್ರಾತಿನಿಧ್ಯವು ದೊರೆತಿಲ್ಲದಿರುವಂತಹ ಪರಿಸ್ಥಿತಿಯು ಏಕೆ ಮುಂದುವರಿಯುತ್ತಿದೆ ಎಂಬುದು ನನಗೆ ತಿಳಿಯುತ್ತಿಲ್ಲ. ಕಾಶ್ಮೀರಕ್ಕೆ ಸಂಬಂಧಿಸಿದಂತೆ ಕೆಲವು ಸಮಸ್ಯೆಗಳಿವೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಹೈದರಾಬಾದ್ ರಾಜ್ಯವು ಈಗ ಅನುಬಂಧದ ಮೊದಲನೆಯ ಭಾಗದಲ್ಲಿ ಉಲ್ಲೇಖಿತವಾಗಿರುವುದರಿಂದ ಅದು ರಾಜ್ಯಗಳ ಪಟ್ಟಿಯಲ್ಲಿ ಅಗ್ರಸ್ಥಾನವನ್ನು ಹೊಂದಿರುತ್ತದೆ. ಹೈದರಾಬಾದಿನ ಆಡಳಿತಗಾರರನ್ನು ಅಥವಾ ಅಲ್ಲಿಂದ ಚುನಾಯಿತರಾದ ಅಥವಾ ನಾಮಕರಣಗೊಂಡ ಸದಸ್ಯರನ್ನು ಆ ರಾಜ್ಯವನ್ನು ಪ್ರತಿನಿಧಿಸುವಂತೆ ನಾವು ಅವರಿಗೆ ಆದಷ್ಟು ಬೇಗ ಏಕೆ ತಿಳಿಸಬಾರದು ಎಂಬುದಕ್ಕೆ ಕಾರಣಗಳು ನನಗೆ ಕಾಣಿಸುತ್ತಿಲ್ಲ. ಇತ್ತೀಚೆಗೆ ನಡೆದ ಘಟನೆಗಳಿಂದ, ಹೈದರಾಬಾದಿನ ಪ್ರಕರಣವು ಸುಖಾಂತವಾಗಿ ಕೊನೆಗೊಂಡಿದೆ ಎಂದು ನಾನು ಹೇಳಿದಾಗ ಈ ಸದನವು ಕೂಡ ಅದಕ್ಕೆ ಸಮ್ಮತಿಸುತ್ತದೆ ಎಂದು ನಾನು ಭಾವಿಸುತ್ತೇನೆ. ಈ ಸಮಸ್ಯೆಯು ಸುಖಕರವಾಗಿ ಬಗೆಹರಿದಿರುವುದರಿಂದ ಹೈದರಾಬಾದಿನ ನಮ್ಮ ಸ್ನೇಹಿತರನ್ನು ಈ ಮಂಡಲಿಯ ಸದಸ್ಯರನ್ನಾಗಿ ಸ್ವಾಗತಿಸಬೇಕೆಂದು ನಾವು ಬಯಸುತ್ತೇವೆ. ಭೂಪಾಲಿಗೆ ಸಂಬಂಧಿಸಿದಂತೆ ಇರುವ ತೊಂದರೆಗಳು ಯಾವುವು, ಅವರ ದಾರಿಯಲ್ಲಿರುವ ಅಡೆತಡೆಗಳು ಯಾವುವು, ಯಾವ ತಡೆಗೋಡೆಯನ್ನು ನಾವು ಮೀರಿ ನಡೆಯಬೇಕು ಎಂಬುದು ನನಗೆ ತಿಳಿಯುತ್ತಿಲ್ಲ. ನಾನು ನಿಮ್ಮಲ್ಲಿ ಕೋರುವುದು ಏನೆಂದರೆ, ಭೂಪಾಲಿನ ಆಡಳಿತ ವರ್ಗದವರು ಆದಷ್ಟು ಶೀಘ್ರದಲ್ಲಿಯೇ ತಮ್ಮ ಪ್ರತಿನಿಧಿಗಳನ್ನು ಈ ಸಭೆಗೆ ಕಳುಹಿಸಿಕೊಡಬೇಕೆಂಬ ಮತ್ತು ಈ ವಿಷಯದಲ್ಲಿ ಇನ್ನೂ ವಿಳಂಬ ಮಾಡಬಾರದೆಂಬ ವಿನಂತಿಯನ್ನು ಅವರಿಗೆ ಕಳುಹಿಸಬೇಕು.

ಮಾನ್ಯರೆ, ನಿನ್ನೆಯ ಪತ್ರಿಕೆಗಳಲ್ಲಿ ಪಾಟಿಯಾಲ ಮತ್ತು ಪೂರ್ವ ಪಂಜಾಬ್‌ಗಳನ್ನು ಕುರಿತು ಬಂದಿರುವ ವರದಿಗಳು ಸ್ಪಷ್ಟವಾಗಿಲ್ಲ. ಅದರಲ್ಲಿ ಅಲ್ಲಿನ ಆಡಳಿತಗಾರರ ವಿರುದ್ಧ ಎಲ್ಲ ಬಗೆಯ ಆರೋಪಗಳನ್ನೂ ಮಾಡಲಾಗಿದೆ. ಅದು ಹೇಗಾದರೂ ಇರಲಿ, ಸಂವಿಧಾನ ರಚನಾಸಭೆಯ ಅಂತಿಮ ಅಧಿವೇಶನಕ್ಕೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸಿಕೊಡಬೇಕೆಂದು ನಾವು ಪಾಟಿಯಾಲ ಮತ್ತು ಪೂರ್ವ ಪಂಜಾಬ್ ರಾಜ್ಯಗಳ ಕೂಟಕ್ಕೆ ತುರ್ತಾಗಿ ವಿನಂತಿಸಿಕೊಳ್ಳಬೇಕಾಗಿದೆ.

ಮತ್ತೊಂದು ವಿಷಯದ ಬಗ್ಗೆ ತಮ್ಮ ಗಮನವನ್ನು ಸೆಳೆಯಬೇಕಾಗಿದೆ. ಹಿಂದಿನ ಸಭೆಗಳಲ್ಲಿ ನಾವು ರೂಪಿಸಿದ ನಿಯಮಗಳಲ್ಲಿನ ೫ನೆಯ ನಿಯಮದ ಉಪನಿಯಮ (೨)ನ್ನು ಕುರಿತು ನಾನು ಮಾತನಾಡುತ್ತಿದ್ದೇನೆ. ಅದು ಹೀಗಿದೆ: "ಒಂದು ಸ್ಥಾನವು ಖಾಲಿಯಾದಾಗ, ಸಭಾಧ್ಯಕ್ಷರು ಸಂದರ್ಭಕ್ಕೆ ತಕ್ಕಂತೆ ಸಂಬಂಧಪಟ್ಟ ಪ್ರಾಂತೀಯ ಶಾಸನಸಭೆಯ ಅಧ್ಯಕ್ಷರಿಗೆ, ಅಥವಾ ಕೊಡಗಿನ ಪರಿಷತ್ತಿಗೆ ಖಾಲಿಯಾಗಿರುವ ಸ್ಥಾನವನ್ನು ಸಾಧ್ಯವಾದಷ್ಟು ಶೀಘ್ರವಾಗಿ ತುಂಬುವಂತೆ ಲಿಖಿತ ವಿನಂತಿಯನ್ನು ಕಳುಹಿಸತಕ್ಕದ್ದು". ಒಂದನೆಯ ಅನುಬಂಧದ ಮೊದಲ ಭಾಗದಲ್ಲಿ ನಮೂದಿಸಲ್ಪಟ್ಟಿರುವ ಕೆಲವು ರಾಜ್ಯಗಳಿವೆ. ಅವುಗಳಲ್ಲಿ ದೊಡ್ಡ ರಾಜ್ಯವಾದ ಮೈಸೂರು ರಾಜ್ಯವೂ ಇದ್ದು, ಅದು ಈಗಾಗಲೇ ತನ್ನ ಪ್ರತಿನಿಧಿಯನ್ನು ಈ ಸಭೆಗೆ ಕಳುಹಿಸಿದೆ. ಅದರ ಹಾಗೆಯೇ ಇತರ ಯಾವ ರಾಜ್ಯದಲ್ಲಿ ಚುನಾಯಿತ ಶಾಸನಸಭೆಯಿದೆಯೆಂದು ನಿರ್ದಿಷ್ಟವಾಗಿ ಹೇಳಲು ನಾನು ಈ ಕ್ಷಣದಲ್ಲಿ ಅಸಮರ್ಥನಾಗಿದ್ದರೂ, ಇಲ್ಲಿನ ಸದಸ್ಯರ ಸ್ಥಾನವು ಖಾಲಿಯಾದಾಗ, ಆಯಾ ರಾಜ್ಯಗಳ ರಾಜರಿಗೆ ಬದಲಾಗಿ ಇನ್ನು ಮುಂದಾದರೂ ಅಲ್ಲಿನ ಶಾಸನಸಭೆಯ ಸಭಾಧ್ಯಕ್ಷರಿಗೆ, ತಮ್ಮ ಪ್ರತಿನಿಧಿಯನ್ನು ಕಳುಹಿಸಿಕೊಡಬೇಕೆಂದು ಪತ್ರವನ್ನು ಏಕೆ ಬರೆಯಬಾರದು ಎಂಬುದು ನನಗೆ ತಿಳಿಯುತ್ತಿಲ್ಲ. ಈಗಿರುವ ೫–ಎ ನಿಯಮವು ಆಯಾ ರಾಜ್ಯದ ರಾಜರನ್ನು ಸದರಿ ರಾಜ್ಯದಲ್ಲಿನ ಅಧಿಕೃತ ಅಧಿಕಾರಿಯೆಂದು ಪರಿಗಣಿಸಬೇಕೆಂದು ಹೇಳುತ್ತದೆ ಎಂದು ವಾದಿಸಬಹುದು. ಆದರೆ, ನಾವು ನಿಯಮಗಳಿಗೆ ತಿದ್ದುಪಡಿಯನ್ನು ಮಾಡುತ್ತಿರುವ ಈ ಸಂದರ್ಭದಲ್ಲಿ, ಈ ನಿಯಮಗಳು ಪ್ರಜಾಪ್ರಭುತ್ವದ ನೀತಿಗಳಿಗೆ ಅನುಗುಣವಾಗಿರುವಂತೆ ಅವುಗಳಿಗೂ ಏಕೆ ತಿದ್ದುಪಡಿಯನ್ನು ಮಾಡಬಾರದು? ಆದ್ದರಿಂದ, ಶಾಸನಸಭೆಗಳಿರುವ ರಾಜ್ಯಗಳ ವಿಷಯದಲ್ಲಿ, ಅವುಗಳ ರಾಜರುಗಳ ಬದಲಿಗೆ ಶಾಸನಸಭೆಯ ಸಭಾಧ್ಯಕ್ಷರನ್ನು ಅಧಿಕೃತ ಅಧಿಕಾರಿಯೆಂದು ನಾವು ಏಕೆ ಪರಿಗಣಿಸಬಾರದು ಎಂದು ನಾನು ನಮ್ಮ ಮಾನ್ಯ ಮಿತ್ರರಾದ ಶ್ರೀಮತಿ ದುರ್ಗಾಬಾಯಿಯವರನ್ನು ಕೇಳಿಕೊಳ್ಳುತ್ತೇನೆ. ಈ ವಿಷಯದಲ್ಲಿ ಇನ್ನಷ್ಟು ಬೆಳಕನ್ನು ಚೆಲ್ಲಬೇಕೆಂದು ಪ್ರಸ್ತಾವವನ್ನು ಮಂಡಿಸಿರುವ ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಮಾನ್ಯರೆ, ನಾನು ಕುಳಿತುಕೊಳ್ಳುವ ಮೊದಲು ನನ್ನ ಈ ಎರಡು ತಿದ್ದುಪಡಿಗಳನ್ನು ಈ ಸದನದ ಅನುಮತಿಗಾಗಿ ಅದರ ಮುಂದೆ ಮಂಡಿಸುತ್ತಿದ್ದೇನೆ. ವಂದನೆಗಳು, ಮಾನ್ಯರೆ.

**ಮಾನ್ಯ ಸಭಾಧ್ಯಕ್ಷರು** : ಶ್ರೀ ಸಿಧ್ವಾ.

**ಶ್ರೀ ಆರ್.ಕೆ. ಸಿಧ್ವಾ** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ನನ್ನ ತಿದ್ದುಪಡಿಯು ಹೀಗಿದೆ:

"ಅನುಸೂಚಿಯ ಉದ್ದೇಶಿತ ೪ನೆಯ ಪರಿಚ್ಛೇದದ ಉಪ–ಪರಿಚ್ಛೇದ (೧)ರಲ್ಲಿನ 'ಶೇ. ೫೦ಕ್ಕಿಂತ ಕಡಿಮೆಯಿಲ್ಲದ' ಎಂಬ ಪದಗಳನ್ನು ಕೈಬಿಡಬೇಕು ಮತ್ತು 'ಒಟ್ಟು ಸದಸ್ಯರು' ಎಂಬ ಪದಗಳಿಗೆ ಬದಲಾಗಿ 'ಸದಸ್ಯರ ಒಟ್ಟು ಸಂಖ್ಯೆ' ಎಂಬ ಪದಗಳನ್ನು ಸೇರಿಸಿಕೊಳ್ಳಬೇಕು."

ನಮ್ಮ ಸಂವಿಧಾನ ಪದ್ಧತಿಯಲ್ಲಿ ನಾಮನಿರ್ದೇಶನದ ವಿಧಾನವನ್ನು ಕೈಬಿಟ್ಟಿರುವ ಕಾರಣದಿಂದ, ರಾಜ್ಯಗಳು, ಅದರಲ್ಲಿಯೂ ವಿಶೇಷವಾಗಿ ಅವುಗಳ ರಾಜರು ಶೇ. ೫೦ರಷ್ಟು ಸದಸ್ಯರನ್ನು ನಾಮನಿರ್ದೇಶನದ ಮಾಡುವುದು ಸೂಕ್ತವಲ್ಲವೆಂಬುದು ನನ್ನ ತಿದ್ದುಪಡಿಯ ಉದ್ದೇಶ. ಆದ್ದರಿಂದ, ಈ ಉದ್ದೇಶವನ್ನು ದೃಷ್ಟಿಯಲ್ಲಿಟ್ಟುಕೊಂಡು ಹಾಗೂ ನಾಮಕರಣದ ವಿಧಾನವನ್ನು ತ್ಯಜಿಸುವ ನಮ್ಮ ತೀರ್ಮಾನಕ್ಕೆ ಅನುಗುಣವಾಗಿ ಇದನ್ನೂ ಕೈಬಿಡಬೇಕೆಂದು ನಾನು ಸಲಹೆಯನ್ನು ಮಾಡುತ್ತಿದ್ದೇನೆ. ಆದರೆ, ರಾಜ್ಯ ಅಥವಾ ರಾಜ್ಯಗಳ ರಾಜರು ಮತ್ತು ಅಲ್ಲಿನ ಜನತೆಯ ನಡುವೆ ಈಗಿರುವ ಪದ್ಧತಿಯು ಮುಂದುವರಿಯಬೇಕೆಂದು ಒಪ್ಪಂದವನ್ನು ಮಾಡಿಕೊಂಡಿದ್ದಾರೆಂಬುದನ್ನು ನಾನು ಕೇಳಿದ್ದೇನೆ. ಹಾಗಿದ್ದರೂ, ಅಲ್ಲಿನ ಪ್ರತಿನಿಧಿಗಳನ್ನು ಅಲ್ಲಿನ ಜನತೆಯೇ ಆಯ್ಕೆಮಾಡುತ್ತದೆ ಎಂಬುದು ಕೂಡ ಕೇಳಿಬಂದಿದೆ. ನಾನು ತಿಳಿದಿರುವಂತೆ ಇದು ವಾಸ್ತವವಾಗಿದ್ದರೆ, ನಾನು ನನ್ನ ತಿದ್ದುಪಡಿಯನ್ನು ಮಂಡಿಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು :** ನೀವು ತಿದ್ದುಪಡಿಯನ್ನು ಮಂಡಿಸುತ್ತಿದ್ದೀರೋ ಅಥವಾ ಇಲ್ಲವೋ?

**ಶ್ರೀ ಆರ್.ಕೆ. ಸಿಧ್ವಾ :** ಇಲ್ಲ ಮಾನ್ಯರೆ, ನಾನು ತಿದ್ದುಪಡಿಯನ್ನು ಮಂಡಿಸುತ್ತಿಲ್ಲ.

**ಮಾನ್ಯ ಸಭಾಧ್ಯಕ್ಷರು :** ಈ ನಿಲುವಳಿಗೆ ಸಂಬಂಧಿಸಿದಂತೆ ನನ್ನ ಬಳಿಗೆ ಬಂದಿದ್ದ ತಿದ್ದುಪಡಿಗಳೆಲ್ಲವನ್ನು ಮಂಡಿಸಲಾಗಿದೆ. ಇಲ್ಲಿರುವ ಒಬ್ಬ ಸದಸ್ಯರು ಇಂದಿನ ಸಭೆಯ ಕಾರ್ಯಸೂಚಿ ಮತ್ತು ತಿದ್ದುಪಡಿಗಳು ತಮಗೆ ದೊರೆತಿಲ್ಲವೆಂದೂ, ಅದರಿಂದ ತಾವು ಬಯಸಿರುವ ತಿದ್ದುಪಡಿಯನ್ನು ಮಂಡಿಸಲಾಗಲಿಲ್ಲವೆಂದೂ, ಹೀಗಾಗಿ ಈ ವಿಷಯದ ಮೇಲಿನ ಚರ್ಚೆಯನ್ನು ಮುಂದೂಡಬೇಕೆಂದು ಬಯಸಿದ್ದಾರೆ. ನನಗೆ ಕಚೇರಿಯಿಂದ ದೊರೆತಿರುವ ಮಾಹಿತಿಯ ಪ್ರಕಾರ, ಕಚೇರಿಯವರು ಕೆಲವು ದಿನಗಳ ಹಿಂದೆ ಸದಸ್ಯರು ಕಚೇರಿಗೆ ನೀಡಿರುವ ವಿಳಾಸಕ್ಕೆ ಸಂಬಂಧಪಟ್ಟ ಕಾರ್ಯಸೂಚಿ ಮತ್ತು ಇತರ ಕಾಗದಪತ್ರಗಳನ್ನು ರವಾನಿಸಿದ್ದಾರೆ ಮತ್ತು, ಕಾರಣಾಂತರಗಳಿಂದ ಅವು ಸದರಿ ಸದಸ್ಯರಿಗೆ ದೊರೆತಿಲ್ಲ. ಆದ ಕಾರಣ, ಈಗ ಅವರಿಗೆ ಸಭೆಯ ಕಾರ್ಯಸೂಚಿಯ ಇನ್ನೊಂದು ಪ್ರತಿಯನ್ನು ನೀಡಲಾಗಿದೆ. ಆದರೆ ಕಾರ್ಯಸೂಚಿ ಹಾಗೂ ಇತರ ಕಾಗದಪತ್ರಗಳನ್ನು ಸದಸ್ಯರುಗಳಿಗೆ ನೀಡಿಯೇ ಇಲ್ಲವೆಂದು ಇದರ ಅರ್ಥವಲ್ಲ. ಸದರಿ ಸದಸ್ಯರಿಗೆ ಇನ್ನೊಂದು ಪ್ರತಿಯನ್ನು ಇಂದು ಕೊಡಲಾಗಿದೆ. ನಾವು ಚರ್ಚಿಸುತ್ತಿರುವ ನಿಯಮಗಳ ಮೇಲೆ ನಾವೀಗಾಗಲೇ ಚರ್ಚೆಯನ್ನು ನಡೆಸಿದ್ದು, ಈ ಅಧಿವೇಶನದ ಅನಂತರ ಮತ್ತೆ ಇದರ ಮೇಲಿನ ಚರ್ಚೆಯನ್ನು ಮುಂದುವರಿಸುವುದಿಲ್ಲವಾದ ಕಾರಣ, ಸದ್ಯದ ಚರ್ಚೆಯನ್ನು ಮುಂದೂಡಲು ಅಗತ್ಯವಾಗಿರುವ ಕಾರಣವಿದೆಯೆಂದು ನನಗೆ ಎನಿಸುವುದಿಲ್ಲ.

**ಶ್ರೀ ಮೋಹನ್‌ಲಾಲ್ ಗೌತಮ್** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ): *[ತಮ್ಮ ಆದೇಶವನ್ನು ಪಾಲಿಸಲು ನನಗೆ ಯಾವ ಆಕ್ಷೇಪಣೆಯೂ ಇಲ್ಲ. ಆದರೆ, ತಮಗೆ ಕಚೇರಿಯವರು ನೀಡಿರುವ ಮಾಹಿತಿಯು ತಪ್ಪು ಎಂಬುದನ್ನು ನಿವೇದಿಸಲು ನಾನು ಇಚ್ಛಿಸುತ್ತೇನೆ. ಕಾರ್ಯಸೂಚಿಯ ಹಲವು ಸದಸ್ಯರಿಗೆ ದೊರೆತಿಲ್ಲ. ನನಗೊಬ್ಬನಿಗಷ್ಟೇ ಅಲ್ಲದೆ, ಇಲ್ಲಿ ಹಾಜರಿರುವ ಇಬ್ಬರು–ಮೂವರು ಸದಸ್ಯರಿಗೂ ಅದು ದೊರೆತಿಲ್ಲ. ನಾನು ವರ್ಷಪೂರ್ತಿಯ ಹಣವನ್ನು ಮುಂಗಡವಾಗಿ ಕಟ್ಟಿದ್ದರೂ ನನ್ನ ದೂರವಾಣಿಯ ಸಂಪರ್ಕವನ್ನು ಕಡಿತ ಮಾಡಿದ್ದಾರಾದ್ದರಿಂದ, ನನ್ನ ತೊಂದರೆ ಮತ್ತಷ್ಟು ಹೆಚ್ಚಾಗಿದೆ. ಇದನ್ನು ಕುರಿತು ನಾನು ಎರಡು ಬಾರಿ ಸಂಪರ್ಕ ಖಾತೆಯ ಉಪ–ಸಚಿವರನ್ನು ಸಂಪರ್ಕಿಸಿದ್ದೆ, ಆದರೂ, ನನಗೆ ದೂರವಾಣಿ ಸಂಪರ್ಕವನ್ನು ಇನ್ನೂ ನೇರ್ಪುಗೊಳಿಸಿಲ್ಲ. ನಾನು ಇಲ್ಲಿಗೆ ಬಂದಾಗ ಸಂವಿಧಾನ ರಚನಾಸಭೆಯ ಉಪಕಾರ್ಯದರ್ಶಿಯವರಿಗೆ ಬೇರೆಯ ಎಡೆಯಿಂದ ದೂರವಾಣಿಯಲ್ಲಿ ಮಾತನಾಡಿ ನನಗೆ ಕಾರ್ಯಕ್ರಮದ ಪಟ್ಟಿಯು ತಲಪಿಲ್ಲವೆಂದೂ, ಹಾಗೂ ನನ್ನ ದೂರವಾಣಿಯ ಸಂಪರ್ಕವನ್ನು ಇನ್ನೂ ಸರಿಪಡಿಸಿಲ್ಲವೆಂದೂ ತಿಳಿಸಿದೆ. ಇದು ಇಲ್ಲಿನ ಸದಸ್ಯರ ಪರಿಸ್ಥಿತಿ. ನಾನು ಇದರ ವಿರುದ್ಧ ಪ್ರತಿಭಟಿಸುತ್ತೇನೆ. ಇಂತಹ ಪರಿಸ್ಥಿತಿಯನ್ನು ನಾನು ಮಾತ್ರ ಎದುರಿಸಿದ್ದಿದ್ದರೆ ತಾವು ಹೇಳಿದ ಮಾರ್ಗವನ್ನು ಅನುಸರಿಸಬಹುದಿತ್ತು. ಆದರೆ, ಇಲ್ಲಿರುವ ಹಲವು ಸದಸ್ಯರಿಗೆ ಕಾರ್ಯಸೂಚಿಯು ತಲುಪಿಲ್ಲ. ಉಪಸಚಿವರಾದ ಶ್ರೀ ಖುರ್ಷೆದ್ ಲಾಲ್ ಅವರೂ ಅಂತಹವರಲ್ಲಿ ಒಬ್ಬರು. ಅದರ ವಿತರಣೆ ಹೇಗೆ ನಡೆಯಿತು ಎಂಬುದು ನನಗೆ ಗೊತ್ತಿಲ್ಲ ಆದರೆ, ಅವರು ಕೂಡ ತಮಗೆ ಅದು ತಲುಪಲಿಲ್ಲವೆಂದು ದೂರಿದ್ದಾರೆ. ಪೂರ್ತಿ ವರ್ಷಕ್ಕೆ ನೀಡಬೇಕಾದ ಹಣವನ್ನು ನನ್ನಿಂದ ಪಡೆದಿದ್ದರೂ ನನಗೆ ದೂರವಾಣಿಯ ಸಂಪರ್ಕವನ್ನು ಇದುವರೆಗೂ ನೀಡಿಲ್ಲ ಎಂಬ ದೂರನ್ನು ನಾನು ಅವರಿಗೆ ನೀಡಿದ್ದೆ. ತಾವು ನಮ್ಮಂತಹ ಸದಸ್ಯರನ್ನು ಈ ಶೋಚನೀಯ ಪರಿಸ್ಥಿತಿಗೆ ತಂದಿದ್ದೀರಿ. ಕಾರ್ಯಸೂಚಿಯನ್ನು ಕುರಿತು ಹೇಳುವುದಾದರೆ, ಅದರ ಬಗ್ಗೆ ದೂರುತ್ತಿರುವವನು ನಾನೊಬ್ಬನೇ ಅಲ್ಲ. ಹಲವು ಸದಸ್ಯರಿಗೆ ಅದು ದೊರೆತಿಲ್ಲ. ಕಾರ್ಯಸೂಚಿಯಲ್ಲಿ ಕೆಲವು ಮುಖ್ಯವಾದ ಅಂಶಗಳಿವೆ, ಆದ್ದರಿಂದ ಇದಕ್ಕೆ ಪ್ರತಿಭಟನೆಯಾಗಿ ನಾನು ಈ ವಿಷಯದ ಮೇಲಿನ ಚರ್ಚೆಯನ್ನು ಮುಂದೂಡಬೇಕೆಂದು ಆಗ್ರಹಿಸುತ್ತೇನೆ.]*

**ಮಾನ್ಯ ಸಭಾಧ್ಯಕ್ಷರು :** *[ಕಾರ್ಯಸೂಚಿಯ ಪ್ರತಿಗಳನ್ನು ಕಚೇರಿಯಿಂದ ಸದಸ್ಯರಿಗೆ ಕಳುಹಿಸಲಾಗಿದೆ.

ಅದು ಸದಸ್ಯರಿಗೆ ತಲುಪಿತೋ ಅಥವಾ ಇಲ್ಲವೋ ಎಂಬುದು ಶ್ರೀ ಖುರ್ಷೆದ್ ಲಾಲ್ ಅವರು ಉತ್ತರಿಸಬೇಕಾದ ವಿಷಯ. ದೂರವಾಣಿ ಸಂಪರ್ಕವು ಪುನರ್ ಸ್ಥಾಪಿತವಾಯಿತೊ ಇಲ್ಲವೋ ಎಂಬುದನ್ನು ನೋಡಿಕೊಳ್ಳುವುದು ಕೂಡ ಅವರ ಹೊಣೆಗಾರಿಕೆಯೇ ಆಗಿದೆ. ಸದನವನ್ನು ಮುಂದೂಡಲು ಸರಿಯಾದ ಕಾರಣವಿದೆಯೆಂದು ನನಗೆ ತೋರುತ್ತಿಲ್ಲ. ಸದರಿ ಸದಸ್ಯರು ಈ ವಿಷಯದಲ್ಲಿ ಮಾತನಾಡಬೇಕೆಂದು ಬಯಸಿದರೆ ಅವರು ಹಾಗೆ ಮಾಡಬಹುದು.]*

**ಶ್ರೀ ಹುಸೇನ್ ಇಮಾಮ್** (ಬಿಹಾರ್ : ಮುಸ್ಲಿಮ್) : *[ಮಾನ್ಯ ಸದಸ್ಯರಿಂದ ಬಂದ ತಿದ್ದುಪಡಿಗಳನ್ನು ಈಗಲೂ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ತಮಗೆ ಅಧಿಕಾರವಿದೆಯೆಂದು ನಾನು ತಿಳಿಸಬಯಸುತ್ತೇನೆ. ಇದರಿಂದ ಸದಸ್ಯರು ಗೊಣಗುವುದು ತಪ್ಪುತ್ತದೆ.]*

**ಮಾನ್ಯ ಸಭಾಧ್ಯಕ್ಷರು** : *[ನನ್ನ ಬಳಿಗೆ ಯಾವ ತಿದ್ದುಪಡಿಯೂ ಬಂದಿಲ್ಲದಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.]*

**ಶ್ರೀ ಶ್ಯಾಮನಂದನ ಸಹಾಯ** (ಬಿಹಾರ್ : ಸಾಮಾನ್ಯ) : *[ಮಾನ್ಯ ಅಧ್ಯಕ್ಷರೆ, ಅಗತ್ಯವಿದ್ದರೆ, ಈ ತಿದ್ದುಪಡಿಗಳನ್ನು ಪರಿಶೀಲಿಸಬಹುದು. ಆದರೆ ಅದನ್ನು ಮಂಡಿಸಿದವರಿಗೆ ಅದನ್ನು ಕುರಿತು ಮಾತನಾಡಲು ಇಚ್ಛಿಸಿದರೆ ಅವರಿಗೆ ಅವಕಾಶವನ್ನು ನೀಡಬೇಕು....]*

**ಮಾನ್ಯ ಸಭಾಧ್ಯಕ್ಷರು** : *[ತಿದ್ದುಪಡಿಗಳು ನನ್ನ ಬಳಿಗೆ ಬಂದಿದ್ದರೆ, ಅವುಗಳನ್ನು ಸದನದಲ್ಲಿ ಮಂಡಿಸುವ ಅವಕಾಶವನ್ನು ನೀಡುತ್ತಿದ್ದೆ. ಆದರೆ ನನಗೆ ಯಾವ ತಿದ್ದುಪಡಿಯೂ ಬಂದಿಲ್ಲ. ತಿದ್ದುಪಡಿಯನ್ನು ಮಂಡಿಸಲು ಮತ್ತೊಂದು ಅವಕಾಶವು ದೊರೆಯಲಿ ಎಂಬ ಕಾರಣಕ್ಕಾಗಿ ಪ್ರಕೃತ ನಡೆಯುತ್ತಿರುವ ಚರ್ಚೆಯನ್ನು ತಾವು ಮುಂದೂಡಬಯಸುತ್ತಿದ್ದೀರಿ. ಆದರೆ ನನ್ನ ಮುಂದೆ ಈಗ ಒಂದೂ ತಿದ್ದುಪಡಿಯಿಲ್ಲ.]*

**ಶ್ರೀ ಶ್ಯಾಮನಂದನ ಸಹಾಯ** : *[ಮಾನ್ಯ ಸಭಾಧ್ಯಕ್ಷರೆ, ಈ ಸಂದರ್ಭದಲ್ಲಿ, ನೀವು ನೀಡುವ ಆದೇಶಕ್ಕೆ ನಾವೆಲ್ಲರೂ ಬದ್ಧರಾಗಿರಲೇಬೇಕು. ಆದರೆ, ಕಾರ್ಯಸೂಚಿಯು ರವಾನೆಯಾದ ಮೇಲೆ ತಲುಪುವ ಮೊದಲೇ ಕಳೆದುಹೋದರೆ ಸದಸ್ಯರು ಅದನ್ನು ಓದಿ ತಮ್ಮ ಅಭಿಪ್ರಾಯಗಳನ್ನು ರೂಪಿಸಿಕೊಂಡು ಬರಬಹುದೆಂಬ ಅದರ ಮೂಲ ಉದ್ದೇಶಕ್ಕೇ ಧಕ್ಕೆಯಾಗುತ್ತದೆ. ಅದು ತಲುಪುವುದರಲ್ಲಿ ವಿಳಂಬವಾಗಿ, ಕಳುಹಿಸುವುದರಲ್ಲಿ ತಪ್ಪಾಗಿ, ಸದಸ್ಯರ ಕೈಸೇರದಿದ್ದರೆ, ನನ್ನ ಅಭಿಪ್ರಾಯದಲ್ಲಿ ಅದರಲ್ಲಿರುವ ನಿರ್ಣಯವನ್ನು ಅಂದು ಕೈಗೆತ್ತಿಕೊಳ್ಳಲಿ ಅಥವಾ ಇಲ್ಲದಿರಲಿ, ಈ ವಿಷಯವನ್ನು ನಾವು ತೀವ್ರವಾಗಿ ಗಮನಕ್ಕೆ ತಂದುಕೊಳ್ಳುವುದು ಅಗತ್ಯವಾಗಿರುತ್ತದೆ. ತಮ್ಮ ಗಮನವನ್ನು ನಾನು ಈ ಅಂಶದತ್ತ ಸೆಳೆಯಬಯಸುತ್ತೇನೆ.]*

**ಮಾನ್ಯ ಸಭಾಧ್ಯಕ್ಷರು** : *[ಈ ಹಂತದಲ್ಲಿ ಅದು ಅಗತ್ಯವೆಂದು ನನಗೆ ಎನಿಸುತ್ತಿಲ್ಲ. ಪ್ರಕೃತದ ಚರ್ಚೆಯನ್ನು ಮುಂದೂಡಿ, ಈ ವಿಷಯವನ್ನು ಕೈಗೆತ್ತಿಕೊಳ್ಳಬೇಕಾದಷ್ಟು ಗಂಭೀರವಾದ ವಿಷಯವಾಗಿ ಅದು ಕಾಣಿಸುತ್ತಿಲ್ಲ]*

**ಡಾ. ಪಿ.ಎಸ್. ದೇಶ್‌ಮುಖ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ನನಗೂ ಕಾರ್ಯಕ್ರಮದ ಪಟ್ಟಿಯು ಸಕಾಲದಲ್ಲಿ ತಲಪದೆ ಇದ್ದುದರಿಂದ ನನ್ನ ಉಕ್ತಲೇಖನಕಾರನು ಬಂದಿಲ್ಲದೆ ಇದ್ದುದರಿಂದ ನಿರ್ಣಯದಲ್ಲಿನ ವಿವಿಧ ನಿಯಮಗಳಿಗೆ ನನ್ನ ತಿದ್ದುಪಡಿಗಳನ್ನು ಕಳುಹಿಸಲಾಗಲಿಲ್ಲವಾದರೂ, ಈ ಸದನದಲ್ಲಿನ ಕೆಲವು ಮಾನ್ಯ ಸದಸ್ಯರು ಮಾಡಿದ ಹಾಗೆ ನಾನೂ ಈ ವಿಷಯದಲ್ಲಿ ದೂರನ್ನು ಸಲ್ಲಿಸಲು ಇಷ್ಟಪಡುವುದಿಲ್ಲ. ಸದರಿ ನಿಯಮಗಳು ದೀರ್ಘವಾಗಿರುವುದರಿಂದ, ತಿದ್ದುಪಡಿಗಳೂ ಸಹಜವಾಗಿಯೇ ದೀರ್ಘವಾಗಿರುತ್ತವೆ. ನಾನು ನನ್ನ ತಿದ್ದುಪಡಿಗಳನ್ನು ಕಳುಹಿಸಲು ಸಾಧ್ಯವಾಗದುದಕ್ಕೆ ನನ್ನನ್ನು ಕ್ಷಮಿಸಿ. ನಾನು ಈಗ ಮಂಡಿಸಲಿರುವ ಕೆಲವು ತಿದ್ದುಪಡಿಗಳನ್ನು ಪ್ರಸ್ತಾವವನ್ನು ಮಂಡಿಸಿದ ಮಾನ್ಯ ಸದಸ್ಯರು ಗಮನಿಸಬೇಕು ನಾನು ಮಂಡಿಸಲಿರುವ ಮೊದಲ ತಿದ್ದುಪಡಿ ಹೀಗಿದೆ:

"೫-ಎ ನಿಯಮದ ಮೊದಲ ಭಾಗದಲ್ಲಿ 'ಒಂದು ಭಾರತೀಯ ರಾಜ್ಯ ಅಥವಾ ಒಂದಕ್ಕಿಂತ ಹೆಚ್ಚು ರಾಜ್ಯ' ಎಂಬುದಕ್ಕೆ ಬದಲಾಗಿ 'ಒಂದು ಅಥವಾ ಒಂದಕ್ಕಿಂತ ಹೆಚ್ಚು ರಾಜ್ಯಗಳು' ಎಂಬ ಪದಗಳನ್ನು ಸೇರಿಸಿಕೊಳ್ಳಬೇಕು."

ಇದು ಇಂಗ್ಲಿಷ್ ಭಾಷೆಯನ್ನು ಸರಿಯಾಗಿ ಉಪಯೋಗಿಸುವ ವಿಧಾನ. ನನ್ನ ಎರಡನೆಯ ತಿದ್ದುಪಡಿಯೆಂದರೆ:

"'ವಿನಂತಿಸಿಕೊಳ್ಳುವುದು' ಎಂಬ ಪದದ ಬದಲಿಗೆ 'ನಿರ್ದೇಶಿಸುವುದು' ಎಂಬ ಪದವನ್ನು ಸೇರಿಸಿಕೊಳ್ಳಬೇಕು."

ಮಾನ್ಯರೆ, ಅನುಬಂಧದ ಮೂರನೆಯ ಅಂಕಣದಲ್ಲಿ ಸೂಚಿಸಿರುವ ಅಧಿಕಾರಿಗಳನ್ನು ನಿರ್ದೇಶಿಸುವುದು ತಮ್ಮ ಅಧಿಕಾರದಲ್ಲಿದೆ. ಒಂದು ಸಣ್ಣ ರಾಜ್ಯವನ್ನು ಅಥವಾ ಅಲ್ಲಿನ ಅಧಿಕಾರಿಗಳನ್ನು ಚುನಾವಣೆಯನ್ನು ನಡೆಸುವಂತೆ ವಿನಂತಿಸಿಕೊಳ್ಳುವುದು ತಾವು ಹೊಂದಿರುವ ಅಧಿಕಾರದ ಯೋಗ್ಯತೆಗೆ ಅಥವಾ ಈ ಸಂವಿಧಾನ ರಚನಾಸಭೆಯ ಸ್ಥಾನಮಾನಕ್ಕೆ ತಕ್ಕುದಾಗಿಲ್ಲವೆಂಬುದು ನನ್ನ ಅಭಿಪ್ರಾಯ. ತಮ್ಮ ಆದೇಶದ ಪ್ರಕಾರ ಸಂವಿಧಾನ ರಚನಾಸಭೆಯ ಸದಸ್ಯರಾಗಿ ನಾವಿಲ್ಲಿ ನೆರೆದಿದ್ದೇವೆ. ನನ್ನ ತಿದ್ದುಪಡಿಗಳನ್ನು ಪರಿಗಣಿಸಬೇಕಾಗಿ ನಾನು ವಿನಂತಿಸಿಕೊಳ್ಳುತ್ತೇನೆ.

ಎರಡನೆಯ ನಿಬಂಧನೆಯಲ್ಲಿ ಕೂಡ 'ವಿನಂತಿಸಿಕೊಳ್ಳುವುದು' ಎಂಬ ಪದವನ್ನು ಉಪಯೋಗಿಸಿ ಕೊಳ್ಳಲಾಗಿದೆ. ಅದರ ಬದಲಿಗೂ 'ನಿರ್ದೇಶಿಸುವುದು' ಎಂಬ ಪದವನ್ನು ಸೇರಿಸಿಕೊಳ್ಳಬೇಕು.

ಎರಡನೆಯ ನಿಬಂಧನೆಗೆ ಸಂಬಂಧಿಸಿದಂತೆ ಇನ್ನೊಂದು ತಿದ್ದುಪಡಿಯಿದೆ. ನನ್ನ ಸಲಹೆಯೆಂದರೆ– ಇಡೀ ಉಪಬಂಧವನ್ನು ಈ ರೀತಿ ಬದಲಾಯಿಸಬೇಕು –

"ಖಾಲಿಯಾಗಿರುವ ಸ್ಥಾನವನ್ನು ಚುನಾವಣೆಯ ಮೂಲಕ ಭರ್ತಿಮಾಡಬೇಕು ಎಂದು ನಿರ್ದೇಶಿಸುವಲ್ಲಿ, ಅಧ್ಯಕ್ಷರು ಚುನಾವಣೆಯನ್ನು ಇಂತಿಷ್ಟೇ ದಿನಗಳ ಅವಧಿಯಲ್ಲಿ ನಡೆಸಬೇಕು ಎಂದು ನಿರ್ದೇಶಿಸಬಹುದು."

ಇಲ್ಲಿನ ಬದಲಾವಣೆಯೆಂದರೆ 'ಭರ್ತಿಮಾಡಲು ವಿನಂತಿಸಿಕೊಳ್ಳುವುದು' ಎಂಬ ಪದಗಳಿಗೆ ಬದಲಾಗಿ 'ಭರ್ತಿಮಾಡಲು ನಿರ್ದೇಶಿಸಿಕೊಳ್ಳುವುದು' ಎಂದು ಮಾಡಿಕೊಳ್ಳುವುದು. 'ವಿನಂತಿ' ಎಂಬ ಪದದ ಬದಲಿಗೆ 'ನಿರ್ದೇಶನ' ಎಂಬ ಪದವೂ, 'ಅವರಿಂದ ಸೂಚಿಸಬಹುದಾದ ಅವಧಿಯ ಒಳಗೆ' ಎಂಬ ಪದಗಳ ಬದಲಿಗೆ 'ಇಂತಿಷ್ಟೇ ದಿನಗಳ ಅವಧಿಯಲ್ಲಿ' ಎಂಬ ಪದಗಳನ್ನು ಸೇರಿಸಲಾಗಿದೆ.

ಎರಡನೆಯ ಪುಟದ ೩(೧)ನೆಯ ಕಂಡಿಕೆಯಲ್ಲಿರುವ ವಾಕ್ಯ ರಚನೆಯನ್ನು ಹೀಗೆ ಬದಲಾಯಿಸಿದರೆ ಸೂಕ್ತವಾಗಬಹುದು:

"ಸಂವಿಧಾನ ರಚನಾಸಭೆಯಲ್ಲಿ ರಾಜ್ಯಕ್ಕೆ ಅಥವಾ ಒಟ್ಟಾರೆಯಾಗಿ ರಾಜ್ಯಗಳಿಗೆ ನೀಡಿದ್ದ ಪ್ರಾತಿನಿಧ್ಯವನ್ನು, ಅಥವಾ ಕೆಲವು ರಾಜ್ಯಗಳನ್ನು ಒಟ್ಟುಗೂಡಿಸಿ ಅಂತಹ ನೀಡಿದ್ದ ಪ್ರಾತಿನಿಧ್ಯವನ್ನು ಎರಡನೆಯ ಕಂಡಿಕೆಯ ಪ್ರಕಾರ ಅಥವಾ ಈ ಅನುಸೂಚಿಯ ಅನುಬಂಧವನ್ನು ತಿದ್ದುಪಡಿಮಾಡುವ ಮೂಲಕ ಬದಲಾಯಿಸಿದರೆ, ಸಭಾಧ್ಯಕ್ಷರು ಒಂದು ಆದೇಶವನ್ನು ನೀಡಿ......"

'ಒಂದು ನಿರ್ದಿಷ್ಟ' ಎಂಬ ಪದದ ಬದಲಿಗೆ 'ಯಾವುದೇ' ಎಂದು ಬದಲಾಯಿಸುವುದು ಮತ್ತು 'ಸಂವಿಧಾನ ಸಭೆಯಲ್ಲಿ ಒಂಟಿಯಾಗಿ ಅಥವಾ ಒಂದು ಕೂಟವಾಗಿ' ಎಂಬುದಕ್ಕೆ ಬದಲಾಗಿ 'ಜಂಟಿಯಾಗಿ ಅಥವಾ ಒಂಟಿಯಾಗಿ' ಎಂಬ ಅರ್ಥವನ್ನು ನೀಡುವಂತಹ ಬದಲಾವಣೆಯನ್ನು ಇಲ್ಲಿ ಮಾಡಲಾಗಿದೆ ಅಷ್ಟೆ.

ನನ್ನ ಈ ತಿದ್ದುಪಡಿಯು ಶ್ರೀ ಕಾಮತ್ ಅವರ ತಿದ್ದುಪಡಿಯ ರೀತಿಯಲ್ಲಿಯೇ ಇದೆ. ಅವರು ಇಡೀ ಖಂಡವನ್ನು ಬದಲಾಯಿಸುವ ಆತುರವನ್ನು ಹೊಂದಿದ್ದರೆಂದು ನನಗೆ ಎನಿಸುತ್ತದೆ. ಆದ್ದರಿಂದ, ಅವರ ಉದ್ದೇಶವು ನನ್ನ ಉದ್ದೇಶದಂತೆಯೇ ಇದ್ದರೂ, ಅವರ ತಿದ್ದುಪಡಿಯು ನನ್ನ ತಿದ್ದುಪಡಿಯಷ್ಟು ಸ್ಪಷ್ಟತೆಯನ್ನು ಒಳಗೊಂಡಿಲ್ಲ. ಮಾನ್ಯರೆ, ನಾನು ಸೂಚಿಸಿರುವ ತಿದ್ದುಪಡಿಗಳನ್ನು ಪರಿಶೀಲಿಸಿ, ಸಾಧ್ಯವಾದರೆ ಒಪ್ಪಿಕೊಳ್ಳುವುದು ನಿರ್ಣಯವನ್ನು ಮಂಡಿಸಿದ ಗೌರವಾನ್ವಿತ ಸದಸ್ಯರಿಗೆ ಸಾಧ್ಯವೆಂದು ನಾನು ಆಶಿಸುತ್ತೇನೆ.

**ಶ್ರೀ ಬಿಶ್ವನಾಥ್ ದಾಸ್** (ಒರಿಸ್ಸಾ : ಸಾಮಾನ್ಯ) : ನಾನು ನನ್ನ ತಿದ್ದುಪಡಿಯನ್ನು ಮಂಡಿಸಲು ಸೂಚನೆಯನ್ನು ನೀಡಿದ್ದೇನೆ. ಅದಕ್ಕೆ ಮೊದಲು ಈಗ ನಿರ್ಣಯವು ಇರುವ ರೀತಿಯನ್ನು ಕುರಿತು ನಾನು ಎರಡು ಮಾತುಗಳನ್ನಾಡಲು ಬಯಸುತ್ತೇನೆ.

ಅನುಬಂಧದ ಮೊದಲನೆಯ ಭಾಗದಲ್ಲಿ, ಮಯೂರ್‌ಭಂಜ್ ರಾಜ್ಯಕ್ಕೆ ಒಬ್ಬ ಪ್ರತಿನಿಧಿಯಿರುವುದಾಗಿಯೂ, ಮತ್ತು ಅದರ ಚುನಾವಣಾ ಅಧಿಕಾರವು ಮಯೂರ್‌ಭಂಜ್‌ನ ರಾಜರಲ್ಲಿ ಇದೆಯೆಂದೂ ತಿಳಿಸಲಾಗಿದೆ. ಆದರೆ, ರಾಜ್ಯದ ಮಂತ್ರಿಮಂಡಲವು ಮಯೂರ್‌ಭಂಜ್ ರಾಜ್ಯವು ಪ್ರತ್ಯೇಕವಾಗಿ ನಿಲ್ಲಲು ಸಾಧ್ಯವಿಲ್ಲವೆಂದು ತೀರ್ಮಾನಿಸಿ, ಈಗಾಗಲೇ ಇತರ ೨೦ ರಾಜ್ಯಗಳನ್ನು ಸೇರ್ಪಡೆ ಮಾಡಲಾಗಿರುವ ಒರಿಸ್ಸಾ ರಾಜ್ಯದಲ್ಲಿ ಮಯೂರ್‌ಭಂಜ್‌ನ್ನೂ ಸೇರ್ಪಡೆಗೊಳಿಸಬೇಕೆಂಬುದನ್ನು ಅಂಗೀಕರಿಸಲಾಗಿದೆ.

**ಮಾನ್ಯ ಸಭಾಧ್ಯಕ್ಷರು :** ಮಯೂರ್‌ಭಂಜ್ ರಾಜ್ಯವು ಈಗಾಗಲೇ (ಒರಿಸ್ಸಾದಲ್ಲಿ) ಸೇರ್ಪಡೆಯಾಗಿದೆಯೋ ಅಥವಾ ಅದು ಒಂದು ಪ್ರಸ್ತಾಪವೋ?

**ಶ್ರೀ ಬಿಶ್ವನಾಥ್ ದಾಸ್ :** ಈ ಕುರಿತು ಈಗಾಗಲೇ ಒಪ್ಪಂದವೊಂದಕ್ಕೆ ಬರಲಾಗಿದೆಯೆಂದೂ ಮತ್ತು ರಾಜ್ಯವನ್ನು ಭಾರತ ಸರಕಾರಕ್ಕೆ ಒಪ್ಪಿಸಲಾಗುತ್ತದೆಯೆಂದೂ, ಮತ್ತು ರಾಜ್ಯಕ್ಕೆ ಈಗಾಗಲೇ ಒಬ್ಬ ಆಡಳಿತಾಧಿಕಾರಿಯನ್ನು ನೇಮಿಸಲಾಗಿದೆ ಮತ್ತು ಅವರು ರಾಜ್ಯದ ಆಡಳಿತವನ್ನು ನಡೆಸುತ್ತಾರೆ ಎಂದೂ ತಿಳಿದುಬಂದಿದೆ. ಇಂತಹ ಪರಿಸ್ಥಿತಿಯಲ್ಲಿ, ಮಯೂರ್‌ಭಂಜ್‌ಅನ್ನು ಪ್ರತ್ಯೇಕ ರಾಜ್ಯವೆಂದೂ ಮತ್ತು ಅಲ್ಲಿನ ರಾಜರನ್ನು ಚುನಾವಣಾ ಅಧಿಕಾರಿಯೆಂದೂ ಪರಿಗಣಿಸುವುದಕ್ಕೆ ಯಾವ ಸಮರ್ಥನೆಯೂ ಇಲ್ಲವೆಂದು ನನ್ನ ನಂಬಿಕೆ. ಮಯೂರ್‌ಭಂಜ್ ರಾಜ್ಯವನ್ನು ಒರಿಸ್ಸಾದೊಂದಿಗೆ ಸೇರ್ಪಡೆ ಮಾಡಲಾಗುತ್ತದೆ ಎಂಬ ವಿಷಯವನ್ನು ಭಾರತ ಸರಕಾರವು ಒರಿಸ್ಸಾ ರಾಜ್ಯಕ್ಕೆ ತಿಳಿಸಿದೆಯೋ ಅಥವಾ ಇಲ್ಲವೋ ಎಂಬುದು ನನಗೆ ತಿಳಿದಿಲ್ಲ. ಆದರೆ ಅದನ್ನು ಒರಿಸ್ಸಾ ರಾಜ್ಯದೊಂದಿಗೆ ಸೇರ್ಪಡೆ ಮಾಡಲಾಗುತ್ತದೆ ಎಂಬುದು ಭಾರತದ ಸ್ಪಷ್ಟ ನಿಲುವು ಎಂಬುದನ್ನು ಮಾತ್ರ ತಮಗೆ ಮತ್ತು ತಮ್ಮ ಮೂಲಕ ಸಂವಿಧಾನ ರಚನಾಸಭೆಯ ಮಾನ್ಯ ಸದಸ್ಯರಿಗೆ ನಾನು ತಿಳಿಸಬಲ್ಲೆ. ಆ ರಾಜ್ಯದ ಮಂತ್ರಿಮಂಡಲವು ರಾಜ್ಯದ, ಅಲ್ಲಿನ ಜನತೆಯ ಮತ್ತು ಒರಿಸ್ಸಾ ರಾಜ್ಯದ ಸಂಪೂರ್ಣ ಒಪ್ಪಿಗೆಯಿಂದ ತೆಗೆದುಕೊಂಡಿರುವ ತೀರ್ಮಾನವನ್ನು ತಿರಸ್ಕರಿಸುವಂತಹ ನಿರ್ಣಯವನ್ನು ಇಲ್ಲಿ ತೆಗೆದುಕೊಳ್ಳುವುದರಲ್ಲಿ ಯಾವುದೇ ಅರ್ಥವೂ ಇರುವುದಿಲ್ಲ.

ಆದ್ದರಿಂದ ನಾನು ಈಗ ನೀಡಿರುವ ಸೂಚನೆಯ ಮೇರೆಗೆ, ನನ್ನ ತಿದ್ದುಪಡಿಯನ್ನು ಮಂಡಿಸಲು ಅನುಮತಿಯನ್ನು ಬೇಡುತ್ತಿದ್ದೇನೆ.

"ಅನುಬಂಧದ ಮೊದಲನೆಯ ಭಾಗದಲ್ಲಿ ಮಯೂರ್‌ಭಂಜ್‌ಗೆ ನೀಡಿರುವ ಪ್ರತ್ಯೇಕ ಪ್ರಾತಿನಿಧ್ಯವನ್ನು ಹಾಗೂ ಮಯೂರ್‌ಭಂಜ್‌ನ ರಾಜರನ್ನು ಚುನಾವಣಾ ಅಧಿಕಾರಿಯಾಗಿ ನೇಮಿಸಿರುವುದನ್ನು ಅದರಿಂದ ಕೈಬಿಡಬೇಕು."

ಮತ್ತೆ, ನನ್ನ ತಿದ್ದುಪಡಿಯು ಹೀಗಿದೆ:

"ಅನುಬಂಧದ ಎರಡನೆಯ ಭಾಗದಲ್ಲಿ, ಮಯೂರ್‌ಭಂಜ್ ರಾಜ್ಯವು ಒರಿಸ್ಸಾ ರಾಜ್ಯಕ್ಕೆ ಸೇರಬೇಕು, ಮತ್ತು ೨೩ಕ್ಕೆ ಬದಲಾಗಿ ೨೪ ಎಂದೂ ಮತ್ತು ಪ್ರಾತಿನಿಧ್ಯದ ಅಂಕಣದಲ್ಲಿ ೪ಕ್ಕೆ ಬದಲಾಗಿ ೫ ಎಂದೂ ಬದಲಾಯಿಸಿ, ಒರಿಸ್ಸಾ ರಾಜ್ಯಪಾಲರನ್ನು ಚುನಾವಣಾ ಅಧಿಕಾರಿ ಎಂದು ನಮೂದಿಸಬೇಕು."

ಇದು ನನ್ನ ತಿದ್ದುಪಡಿಯ ಪಾಠವಾಗಿದ್ದು, ಇದನ್ನು ಸಂವಿಧಾನ ರಚನಾಸಭೆಯ ಮಾನ್ಯ ಸದಸ್ಯರ ಮುಂದೆ ಮಂಡಿಸುತ್ತಿದ್ದೇನೆ ಹಾಗೂ ಇದು ಅಗತ್ಯವಾಗಿದೆ ಎಂಬುದು ನನ್ನ ಅಭಿಪ್ರಾಯ.

ತಾವು ಮಯೂರ್‌ಭಂಜ್‌ಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ನೀಡಲು ಉದ್ದೇಶಿಸಿದರೆ, ಅದು ಸಣ್ಣಪುಟ್ಟ ಸ್ವತಂತ್ರ ರಾಜ್ಯಗಳು ಮುಂದುವರಿಯುವುದನ್ನು ಪೋಷಿಸುತ್ತದೆ ಹಾಗೂ ಇಂತಹ ನೀತಿಯನ್ನು ರಾಜ್ಯಗಳ ಪುನರ್ವಿಂಗಡಣಾ ಖಾತೆಯಾಗಲೀ, ಅಥವಾ ಭಾರತ ಸರಕಾರವಾಗಲೀ ಒಪ್ಪುವುದಿಲ್ಲ. ನನ್ನ ತಿದ್ದುಪಡಿಯು

ರಾಜ್ಯಗಳ ಪುನರ್ವಿಂಗಡಣಾ ಖಾತೆ ಹಾಗೂ ಭಾರತ ಸರಕಾರಗಳು ಒಪ್ಪಿಕೊಂಡಿರುವ ನೀತಿಗೆ, ಅವು ನೀಡಿರುವ ಸ್ಥೂಲಚಿತ್ರಣಕ್ಕೆ, ಮತ್ತು ತಾತ್ವಿಕ ನಿಲುವು ಮತ್ತು ಆಚರಣೆಗೆ ಅನುಗುಣವಾಗಿದ್ದು ಅವುಗಳ ಆಶಯವನ್ನು ಕಾರ್ಯರೂಪಕ್ಕೆ ಇಳಿಸುವುದಕ್ಕೆ ಅನುಗುಣವಾಗಿದೆ.

**ಮಾನ್ಯ ಸಭಾಧ್ಯಕ್ಷರು** : ರಾಜ್ಯಗಳನ್ನು ಕುರಿತಾಗಿರುವ ವಿಷಯವು ಇನ್ನೂ ಅನಿರ್ದಿಷ್ಟವಾಗಿಯೇ ಇದೆ ಎಂಬುದನ್ನು ನಾನು ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಪ್ರತಿ ದಿನವೂ ಈ ವಿಷಯದಲ್ಲಿ ಆಗುತ್ತಿರುವ ಬದಲಾವಣೆಗಳು ಎಷ್ಟಿವೆಯೆಂದರೆ, ಅಲ್ಲಿನ ಬದಲಾವಣೆಗಳ ಜೊತೆ ಹೆಜ್ಜೆಯನ್ನು ಹಾಕುವುದೇ ದುಸ್ತರವಾಗಿದೆ. ನಮ್ಮ ಈ ಪ್ರಸ್ತಾವನೆಯು ರಾಜ್ಯಗಳ ಪುನರ್ವಿಂಗಡಣಾ ಖಾತೆಯು ಮಾಡಿರುವ ಶಿಫಾರಸ್ಸಿನ ಪ್ರಕಾರವಿದೆ, ಮತ್ತು ಇದು ಎಲ್ಲ ರಾಜ್ಯಗಳ ಮುಖ್ಯ ಮಂತ್ರಿಗಳ ಜೊತೆಯಲ್ಲಿ ರಾಜ್ಯಗಳ ರಾಜಪ್ರಮುಖರು, ರಾಜ್ಯಪುನರ್ವಿಂಗಡಣಾ ಖಾತೆಯ ಮತ್ತು ಸಂವಿಧಾನ ರಚನಾಸಭೆಯ ಪ್ರತಿನಿಧಿಗಳೂ ಇದ್ದ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಕ್ಕೆ ಅನುಸಾರವಾಗಿದೆ. ಅಲ್ಲದೆ, ತದನಂತರದಲ್ಲಿ ಆಗಿರುವ ಬದಲಾವಣೆಗಳಿಗೆ ತಕ್ಕಂತೆ ನಿಯಮಗಳನ್ನು ಬದಲಾಯಿಸಲು ಯಾವ ತೊಂದರೆಯೂ ಇಲ್ಲ. ಪರಿಸ್ಥಿತಿ ಹೀಗಿರುವುದರಿಂದ, ಸಣ್ಣಪುಟ್ಟ ರಾಜ್ಯಗಳು ಸ್ವತಂತ್ರವಾಗಿ ಮುಂದುವರಿಯುತ್ತವೆ ಎಂಬ ಶಂಕೆಯನ್ನು ಇಟ್ಟುಕೊಳ್ಳಬೇಕಾಗಿಲ್ಲ ಎಂಬುದನ್ನು ನಾನು ಶ್ರೀ ಬಿಶ್ವನಾಥ್ ದಾಸ್ ಅವರ ಗಮನಕ್ಕೆ ತರಬಯಸುತ್ತೇನೆ. ಈಗ ನಮ್ಮ ತಿಳಿವಳಿಕೆಗೆ ಬಂದಿರುವ ವಿಷಯಗಳ ಆಧಾರದ ಮೇಲೆ ನಾವು ಮುಂದುವರಿಯುತ್ತಿದ್ದೇವೆ ಮತ್ತು ಅವುಗಳನ್ನು ಹಾಗೆಯೇ ಗುರುತಿಸಿ, ಅವುಗಳನ್ನು ಅವಲಂಬಿಸಿ ನಾವು ನಿಯಮಗಳನ್ನು ರೂಪಿಸುತ್ತಿದ್ದೇವೆ. ಈ ವಿಷಯಗಳಲ್ಲಿ ಯಾವುದಾದರೂ ಬದಲಾವಣೆಗಳಾಗಿ ಅದನ್ನು ನಮಗೆ ತಿಳಿಸಿದ ಕೂಡಲೇ, ನಾವು ನಮ್ಮ ನಿಯಮಗಳನ್ನು ತಿದ್ದುಪಡಿ ಮಾಡುತ್ತೇವೆ. ಆದ್ದರಿಂದ ಈ ಹಂತದಲ್ಲಿ ಶ್ರೀ ಬಿಶ್ವನಾಥ್ ದಾಸ್ ಅವರು ತಮ್ಮ ತಿದ್ದುಪಡಿಗಾಗಿ ಒತ್ತಾಯಿಸಬಾರದೆಂದು ನಾನು ಸಲಹೆಯನ್ನು ನೀಡುತ್ತೇನೆ. ಇಂತಹ ಒಂದು ಬದಲಾವಣೆಯನ್ನು ಮಾಡಬೇಕೆಂದು ರಾಜ್ಯಗಳ ಪುನರ್ವಿಂಗಡಣಾ ಖಾತೆಯು ನಮಗೆ ಸೂಚಿಸಿದ ಕೂಡಲೇ ನಾವು ನಿಯಮಗಳಿಗೆ ಸೂಕ್ತವಾದ ತಿದ್ದುಪಡಿಯನ್ನು ಮಾಡುತ್ತೇವೆ.

**ಶ್ರೀ ಬಿಶ್ವನಾಥ್ ದಾಸ್** : ರಾಜ್ಯಗಳ ಪುನರ್ವಿಂಗಡಣಾ ಖಾತೆಯ ಅಧಿಕಾರಿಯೊಬ್ಬರು ಇಲ್ಲಿಯೇ ಇದ್ದಾರೆ. ನಾನು ಅವರೊಡನೆ ವಾದ-ವಿವಾದಕ್ಕೆ ಇಳಿಯಲು ಇಷ್ಟ ಪಡುವುದಿಲ್ಲ, ಆದರೆ, ನಾನು ಮಾಡಿರುವ ಪ್ರಸ್ತಾವನೆಯನ್ನು ಕುರಿತು ಅವರೂ ವಿವಾದಗಳಿಗೆ ಎಡೆ ಕೊಡಬಾರದೆಂದು ಅವರನ್ನು ಕೇಳಿಕೊಳ್ಳುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಅವರ ಮಾತುಗಳನ್ನು ನಾನು ವಿರೋಧಿಸುವುದಿಲ್ಲ. ಆದರೆ ನನಗೆ ರಾಜ್ಯಗಳ ಪುನರ್ವಿಂಗಡಣಾ ಖಾತೆಯಿಂದ ಈ ವಿಷಯವನ್ನು ಕುರಿತು ಯಾವ ಮಾಹಿತಿಯೂ ಬಂದಿಲ್ಲ. ಆದ್ದರಿಂದ ನಾವು ಅವರಿಂದ ಸದ್ಯಃ ಬಂದಿರುವ ಮಾಹಿತಿಯ ಪ್ರಕಾರ ಮುಂದುವರಿಯುತ್ತಿದ್ದೇವೆ. ಇದರಲ್ಲಿನ ಬದಲಾವಣೆಗಳ ಬಗ್ಗೆ ಯಾವುದಾದರೂ ಮಾಹಿತಿಯು ಬಂದರೆ ನಿಯಮಗಳನ್ನು ಬದಲಾಯಿಸುವುದರಲ್ಲಿ ಯಾವ ತೊಂದರೆಯೂ ಇರಲಾರದು. ಅದನ್ನು ಯಾವ ಅಧಿವೇಶನದಲ್ಲಿಯಾದರೂ ಮಾಡಬಹುದು.

**ಶ್ರೀ ಬಿಶ್ವನಾಥ್ ದಾಸ್** : ತಾವು ರಾಜ್ಯದ ವಿಚಾರದಲ್ಲಿ ನಿರ್ಧಾರವನ್ನು ತೆಗೆದುಕೊಳ್ಳುತ್ತಿದ್ದೀರಿ. ಮಯೂರ್‌ಭಂಜ್ ರಾಜ್ಯಕ್ಕೆ ಪ್ರತ್ಯೇಕ ಪ್ರಾತಿನಿಧ್ಯವನ್ನು ಸಂವಿಧಾನ ರಚನಾಸಭೆಯು ನೀಡಿದೆ ಎಂದು ಪತ್ರಿಕೆಗಳಲ್ಲಿ ಪ್ರಕಟವಾದ ತತ್‌ಕ್ಷಣ, ಪ್ರಚಂಡವಾದ ಒತ್ತಡಗಳು ಬೀಳುವುದು ನಮ್ಮ ಮೇಲಲ್ಲ, ಒರಿಸ್ಸಾದ ಜನತೆಯ ಮೇಲಲ್ಲ, ಬದಲಿಗೆ ಭಾರತ ಸರಕಾರವು ನೇಮಿಸಲಿರುವ ಆಡಳಿತಾಧಿಕಾರಿಗಳು ಈ ಒತ್ತಡಕ್ಕೆ ತುತ್ತಾಗುತ್ತಾರೆ. ಈ ಪರಿಸ್ಥಿತಿಯಲ್ಲಿ, ಉದ್ಭವಿಸಬಹುದಾದ ಸನ್ನಿವೇಶಗಳನ್ನು ಹಾಗೂ ಅಲ್ಲಿನ ಪ್ರದೇಶ ಮತ್ತು ಜನತೆಯನ್ನು ಹತ್ತಿರದಿಂದ ಬಲ್ಲವನಾಗಿರುವುದರಿಂದ, ನಾನು ತಮ್ಮನ್ನು ಈ ಅಪಾಯಕಾರಿ ಹಾದಿಯಲ್ಲಿ ಹೆಜ್ಜೆಯನ್ನು ಇಡಬಾರದೆಂದು ವಿನಂತಿಸಿಕೊಳ್ಳುತ್ತೇನೆ. ನಾನು ನನ್ನ ತಿದ್ದುಪಡಿಗಾಗಿ ಒತ್ತಾಯಿಸುವುದಿಲ್ಲ. ನಾನು ವಿಷಯವನ್ನು ತಮ್ಮ ಹಾಗೂ ಸಂವಿಧಾನ ರಚನಾಸಭೆಯ ಗಮನಕ್ಕೆ ತರುವ ಕೆಲಸವನ್ನಷ್ಟೆ ಮಾಡುತ್ತಿದ್ದೇನೆ.

**ಮಾನ್ಯ ಸಭಾಧ್ಯಕ್ಷರು :** ವೃತ್ತಪತ್ರಿಕೆಗಳು ಮಯೂರ್‌ಭಂಜ್‌ಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ನೀಡಿರುವುದನ್ನು ಮಾತ್ರ ಪ್ರಕಟಸುವುದಿಲ್ಲ, ಅವು, ನೀವು ಮತ್ತು ನಾನು ನೀಡಿದ ಹೇಳಿಕೆಗಳನ್ನೂ ಪ್ರಕಟಿಸುತ್ತವೆ. ಈ ಹೇಳಿಕೆಗಳ ಸಂಗಡ ಪ್ರಕಟವಾಗುವ ಇತರ ಯಾವ ಮಾಹಿತಿಯೂ ನೀವು ಭಾವಿಸುವಂತಹ ಭಯವನ್ನು ಜನತೆಯ ಮೇಲೆ ಹೇರುವುದಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ತಮ್ಮ ತಿದ್ದುಪಡಿಯನ್ನು ಮಂಡಿಸಲು ಒತ್ತಾಯಿಸಬಾರದೆಂದು ನಾನು ಸೂಚಿಸುತ್ತೇನೆ.

**ಶ್ರೀ ರಾಮ್ ಸಹಾಯ್** (ಗ್ವಾಲಿಯರ್, ಇಂದೋರ್, ಮಾಳವ ಸಂಯುಕ್ತ ಪ್ರಾಂತ್ಯ (ಮಧ್ಯ ಭಾರತ): *[ಮಾನ್ಯ ಸಭಾಧ್ಯಕ್ಷರೆ, ನಮ್ಮ ಮುಂದೆ ಇರುವ ತಿದ್ದುಪಡಿಗಳನ್ನು ಮಂಡಿಸುವ ಮೊದಲು ಸಂಧಾನ ಸಮಿತಿಯು ಒಪ್ಪಿರುವ ನಿಯಮಗಳಿಗೆ ವಿರುದ್ಧವಾದ ತಿದ್ದುಪಡಿಯನ್ನು ಮಂಡಿಸಬಹುದೇ ಎಂದು ನಾನು ತಿಳಿದುಕೊಳ್ಳಲು ಬಯಸುತ್ತೇನೆ. ಉದಾಹರಣೆಗೆ ಅದರಲ್ಲಿ ಶೇ. ೫೦ರ ಮಿತಿಯನ್ನು ಹೇಳಲಾಗಿದೆ. ಈ ಶೇ. ೫೦ ಎನ್ನುವದರ ಬದಲು, ಎಲ್ಲ ಸದಸ್ಯರೂ ಚುನಾಯಿತರಾಗಿರಬೇಕು ಅಥವಾ ಅವರು ರಾಜಪ್ರಮುಖರಿಂದ ನಾಮಕರಣಗೊಂಡಿರಬೇಕು ಅಥವಾ ರಾಜ್ಯಗಳಲ್ಲಿ ಸಿದ್ಧಮಾಡಲ್ಪಟ್ಟಿರುವ ಚುನಾವಣಾ ಪಟ್ಟಿಯಲ್ಲಿರುವ ಮತದಾರರಿಂದ ಆಯ್ಕೆಯಾಗಿರಬೇಕು ಎಂಬ ತಿದ್ದುಪಡಿಯನ್ನು ಮಂಡಿಸಬಹುದೇ? ಅಂದರೆ, ಸಂಧಾನ ಸಮಿತಿಯು ಒಪ್ಪಿರುವ ನೀತಿನಿಯಮಗಳನ್ನು ಉಲ್ಲಂಘಿಸಿ ನಾವು ತಿದ್ದುಪಡಿಯನ್ನು ಮಂಡಿಸಬಹುದೆ?]*

**ಮಾನ್ಯ ಸಭಾಧ್ಯಕ್ಷರು :** ನಾವು ರಾಜ್ಯಗಳ ವಿಷಯದಲ್ಲಿ ವ್ಯವಹರಿಸುವಾಗ ಅತಿಯಾದ ಎಚ್ಚರಿಕೆಯಿಂದ ಇರಬೇಕು. ರಾಜ್ಯಗಳೊಡನೆ ಮಾಡಿಕೊಂಡಿರುವ ಒಪ್ಪಂದದ ಪ್ರಕಾರ ನಾವು ಮುಂದುವರಿಯುತ್ತಿದ್ದೇವೆ ಮತ್ತು ಈ ಹಂತದಲ್ಲಿ ಈ ಒಪ್ಪಂದಗಳಿಗೆ ವಿರುದ್ಧವಾದ ಯಾವುದನ್ನೂ ಮಾಡಬಾರದು. ಈ ಎಲ್ಲ ತಿದ್ದುಪಡಿಗಳೂ ರಾಜ್ಯ ಪುನರ್ವಿಂಗಡಣಾ ಖಾತೆ ಮತ್ತು ಸಂಬಂಧಪಟ್ಟ ರಾಜ್ಯಗಳ ನಡುವೆ ಆಗಿರುವ ಒಪ್ಪಂದದ ಪ್ರಕಾರವೇ ಮಂಡಿಸಲ್ಪಟ್ಟಿವೆ. ಸದನದ ಸದಸ್ಯರಿಗೆ ನೆನಪಿರುವ ಹಾಗೆ, ಮೊದಲು ನಿಯಮಗಳ ಒಂದು ಸಂಗ್ರಹವಿತ್ತು. ಅದು ಅನಂತರದ ಕಾಲಕ್ಕೆ ತಕ್ಕುದಾಗಿರಲಿಲ್ಲ. ಆದ್ದರಿಂದ ನಾವು ನಿಯಮಗಳ ಹೊಸ ಸಂಗ್ರಹದ ಪ್ರಕಾರ ನಡೆದುಕೊಳ್ಳುತ್ತಿದ್ದೇವೆ. ನಮ್ಮೆಲ್ಲ ತಿದ್ದುಪಡಿಗಳೂ ಈ ಒಪ್ಪಂದಗಳಿಗೆ ಅನುಗುಣವಾಗಿಯೇ ಇವೆ ಮತ್ತು ಈ ಒಪ್ಪಂದಗಳಿಗೆ ವಿರುದ್ಧವಾದ ಯಾವುದನ್ನೂ ನಾವು ಮಾಡುವುದಕ್ಕೆ ಹೋಗಬಾರದು ಎಂದು ನಾನು ಸೂಚಿಸುತ್ತೇನೆ.

ತಮ್ಮ ತಿದ್ದುಪಡಿಯನ್ನು ಮಂಡಿಸುವುದಕ್ಕೆ ಒತ್ತಾಯಿಸಬಾರದೆಂದು ನಾನು ಶ್ರೀ ಸಿಧ್ವಾ ಅವರನ್ನು ಕೇಳಿಕೊಳ್ಳುತ್ತೇನೆ.

**ಹಲವು ಗೌರವಾನ್ವಿತ ಸದಸ್ಯರು :** ಅವರು ಅದನ್ನು ಮಂಡಿಸಿಯೇ ಇಲ್ಲ.

**ಶ್ರೀ ಎಸ್. ನಾಗಪ್ಪ** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ನಾನು ಒಂದು ತಿದ್ದುಪಡಿಯನ್ನು ಮಂಡಿಸಲು ಸದನದ ಅನುಮತಿಯನ್ನು ಕೋರುತ್ತೇನೆ. ಇದಕ್ಕೆ ಸೂಚನೆಯನ್ನು ಈಗ ತಾನೇ ನೀಡಿದ್ದೇನೆ. ನಾನು ಮೂಲ ಪ್ರಸ್ತಾವದ ಪರವಾಗಿ ಇದ್ದೇನೆ. ಆದರೆ ಅದರ ಅನುಬಂಧದಲ್ಲಿರುವ ಮೊದಲನೆಯ ಭಾಗದ ಮೂರನೆಯ ಅಂಕಣಕ್ಕೆ (ಅಂದರೆ ಸಂವಿಧಾನ ರಚನಾಸಭೆಗೆ ಪ್ರತಿನಿಧಿಯನ್ನು ಆರಿಸುವ ಉದ್ದೇಶಕ್ಕಾಗಿರುವ ಅಧಿಕಾರಿಗಳ ಬಗ್ಗೆ) ಅಲ್ಲಿರುವ ಹೈದರಾಬಾದ್, ಮೈಸೂರು, ಕಾಶ್ಮೀರ ಮೊದಲಾದವುಗಳ ರಾಜರು ಎಂಬ "ಪದ"ಕ್ಕೆ ನಾನು ತಿದ್ದುಪಡಿಯನ್ನು ತರಬಯಸಿದ್ದೇನೆ. ಇಂದು, ಅದರಲ್ಲಿಯೂ ೧೯೪೭ರ ಆಗಸ್ಟ್ ೧೫ರಿಂದ, ರಾಜ್ಯಗಳ ಅಧಿಕಾರವೆಲ್ಲವೂ ಜನತೆಗೆ ವರ್ಗಾಯಿಸಲ್ಪಟ್ಟಿರುವುದರಿಂದ, ಅಲ್ಲಿನ ರಾಜರುಗಳಿಗೆ ಯಾವ ಅಧಿಕಾರವೂ ಇಲ್ಲ. ಮಾನ್ಯರೆ, ಆದ್ದರಿಂದ ಸಂವಿಧಾನ ರಚನಾಸಭೆಯಲ್ಲಿ ಪ್ರತಿನಿಧಿಸಲು ಪ್ರತಿನಿಧಿಗಳನ್ನು ಆಯಾ ರಾಜ್ಯಗಳ ರಾಜರು ಆಯ್ಕೆ ಮಾಡಬಾರದು. ಏಕೆಂದರೆ ಅವರಿಗೆ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಅಧಿಕಾರವಿಲ್ಲ. ಯಾವುದೇ ಅಧಿಕಾರವಿಲ್ಲದವರನ್ನು ಅಧಿಕಾರಿ ಎಂದು ಏಕೆ ಕರೆಯಬೇಕು? ನನಗೆ ಅದು ಸರಿಯೆಂದು

ಕಾಣಿಸುವುದಿಲ್ಲ. ಈ ಪ್ರಸ್ತಾವವನ್ನು ಮಂಡಿಸಿರುವ ಗೌರವಾನ್ವಿತ ಸದಸ್ಯರು ನನ್ನ ತಿದ್ದುಪಡಿಗಳನ್ನು ಅಂಗೀಕರಿಸಿದರೆ, ನಾನು ಕೃತಜ್ಞನಾಗಿರುತ್ತೇನೆ.

"ಅನುಬಂಧದ ಮೊದಲನೆಯ ಭಾಗದ ಮೂರನೆಯ ಅಂಕಣದಲ್ಲಿರುವ 'ರಾಜ' ಎಂಬ ಪದಕ್ಕೆ ಬದಲಾಗಿ 'ಜನತೆ' ಎಂಬುದನ್ನು ಸೇರಿಸಬೇಕು."

ತಮಗೆ ಈ ತಿದ್ದುಪಡಿಯು ಸೂಕ್ತವೆನಿಸದಿದ್ದರೆ, 'ರಾಜ' ಎಂಬ ಪದದ ಬದಲಿಗೆ 'ರಾಜ್ಯದ ಜನತೆಯಿಂದ ಆಯ್ಕೆ ಮಾಡಲ್ಪಟ್ಟ ಶಾಸನಸಭೆಯ ಸಭಾಧ್ಯಕ್ಷ' ಎಂಬ ಪದಗಳು ಹೆಚ್ಚು ಸೂಕ್ತವಾಗುತ್ತವೆ. ಅಲ್ಲಿ 'ರಾಜ'ರು ನಾಮಮಾತ್ರಕ್ಕೆ ಔಪಚಾರಿಕ ಮುಖ್ಯಸ್ಥರಾಗಿರುತ್ತಾರೆಂಬುದರಲ್ಲಿ ಸಂದೇಹವಿಲ್ಲ. ಆದರೆ, ನಿಜವಾಗಿ ಅಧಿಕಾರವಿರುವುದು (ಶಾಸನಸಭೆಯಿರುವಂತಹ ರಾಜ್ಯಗಳಲ್ಲಿ) ಮುಖ್ಯ ಮಂತ್ರಿಯ ಅಥವಾ ಶಾಸನಸಭೆಯ ಕೈಯಲ್ಲಿ. ಮಾನ್ಯರೆ, ಆದ್ದರಿಂದ ಈ ಸರಳ ತಿದ್ದುಪಡಿಯನ್ನು ಅಳವಡಿಸಿಕೊಳ್ಳುವಂತೆ ನಾನು ಗೌರವಾನ್ವಿತ ಮಂಡನೆಕಾರರನ್ನು ಪ್ರಾರ್ಥಿಸುತ್ತೇನೆ ಮತ್ತು ಈ ಸದನವು ಅದನ್ನು ಒಪ್ಪುತ್ತದೆ ಎಂದು ನಾನು ಆಶಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಮಾನ್ಯ ಸದಸ್ಯರ ತಿದ್ದುಪಡಿಯು ತಪ್ಪು ತಿಳಿವಳಿಕೆಯಿಂದ ಕೂಡಿದೆಯೆಂದು ನಾನು ಅವರ ಗಮನಕ್ಕೆ ತರಲು ಬಯಸುತ್ತೇನೆ. ರಾಜರು ಎಂದು ಅಲ್ಲಿ ಹೇಳಿದ ಮಾತ್ರಕ್ಕೆ, ಆಯಾ ರಾಜ್ಯದ ರಾಜರೇ ಪ್ರತಿನಿಧಿಯನ್ನು ಆಯ್ಕೆಮಾಡುತ್ತಾರೆಂದು ಅದರ ಅರ್ಥವಲ್ಲ. ಆಯ್ಕೆಯನ್ನು ಮಾಡಲು ಅಧಿಕಾರವುಳ್ಳ ಸಂಸ್ಥೆಗಳಿಂದ ಪ್ರತಿನಿಧಿಗಳನ್ನು ಆಯ್ಕೆಮಾಡಿಸಿ ಎಂದು ಅಲ್ಲಿನ ರಾಜರುಗಳಿಗೆ ನಾವು ಪತ್ರವನ್ನು ಬರೆಯಬೇಕು. ಅಂತಹ ಸಂಸ್ಥೆಗಳ ಆಯ್ಕೆಯ ಪ್ರಕ್ರಿಯೆಗಳಲ್ಲಿ ರಾಜರು ಯಾವ ರೀತಿಯಲ್ಲಿಯೂ ತಮ್ಮ ಮೂಗನ್ನು ತೂರಿಸುವುದಿಲ್ಲ.

**ಶ್ರೀ ಎಸ್. ನಾಗಪ್ಪ :** ಅದನ್ನೇ ನಾನೂ ಹೇಳುತ್ತಿರುವುದು. ತಾವು ರಾಜರನ್ನು ಪ್ರತಿನಿಧಿಗಳನ್ನು ಆಯ್ಕೆಮಾಡುವಂತೆ ಕೇಳುತ್ತಿದ್ದೀರಿ, ಆದರೆ ಅವರು ಆಯ್ಕೆಮಾಡುವ ಅಧಿಕಾರವನ್ನೇ ಹೊಂದಿರುವುದಿಲ್ಲ. ಅಧಿಕಾರವಿಲ್ಲದವರನ್ನು ಕೇಳುವುದರಿಂದ ಬರುವ ಲಾಭವೇನು? ವಾಸ್ತವ ಅಧಿಕಾರವು ಇರುವುದು ಜನರ ಬಳಿಯಲ್ಲಿಯೇ ಹೊರತು ರಾಜರ ಬಳಿಯಲ್ಲಿ ಅಲ್ಲ. ಆದ್ದರಿಂದ ಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕಾದವರು ಅಲ್ಲಿನ ಜನತೆ, ಅಂದರೆ, ಶಾಸನಸಭೆಯಿದ್ದರೆ ಅಲ್ಲಿ ತಾವು ಆಯ್ಕೆಮಾಡಿರುವ ಶಾಸನಸಭೆಯ ಸಭಾಧ್ಯಕ್ಷರ ಮೂಲಕ, ಅಥವಾ ಸೂಕ್ತವಾದ ಕ್ರಮದಲ್ಲಿ ಆಯ್ಕೆಯಾಗಿರುವ ಅಲ್ಲಿನ ಮುಖ್ಯ ಮಂತ್ರಿ ಅಥವಾ ಅಲ್ಲಿನ ರಾಜಪ್ರಮುಖರ ಮೂಲಕ. ಅವರೇ ಸೂಕ್ತವಾದ ಅಧಿಕಾರಿಗಳು. ಔಪಚಾರಿಕವಾಗಿಯೂ ಕೋರಿಕೆಯನ್ನು ರಾಜರಿಗೆ ಕಳುಹಿಸಬಾರದು.

**ಮಾನ್ಯ ಸಭಾಧ್ಯಕ್ಷರು :** ನಾನು ಪರಿಸ್ಥಿತಿಯನ್ನು ಗೌರವಾನ್ವಿತ ಸದಸ್ಯರಿಗೆ ವಿವರಿಸಿದ್ದೇನೆ. ಅವರು ತಮ್ಮ ತಿದ್ದುಪಡಿಯನ್ನು ಮಂಡಿಸಲೇಬೇಕೆಂದು ಒತ್ತಾಯಿಸಲು ಬಯಸಿದರೆ.....

**ಶ್ರೀ ಎಸ್. ನಾಗಪ್ಪ :** ಇಲ್ಲಿ ಒತ್ತಾಯಿಸುವ ಪ್ರಶ್ನೆ ಬರುವುದೇ ಇಲ್ಲ. ನಾನು ತಾವು ಹೇಳುತ್ತಿರುವುದನ್ನು ಅರ್ಥಮಾಡಿಕೊಂಡಿದ್ದೇನೆ. ರಾಜ್ಯಗಳ ರಾಜರು ಕೇವಲ ಔಪಚಾರಿಕವಾಗಿ ರಾಜ್ಯದ ಪ್ರಮುಖರಾಗಿರುತ್ತಾರೆ ಮತ್ತು ಔಪಚಾರಿಕವಾಗಿ ಅವರ ಮೂಲಕ ಪತ್ರವ್ಯವಹಾರಗಳು ನಡೆಯುತ್ತವೆ ಎಂದು ತಾವು ನನಗೆ ಮನವರಿಕೆ ಮಾಡಿಕೊಟ್ಟಿದ್ದೀರಿ. ಆದರೆ ನಾನು ಕೇಳುವುದು, ತಮ್ಮ ಎಲ್ಲ ಅಧಿಕಾರವನ್ನೂ ರಾಜ್ಯದ ಜನತೆಗೆ ಹಸ್ತಾಂತರಿಸಿ, ತಮ್ಮ ಬಳಿ ಯಾವುದೇ ಅಧಿಕಾರವನ್ನು ಇಟ್ಟುಕೊಂಡಿರದ ರಾಜರ ಮೂಲಕ ಪತ್ರವ್ಯವಹಾರವನ್ನು ಮಾಡುವುದು ಏಕೆ ಎಂಬುದು.

**ಮಾನ್ಯ ಸಭಾಧ್ಯಕ್ಷರು :** ಸಂಬಂಧಪಟ್ಟ ಸಚಿವರಿಂದಲೇ ನೀಡಲ್ಪಡುವ ಭಾರತ ಸರಕಾರದ ಎಲ್ಲ ಆದೇಶಗಳೂ ಗವರ್ನರ್ ಜನರಲ್ ಅವರ ಮೂಲಕವೇ ಹೊರ ಬೀಳುತ್ತವೆ. ರಾಜ್ಯಗಳೊಂದಿಗೆ ನಡೆಯುವ ಪತ್ರವ್ಯವಹಾರವೂ ಇದೇ ರೀತಿಯಲ್ಲಿ ನಡೆಯುತ್ತವೆ.

**ಶ್ರೀ ಎಸ್. ನಾಗಪ್ಪ :** ನಾನು ನಿಮ್ಮ ಸಲಹೆಯನ್ನು ಒಪ್ಪಿಕೊಂಡಿದ್ದೇನೆ ಮತ್ತು ವಿಷಯದ ಬಗೆಗಿನ ತೀರ್ಮಾನವನ್ನು ನಿಮಗೇ ಬಿಡುತ್ತೇನೆ.

**ಶ್ರೀಮತಿ ಜಿ. ದುರ್ಗಾಬಾಯಿ :** ಮಾನ್ಯ ಸಭಾಧ್ಯಕ್ಷರೆ, ಸದನದ ಹಲವು ಗೌರವಾನ್ವಿತ ಸದಸ್ಯರು ಸೂಚಿಸಿರುವ ಅಂಶಗಳನ್ನು ಕುರಿತು ಪ್ರತಿಕ್ರಿಯೆಯನ್ನು ನೀಡಲು ಹೆಚ್ಚಿನದೇನೂ ಇಲ್ಲ. ಮಾನ್ಯ ಸದಸ್ಯರು ಎತ್ತಿದ ಹಲವು ಅಂಶಗಳಿಗೆ ತಾವೇ ವಿವರಣೆಯನ್ನು ನೀಡಿರುವುದರಿಂದ ನಾನು ತಮಗೆ ಆಭಾರಿಯಾಗಿದ್ದೇನೆ. ಮಾನ್ಯರೆ, ಈ ವಿಷಯದಲ್ಲಿ ವಿವರಣೆಯನ್ನು ನೀಡಿರುವುದರಿಂದ ಶ್ರೀ ಬಿಶ್ವನಾಥ್ ದಾಸ್ ಮತ್ತು ಶ್ರೀ ನಾಗಪ್ಪ ಅವರು ಎತ್ತಿರುವ ಅಂಶಗಳನ್ನು ಕುರಿತು ಮಾತನಾಡಲು ಹೋಗುವುದಿಲ್ಲ.

ಶ್ರೀ ಪಿ.ಎಸ್. ದೇಶ್‌ಮುಖ್ ಅವರ ತಿದ್ದುಪಡಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, 'ಲಿಖಿತ ಬರವಣಿಗೆಯ ಮೂಲಕ ವಿನಂತಿಯನ್ನು ಮಾಡಿ' ಎಂಬ ಪದಗಳು ಅವರು ಸೂಚಿಸಿರುವ ಪದಗಳಿಗಿಂತ ಹೆಚ್ಚು ಸುಖಕರವಾಗಿರುವುದರಿಂದ ಹಾಗೂ ಸೌಜನ್ಯಪೂರ್ಣವಾಗಿರುವುದರಿಂದ ನನ್ನ ಗೊತ್ತುವಳಿಯಲ್ಲಿ ಯಾವ ಬದಲಾವಣೆಯನ್ನೂ ಮಾಡಬೇಕಾಗಿಲ್ಲ. ಇದೇ ಕಾರಣಕ್ಕಾಗಿ ಅವರ ಇನ್ನೊಂದು ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳುವುದಿಲ್ಲ.

ತಮ್ಮ ತಿದ್ದುಪಡಿಯಲ್ಲಿ ಶ್ರೀ ಕಾಮತ್ ಅವರು ಎತ್ತಿದ ಅಂಶವನ್ನು ಕುರಿತು ಅವರ ತಿದ್ದುಪಡಿಯನ್ನು ನಾನು ಸಂತೋಷದಿಂದ ಸ್ವೀಕರಿಸುತ್ತಿದ್ದೇನೆ ಎಂದು ಹೇಳಬಯಸುತ್ತೇನೆ. ಅವು ಕೇವಲ ಶಾಬ್ದಿಕವಾಗಿರುವುದರಿಂದ ನಾನು ಅವರ ತಿದ್ದುಪಡಿಯನ್ನು ಒಪ್ಪಿಕೊಳ್ಳುತ್ತೇನೆ.

ಈ ಸಂದರ್ಭದಲ್ಲಿ ಅವರು ಹೈದರಾಬಾದ್ ಮತ್ತು ಕಾಶ್ಮೀರದ ಪ್ರಶ್ನೆಯನ್ನು ಎತ್ತಿದ್ದಾರೆ. ಈ ರಾಜ್ಯಗಳನ್ನು ಕುರಿತ ಅವರ ಪ್ರಶ್ನೆಗೆ ನಾನು ಉತ್ತರಿಸಬೇಕಾಗಿದೆ ಎಂದು ನನಗೆ ಎನಿಸುತ್ತಿಲ್ಲ. ಈ ಅಂಶಗಳು ನನ್ನ ಈ ಗೊತ್ತುವಳಿಯ ವಿಷಯಕ್ಕೆ ಸಂಬಂಧಪಟ್ಟವೇ ಆಗಿರುವುದಿಲ್ಲ. ನಾನು ಈಗ ನನ್ನ ಗೊತ್ತುವಳಿಯನ್ನು ಸದನದ ಒಪ್ಪಿಗೆಗಾಗಿ ಮಂಡಿಸುತ್ತಿದ್ದೇನೆ.

**ಶ್ರೀ ಎಚ್.ವಿ. ಕಾಮತ್ :** ಮಾನ್ಯ ಸಭಾಧ್ಯಕ್ಷರೆ, ನಾನು ಯಾವ ತಿದ್ದುಪಡಿಯನ್ನೂ ಮಂಡಿಸದೇ ಇರುವುದರಿಂದ ಅದು ಅಪ್ರಕೃತವಾಗಿದೆಯೆಂಬ ಪ್ರಶ್ನೆಯೇ ಬರುವುದಿಲ್ಲ. ಹೈದರಾಬಾದ್ ಮತ್ತು ಕಾಶ್ಮೀರಗಳು ಈ ಸದನದಲ್ಲಿ ತಮ್ಮನ್ನು ಪ್ರತಿನಿಧಿಸುವುದಕ್ಕೆ ಪ್ರತಿನಿಧಿಗಳನ್ನು ಕಳುಹಿಸುತ್ತವೆಯೇ ಎಂಬುದನ್ನು ನಾನು ತಿಳಿದುಕೊಳ್ಳಬೇಕಿತ್ತು. ತಾವು ಇದರ ಮೇಲೆ ಸ್ವಲ್ಪ ಬೆಳಕನ್ನು ಚೆಲ್ಲಬೇಕೆಂದು ಹಾಗೂ ವಿವರಣೆಯನ್ನು ನೀಡಬೇಕೆಂದು ನಾನು ಬಯಸಿದ್ದೆ ಅಷ್ಟೆ.

**ಮಾನ್ಯ ಸಭಾಧ್ಯಕ್ಷರು :** ನಾನೀಗ ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ. ಶ್ರೀ ಕಾಮತ್ ಅವರ ತಿದ್ದುಪಡಿಯು ಈ ರೀತಿ ಇದೆ:

> "ಅನುಸೂಚಿಯ ಮೂರನೆಯ ಕಂಡಿಕೆಯ ಅಡಿಯಲ್ಲಿನ ಉಪ-ಕಂಡಿಕೆ(೧)ರಲ್ಲಿರುವ 'ಸಂವಿಧಾನ ಮಂಡಲಿಯಲ್ಲಿ ಮಾಡಿರುವ ಬಿಡಿಯಾದ ರಾಜ್ಯಗಳಿಗೆ ಅಥವಾ ರಾಜ್ಯಗಳ ಕೂಟಕ್ಕೆ' ಎಂಬ ಪದಗಳಿಗೆ ಬದಲಾಗಿ 'ಸಂವಿಧಾನ ಸಭೆಯಲ್ಲಿ, ರಾಜ್ಯಗಳಿಗೆ – ಅವು ಬಿಡಿಯಾಗಿರಲಿ ಅಥವಾ ಒಂದು ಕೂಟಕ್ಕೆ ಸೇರಿರಲಿ' ಎಂಬ ಪದಗಳನ್ನು ಸೇರಿಸಿಕೊಳ್ಳಬೇಕು."

ಇದನ್ನು ಮಂಡನೆಕಾರರು ಸ್ವೀಕರಿಸಿದ್ದಾರೆ.

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಇನ್ನು ಮುಂದೆ ಡಾ. ದೇಶ್‌ಮುಖ್ ಅವರ ತಿದ್ದುಪಡಿಗಳಿವೆ. ಅವುಗಳಲ್ಲಿ ಒಂದರಲ್ಲಿ ಉಪಯೋಗಿಸಿರುವ ಪದಗಳು ಶ್ರೀ ಕಾಮತ್ ಅವರ ತಿದ್ದುಪಡಿಗಳನ್ನು ಸ್ವೀಕರಿಸಿದಾಗಲೇ ಅದರಲ್ಲಿರುವಂತೆಯೇ ಇರುವುದರಿಂದ ಅವುಗಳನ್ನೂ ಒಪ್ಪಿಕೊಳ್ಳಲಾಗಿವೆ. ಮತ್ತೊಂದರಲ್ಲಿರುವ 'ನಿರ್ದೇಶನ'

ಎಂದೆನ್ನಬೇಕೋ ಅಥವಾ 'ವಿನಂತಿ' ಎನ್ನಬೇಕೋ ಎಂದಿರುವುದು ಕೇವಲ ಅಭಿರುಚಿಯ ಪ್ರಶ್ನೆ. ಅದನ್ನು ಡಾ. ದೇಶ್‌ಮುಖ್ ಅವರು ಹಿಂತೆಗೆದುಕೊಳ್ಳದೆ ಇರುವುದರಿಂದ ಅದನ್ನು ನಾನು ಈಗ ಮತಕ್ಕೆ ಹಾಕುತ್ತಿದ್ದೇನೆ. ತಿದ್ದುಪಡಿಯು ಈ ರೀತಿ ಇದೆ:

" 'ವಿನಂತಿ' ಎಂಬ ಪದದ ಬದಲಿಗೆ 'ನಿರ್ದೇಶನ' ಎಂಬ ಪದವನ್ನು ಸೇರಿಸಿಕೊಳ್ಳಬೇಕು."

ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ನಾನು ಈಗ ಡಾ. ದೇಶ್‌ಮುಖ್ ಅವರು ಅನುಸೂಚಿಯ ೩(೧) ಖಂಡಕ್ಕೆ ಮಾಡಬಯಸಿರುವ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತಿದ್ದೇನೆ.

ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು.

ಶ್ರೀ ಬಿಶ್ವನಾಥ್ ದಾಸ್ ಅವರ ತಿದ್ದುಪಡಿಯನ್ನು ಸದನದ ಅನುಮತಿಯ ಮೇರೆಗೆ ಹಿಂತೆಗೆದುಕೊಳ್ಳಲಾಯಿತು.

ಶ್ರೀ ಎಸ್. ನಾಗಪ್ಪ ಅವರ ತಿದ್ದುಪಡಿಯನ್ನು ಸದನದ ಅನುಮತಿಯ ಮೇರೆಗೆ ಹಿಂತೆಗೆದುಕೊಳ್ಳಲಾಯಿತು.

**ಮಾನ್ಯ ಸಭಾಧ್ಯಕ್ಷರು** : ತಿದ್ದುಪಡಿಗೆ ಒಳಪಟ್ಟ ಪ್ರಸ್ತಾವವನ್ನು ಈಗ ಮತಕ್ಕೆ ಹಾಕಲಾಗಿದೆ.

**ಶ್ರೀ ಎಚ್.ವಿ. ಕಾಮತ್** : ಹೈದರಾಬಾದ್ ಮತ್ತು ಕಾಶ್ಮೀರಗಳು ತಮ್ಮ ಪ್ರತಿನಿಧಿಗಳನ್ನು ಈ ಸದನಕ್ಕೆ ಕಳುಹಿಸುತ್ತಾರೆಯೇ ಎಂದು ತಾವು ತಿಳಿಸುವಿರಾ?

**ಮಾನ್ಯ ಸಭಾಧ್ಯಕ್ಷರು** : ಈ ವಿಷಯದ ಮೇಲೆ ಯಾವುದೇ ಮಾಹಿತಿಯನ್ನು ಕೊಡುವ ಸ್ಥಿತಿಯಲ್ಲಿ ನಾನು ಇಲ್ಲ. ಬಯಸಿದ್ದರೆ, ಸರಕಾರವು ಈ ಮಾಹಿತಿಯನ್ನು ನಿಮಗೆ ನೀಡಬಹುದಿತ್ತು.

ತಿದ್ದುಪಡಿಗೆ ಒಳಪಟ್ಟ ಪ್ರಸ್ತಾವವನ್ನು ಈಗ ಮತಕ್ಕೆ ಹಾಕಲಾಗಿದೆ.

ತಿದ್ದುಪಡಿಮಾಡಿದಂತೆ ಪ್ರಸ್ತಾವವು ಅಂಗೀಕಾರವಾಯಿತು.

**ಮಾನ್ಯ ಸಭಾಧ್ಯಕ್ಷರು** : ಶ್ರೀಮತಿ ದುರ್ಗಾಬಾಯಿಯವರು ತಮ್ಮ ಎರಡನೆಯ ಪ್ರಸ್ತಾವವನ್ನು ಈಗ ಮಂಡಿಸಬಹುದು.

**ಅನುಸೂಚಿಯ ಅನುಬಂಧಕ್ಕೆ ತಿದ್ದುಪಡಿ**

**ಶ್ರೀಮತಿ ಜಿ. ದುರ್ಗಾಬಾಯಿ** : ಮಾನ್ಯ ಸಭಾಧ್ಯಕ್ಷರೆ, ಈ ಪ್ರಸ್ತಾವವನ್ನು ಮಂಡಿಸಲು ನಾನು ತಮ್ಮ ಅನುಮತಿಯನ್ನು ಕೋರುತ್ತಿದ್ದೇನೆ.

"ಸಂವಿಧಾನ ರಚನಾಸಭೆಯ ದಿನಾಂಕ ೧೯೪೭ರ ಆಗಸ್ಟ್ ೩ರ ಸಿಎ/೪೩/ಎಸ್‌ಇಆರ್/೪೭–II ಸೂಚನಾ ಪತ್ರದಲ್ಲಿ ನಮೂದಿಸಿರುವ ಉಪಬಂಧಗಳನ್ನು ಈ ಕೆಳಗಿನ ತಿದ್ದುಪಡಿಯೊಂದಿಗೆ ಸೇರಿಸಿಕೊಂಡು ಅವುಗಳನ್ನು ೧೯೪೭ರ ಆಗಸ್ಟ್ ೩ರಿಂದಲೇ ಜಾರಿಗೆ ಬರುವಂತೆ ಸಂವಿಧಾನ ರಚನಾಸಭೆಯ ನಿಯಮಗಳ ಭಾಗವಾಗಿ ಪರಿಗಣಿಸತಕ್ಕದ್ದು:

ಅನುಸೂಚಿಯ ಅನುಬಂಧ:

ಅನುಸೂಚಿಯಲ್ಲಿರುವ ಅನುಬಂಧಕ್ಕೆ ಬದಲಾಗಿ ಈ ಕೆಳಗಿನದನ್ನು ಅನುಬಂಧವಾಗಿ ಸೇರಿಸಿಕೊಳ್ಳತಕ್ಕದ್ದು:

# ಅನುಬಂಧ

## ಭಾಗ – ೧

| ರಾಜ್ಯ ಅಥವಾ ರಾಜ್ಯಗಳ ಹೆಸರು | ಸಂವಿಧಾನ ರಚನಾಸಭೆಯಲ್ಲಿ ನೀಡಿರುವ ಸ್ಥಾನಗಳ ಸಂಖ್ಯೆ | ಸಂವಿಧಾನ ರಚನಾಸಭೆಯಲ್ಲಿ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಅಧಿಕಾರಿ |
|---|---|---|
| ೧ | ೨ | ೩ |
| ಹೈದರಾಬಾದ್ | ೧೬ | ಹೈದರಾಬಾದಿನ ರಾಜರು |
| ಮೈಸೂರು | ೭ | ಮೈಸೂರಿನ ರಾಜರು |
| ಕಾಶ್ಮೀರ | ೪ | ಕಾಶ್ಮೀರದ ರಾಜರು |
| ಬರೋಡ | ೩ | ಬರೋಡದ ರಾಜರು |
| ತಿರುವಾಂಕೂರು | ೬ | ತಿರುವಾಂಕೂರಿನ ರಾಜರು |
| ಕೊಚ್ಚಿನ್ | ೧ | ಕೊಚ್ಚಿನ್‌ನ ರಾಜರು |
| ಜೋಧ್‌ಪುರ | ೨ | ಜೋಧ್‌ಪುರದ ರಾಜರು |
| ಜಯಪುರ | ೩ | ಜಯಪುರದ ರಾಜರು |
| ಬಿಕಾನೇರ್ | ೧ | ಬಿಕಾನೇರ್‌ನ ರಾಜರು |
| ಭೂಪಾಲ್ | ೧ | ಭೂಪಾಲ್‌ನ ರಾಜರು |
| ಕೊಲ್ಹಾಪುರ | ೧ | ಕೊಲ್ಹಾಪುರದ ರಾಜರು |
| ಮಯೂರ್‌ಭಂಜ್ | ೧ | ಮಯೂರ್‌ಭಂಜ್‌ನ ರಾಜರು |
| ಸಿಕ್ಕಿಮ್ ಮತ್ತು ಕೂಚ್ ಬೆಹಾರ್ | ೧ | ಕೂಚ್ ಬೆಹಾರ್‌ನ ರಾಜರು |
| ತ್ರಿಪುರ, ಮಣಿಪುರ, ಖಾಸಿ ರಾಜ್ಯಗಳು | ೧ | ತ್ರಿಪುರದ ರಾಜರು |
| ರಾಮಪುರ ಬನಾರಸ್ | ೧ | ರಾಮಪುರದ ರಾಜರು |
| ಒಟ್ಟು | ೪೯ | |

## ಭಾಗ – ೨

| ರಾಜ್ಯ ಅಥವಾ ರಾಜ್ಯಗಳ ಹೆಸರು | ಸಂವಿಧಾನ ರಚನಾಸಭೆಯಲ್ಲಿ ನೀಡಿರುವ ಸ್ಥಾನಗಳ ಸಂಖ್ಯೆ | ಸಂವಿಧಾನ ರಚನಾಸಭೆಯಲ್ಲಿ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಅಧಿಕಾರಿ |
|---|---|---|
| ೧ | ೨ | ೩ |
| (೨೩) | **ಒರಿಸ್ಸಾ ರಾಜ್ಯಗಳು** | |
| ಅಥ್‌ಗರ್ | | |
| ಅಥ್‌ಮಲಿಕ್ | | |
| ಬಮ್ರಾ | | |
| ಬಾರಂಬಾ | | |
| ಬೌಧ್ | | |
| ಬೊನಾಯ್ | | |
| ದಸ್‌ಪಲ್ಲಾ | | |
| ಧೆಂಕಣಲ್ | | |
| ಗಂಗಾಪುರ | | |
| ಹಿಂದೋಳ್ | | |
| ಕಲಹಂದಿ | ೪ | |
| ಕಿಯೋಂಜ್ಹಾರ್ | | |

| ರಾಜ್ಯ ಯಾ ರಾಜ್ಯಗಳ ಹೆಸರು | ಸಂವಿಧಾನ ರಚನಾಮಂಡಲಿಯಲ್ಲಿ ನೀಡಿರುವ ಸ್ಥಾನಗಳ ಸಂಖ್ಯೆ | ಸಂವಿಧಾನ ರಚನಾಮಂಡಲಿಯಲ್ಲಿ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಅಧಿಕಾರಿ |
|---|---|---|
| ೧ | ೨ | ೩ |
| ಖಿಚಿಡ್‌ಪರ | | ಒರಿಸ್ಸಾದ ರಾಜ್ಯಪಾಲರು |
| ನರಸಿಂಗ್‌ಪುರ | | |
| ನಯಾಗರ್ | | |
| ನೀಲಗಿರಿ | | |
| ಪಾಲ್ ಲಹರ | | |
| ಪಾಟ್ನ | | |
| ರಾಯ್‌ರಖೋಲ್ | | |
| ರಾಮ್‌ಪುರ | | |
| ಸೋನೆಪುರ | | |
| ತಲಚೇರ್ | | |
| ತಿಗಿರಿಯಾ | | |
| (೧೫) | **ಮಧ್ಯಪ್ರಾಂತ್ಯಗಳು ಮತ್ತು ಬೇರಾರ್ ರಾಜ್ಯಗಳು** | |
| ಬಸ್ತಾರ್ | | |
| ಚಂಘಭಕಾರ್ | | |
| ಭೂಯಿಕದನ್ | | |
| ಜಶ್‌ಪುರ್ | | |
| ಕಾಂಕೇರ್ | | |
| ಕವರ್ಧ | | |
| ಕೈರಾಘರ್ | | |
| ಕೊರಿಯಾ | | |
| ನಂದಗಾಂವ್ | | |
| ರಾಯ್‌ಘರ್ | ೩ | ಮಧ್ಯಪ್ರಾಂತ್ಯ ಮತ್ತು ಬೆರಾರ್‌ನ ರಾಜ್ಯಪಾಲರು |
| ಸಕ್ತಿ | | |
| ಸಾರಂಗರ್ | | |
| ಸುರ್ಗುಜಾ | | |
| ಉದಯ್‌ಪುರ | | |
| ಮಕ್ರೈ | | |
| | **ಮದ್ರಾಸ್ ರಾಜ್ಯಗಳು** | |
| ಬಂಗನಪಲ್ಲೆ | | |
| ಪುದುಕೋಟೆ | ೧ | ಮದ್ರಾಸಿನ ರಾಜ್ಯಪಾಲರು |
| (೩೫) | **ಬಾಂಬೆ ರಾಜ್ಯ** | |
| ರಾಜ್‌ಪಿಪ್ಲಾ | | |
| ಪಲನ್‌ಪುರ | | |
| ಕಾಂಬೆ | | |
| ಧರಮ್‌ಪುರ | | |
| ಬಾಲಸಿನೋರ್ | | |
| ಬಾರಿಯಾ | | |
| ಛೋಟಾ ಉದೆಪುರ | | |
| ಸಂತ ಲುನಾವಾಡ | | |
| ಬನ್ಸದ | | |
| ಸಚಿನ್ | | |
| ಜವಹರ್ | | |
| ದಾಂತ | | |

| ರಾಜ್ಯ ಅಥವಾ ರಾಜ್ಯಗಳ ಹೆಸರು | ಸಂವಿಧಾನ ರಚನಾಸಭೆಯಲ್ಲಿ ನೀಡಿರುವ ಸ್ಥಾನಗಳ ಸಂಖ್ಯೆ | ಸಂವಿಧಾನ ರಚನಾಸಭೆಯಲ್ಲಿ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಅಧಿಕಾರಿ |
|---|---|---|
| ಜಂಜೀರಾ | | |
| ಸಾಂಗ್ಲಿ | | |
| ಸಾವಂತವಾಡಿ | | |
| ಮುಧೋಳ್ | | |
| ಭೋರ್ | | |
| ಜಮಖಂಡಿ | ೪ | ಬಾಂಬೆಯ ರಾಜ್ಯಪಾಲರು |
| ಮೀರಜ್ (ಹಿರಿಯ) | | |
| ಮೀರಜ್ (ಕಿರಿಯ) | | |
| ಕುರುಂದ್‌ವಾಡ್(ಹಿರಿಯ) | | |
| ಕುರುಂದ್‌ವಾಡ್ (ಕಿರಿಯ) | | |
| ಅಕಲ್‌ಕೋಟ್ | | |
| ಫಲ್ತಾನ್ | | |
| ಜಾತ್ | | |
| ಔಂಧ್ | | |
| ರಾಮದುರ್ಗ | | |
| ಈದರ್ | | |
| ರಾಧಾನ್‌ಪುರ | | |
| ಶಿರೋಹಿ | | |
| ಸವಣೂರ್ | | |
| ವಾಡಿ | | |
| ವಿಜಯನಗರ | | |
| ಜಂಬೂಘೋಡ | | |
| ೨೭೧ ಕಿರಿಯ ರಾಜ್ಯಗಳು (ಥಾಣೆಗಳು ಇ.) | | |
| (೨೧) | **ಹಿಮಾಚಲ ಪ್ರದೇಶ** | |
| ಬಶಹ್ರ್ | | |
| ಸಿರ್ಮೂರ್ | | |
| ಚಂಬಾ | | |
| ಮಂಡಿ | | |
| ಸುಕೇತ್ | | |
| ಬೇಘಾಲ್ | | |
| ಭಗತ್ | | |
| ಬಲ್ಸಾನ್ | | |
| ಭಜ್ಜಿ | | |
| ಬಿಜಾ | | |
| ದಾರಕೋಟಿ | | |
| ಧಾಮಿ | | |
| ಜುಬ್ಬಾಲ್ | ೧ | ಮುಖ್ಯ ಆಯುಕ್ತರು, ಹಿಮಾಚಲ ಪ್ರದೇಶ |
| ಕಿಯೋಂಥಾಲ್ | | |
| ಕುಮ್ಹರ್ಸಿಯನ್ | | |
| ಕುಮಿಹಾರ್ | | |
| ಕುಥಾರ್ | | |
| ಮಹ್ಲೋಗ್ | | |
| ಮಂಗಲ್ | | |

| ರಾಜ್ಯ ಯಾ ರಾಜ್ಯಗಳ ಹೆಸರು | ಸಂವಿಧಾನ ರಚನಾ ಮಂಡಲಿಯಲ್ಲಿ ನೀಡಿರುವ ಸ್ಥಾನಗಳ ಸಂಖ್ಯೆ | ಸಂವಿಧಾನ ರಚನಾಮಂಡಲಿಯಲ್ಲಿ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಅಧಿಕಾರಿ |
|---|---|---|
| ಸಾಂಗ್ರಿ | | |
| ಥರೋಚ್ | | |
| ಕಾಥೇವಾಡದ ಸಂಯುಕ್ತ ರಾಜ್ಯಗಳು (ಸೌರಾಷ್ಟ್ರ) | ೪ | ರಾಜ್ಯದ ರಾಜಪ್ರಮುಖರು |
| ಮತ್ಸ್ಯದ ಸಂಯುಕ್ತ ರಾಜ್ಯಗಳು | ೨ | ರಾಜ್ಯದ ರಾಜಪ್ರಮುಖರು |
| ರಾಜಾಸ್ಥಾನದ ಸಂಯುಕ್ತ ರಾಜ್ಯಗಳು | ೪ | ರಾಜ್ಯದ ರಾಜಪ್ರಮುಖರು |
| ವಿಂಧ್ಯಪ್ರದೇಶದ ಸಂಯುಕ್ತ ರಾಜ್ಯಗಳು | ೪ | ರಾಜ್ಯದ ರಾಜಪ್ರಮುಖರು |
| ಗ್ವಾಲಿಯರ್, ಇಂದೋರ್, ಮಾಳವ ಸಂಯುಕ್ತ ರಾಜ್ಯಗಳು(ಮಧ್ಯ ಭಾರತ) | ೭ | ರಾಜ್ಯದ ರಾಜಪ್ರಮುಖರು |
| ಪಾಟಿಯಾಲ ಮತ್ತು ಪೂರ್ವ ಪಂಜಾಬ್ ಸಂಯುಕ್ತ ರಾಜ್ಯ | ೩ | ರಾಜ್ಯದ ರಾಜಪ್ರಮುಖರು |
| ಕಛ್ | ೧ | ಮುಖ್ಯ ಆಯುಕ್ತರು, ಕಛ್ |
| ಜುನಾಗಡ್ | ೧ | ಜುನಾಗಡ್‌ನ ಆಡಳಿತಾಧಿಕಾರಿ |
| | **ಉಳಿದ ರಾಜ್ಯಗಳು** | |
| ಜೈಸಲ್ಮೇರ್ | | |
| ಸಂಡೂರು | | |
| ತೆಹ್ರಿ–ಗರ್ವ್ಹಾಲ್ | | |
| ಬಿಲಾಸ್‌ಪುರ್ | | ಮುಖ್ಯ ಆಯುಕ್ತರು, ಹಿಮಾಚಲ ಪ್ರದೇಶ |
| ಬಿಹಾರ್ ರಾಜ್ಯಗಳು | | |
| ಸೇರೈಕೆಲಾ | | |
| ಖರ್ಸವಾನ್ | ೧ | |
| ಪೂರ್ವಪಂಜಾಬ್ ರಾಜ್ಯಗಳು | | |
| ಲೋಹರು | | |
| ಪಟೌಡಿ | | |
| ದುಜನ | | |
| ಒಟ್ಟು | ೪೦ | |
| ಭಾಗ ೧ ಮತ್ತು ಭಾಗ ೨ರ ಮೊತ್ತ | ೮೯ | |

**ಶ್ರೀ ಎಚ್.ವಿ. ಕಾಮತ್ :** ಮಾನ್ಯ ಸಭಾಧ್ಯಕ್ಷರೆ, ನಾನು ಸೂಚನೆ ನೀಡಿ ಮಂಡಿಸುತ್ತಿರುವ ತಿದ್ದುಪಡಿಯು ಅತಿ ಸರಳವಾಗಿದೆ ಮತ್ತು ಭಾಷೆಗೆ ಸಂಬಂಧಿಸಿದುದಾಗಿದೆ. ಇದರ ಉದ್ದೇಶ ಅಲ್ಲಿನ ಉಕ್ತಿಗೆ ನಿರ್ದಿಷ್ಟತೆಯನ್ನು ತಂದುಕೊಡುವುದೇ ಆಗಿದೆ.

"ಅನುಸೂಚಿಗೆ ನೀಡಲು ಉದ್ದೇಶಿಸಿರುವ ಅನುಬಂಧದ ಎರಡನೆಯ ಭಾಗದಲ್ಲಿನ ಮೂರನೆಯ ಅಂಕಣದಲ್ಲಿ ಮಧ್ಯಪ್ರಾಂತ್ಯಗಳು ಮತ್ತು ಬೇರಾರ್‌ನ ಶೀರ್ಷಿಕೆಯ ಅಡಿಯಲ್ಲಿ 'ಗವರ್ನರ್ ಆಫ್ ಸೆಂಟ್ರಲ್ ಪ್ರಾವಿನ್ಸಸ್ ಅಂಡ್ ಬೇರಾರ್' ಪದಗಳಿಗೆ ಬದಲಾಗಿ 'ಗವರ್ನರ್ ಆಫ್ ದ ಸೆಂಟ್ರಲ್ ಪ್ರಾವಿನ್ಸ್ ಅಂಡ್ ಬೇರಾರ್' ಎಂದು ಆದೇಶಿಸಬೇಕು."

ಅಧಿಕೃತ ದಾಖಲೆಗಳಲ್ಲಿ ಯಾವ ಹೆಸರಿನಿಂದ ನನ್ನ ಪ್ರಾಂತ್ಯವನ್ನು ಕರೆಯಲಾಗುತ್ತಿದೆ ಎಂಬುದರತ್ತ ನಾನು ತಮ್ಮ ಮತ್ತು ಸದನದ ಗಮನವನ್ನು ಸೆಳೆಯಬಯಸುತ್ತೇನೆ. ನಮ್ಮೆಲ್ಲರ ಬಳಿ ಇರುವ ನಮ್ಮ ಕರಡು ಸಂವಿಧಾನದ ಒಂದನೆಯ ಅನುಸೂಚಿಯ ಮೊದಲ ಭಾಗದ ೧೫೭ನೆಯ ಪುಟದಲ್ಲಿ ಎಲ್ಲ ಪ್ರಾಂತ್ಯಗಳ ಹೆಸರನ್ನೂ ಪಟ್ಟಿ ಮಾಡಿಕೊಡಲಾಗಿದೆ. ಅದರಲ್ಲಿ ನನ್ನ ಪ್ರಾಂತ್ಯದ ಹೆಸರನ್ನು 'ದ ಸೆಂಟ್ರಲ್ ಪ್ರಾವಿನ್ಸಸ್ ಅಂಡ್ ಬೇರಾರ್' ಎಂದು ನೀಡಲಾಗಿದೆ.

**ಮಾನ್ಯ ಸಭಾಧ್ಯಕ್ಷರು :** ಈ ತಿದ್ದುಪಡಿಗೆ ಬೆಂಬಲವಾಗಿ ನೀವು ನಿಮ್ಮ ವಾದಗಳ ಮೂಲಕ ಸಾಕ್ಷ್ಯವನ್ನು ಒದಗಿಸಬೇಕಾದ ಅಗತ್ಯವಿಲ್ಲ.

**ಶ್ರೀ ಎಚ್.ವಿ. ಕಾಮತ್** : ನಾನು ನನ್ನ ತಿದ್ದುಪಡಿಯನ್ನು ಸದನದ ಒಪ್ಪಿಗೆಗಾಗಿ ಮಂಡಿಸುತ್ತಿದ್ದೇನೆ.

**ಮಾನ್ಯ ಸಭಾಧ್ಯಕ್ಷರು** : ಇದಕ್ಕೆ ನಿಮ್ಮ ಒಪ್ಪಿಗೆಯಿದೆಯೆ?

**ಶ್ರೀಮತಿ ಜಿ. ದುರ್ಗಾಬಾಯಿ** : ನಾನು ಅದನ್ನು ಒಪ್ಪಿಕೊಂಡಿದ್ದೇನೆ.

**ಮಾನ್ಯ ಸಭಾಧ್ಯಕ್ಷರು** : 'ಸೆಂಟ್ರಲ್ ಪ್ರಾವಿನ್ಸಸ್ ಅಂಡ್ ಬೇರಾರ್' ಎಂಬ ಪದಗಳ ಹಿಂದೆ 'ದ' ಎಂಬ ಪದವನ್ನು ಸೇರಿಸಬೇಕು ಎಂದು ಈ ತಿದ್ದುಪಡಿಯು ಹೇಳುತ್ತದೆ.

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ತಿದ್ದುಪಡಿಗೆ ಒಳಪಟ್ಟ ಗೊತ್ತುವಳಿಯನ್ನು ಮತಕ್ಕೆ ಹಾಕುತ್ತಿದ್ದೇನೆ.

ತಿದ್ದುಪಡಿಯಾದಂತೆ ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

## ಹೊಸ ೩೮-ವಿ ನಿಯಮಕ್ಕೆ ಸೇರ್ಪಡೆಗಳು

**ಶ್ರೀಮತಿ ಜಿ. ದುರ್ಗಾಬಾಯಿ** : ಮಾನ್ಯರೆ, ಸಂವಿಧಾನ ರಚನಾಸಭೆಯ ನಿಯಮಗಳಿಗೆ ತರಲಿಚ್ಛಿಸಿರುವ ತಿದ್ದುಪಡಿಗಳನ್ನು ಸದನದ ಗಮನಕ್ಕೆ ತರಲು ತಮ್ಮ ಅನುಮತಿಯನ್ನು ಬೇಡುತ್ತೇನೆ.

೩೮-ಯು ನಿಯಮದ ನಂತರ ಈ ಕೆಳಗಿನ ನಿಯಮವನ್ನು ಸೇರಿಸಬೇಕು –

"೩೮-ವಿ. ೩೮-ಎ ಯಲ್ಲಿ ಹೇಳಿರುವಂತೆ ಯಾವುದಾದರೂ ಒಂದು ಮಸೂದೆಯನ್ನು ಸಂವಿಧಾನ ಸಭೆಯು ಅಂಗೀಕರಿಸಿದರೆ, ಅದಕ್ಕೆ ರಾಷ್ಟ್ರಪತಿಗಳು ತಮ್ಮ ಸಹಿಯನ್ನು ಹಾಕುವುದರ ಮೂಲಕ ಅದನ್ನು ಅಧಿಕೃತಗೊಳಿಸುತ್ತಾರೆ. ಹಾಗೆ ಅಧಿಕೃತಗೊಂಡ ಮಸೂದೆಯು ಅಧಿನಿಯಮವಾಗುತ್ತದೆ ಮತ್ತು ಅದನ್ನು ಭಾರತದ ರಾಜ್ಯಪತ್ರದಲ್ಲಿ ಪ್ರಕಟಗೊಳಿಸಲಾಗುತ್ತದೆ."

ಮಾನ್ಯರೆ, ನಾನು ಈ ಪ್ರಸ್ತಾವವನ್ನು ಸದನದ ಒಪ್ಪಿಗೆಗೆ ಮಂಡಿಸುವ ಮೊದಲು, ಈ ತಿದ್ದುಪಡಿಯು ಏಕೆ ಅಗತ್ಯವಾಗಿದೆಯೆಂಬುದರ ಬಗ್ಗೆ ಎರಡು ಮಾತುಗಳನ್ನು ಆಡುವುದು ನನ್ನ ಕರ್ತವ್ಯವಾಗಿದೆಯೆಂದು ಭಾವಿಸುತ್ತೇನೆ. ಮಾನ್ಯರೆ, ಹಿಂದಿನ ಸಲ, ಅಂದರೆ ಜನವರಿ ೨೭ರಂದು ಸೇರಿದ್ದ ಸಂವಿಧಾನ ರಚನಾಸಭೆಯ ಅಧಿವೇಶನದಲ್ಲಿ ಸಂವಿಧಾನ ರಚನಾಸಭೆಯ ನಿಯಮಗಳಿಗೆ ಕೆಲವೊಂದು ತಿದ್ದುಪಡಿಗಳನ್ನು ಮಾಡಬೇಕಾಗಿದೆಯೆಂಬ ಪ್ರಸ್ತಾವವನ್ನು ಅಂಗೀಕರಿಸಲಾಗಿತ್ತು. ೩೮-ಎ ನಿಯಮದ ಅಡಿಯಲ್ಲಿ ಮಸೂದೆಗಳನ್ನು ಅಂಗೀಕರಿಸುವುದಕ್ಕಾಗಿ ೩೮-ವಿ ನಿಯಮವನ್ನು ಸೇರಿಸಬೇಕೆಂಬುದೂ ಅವುಗಳಲ್ಲಿ ಒಂದಾಗಿತ್ತು. ಉದ್ದೇಶಿತ ೩೮-ವಿ ನಿಯಮವು ಸದನದ ಮಾನ್ಯ ಸದಸ್ಯರ ನಡುವೆ ಸಾಕಷ್ಟು ವಿವಾದಕ್ಕೆ ಗುರಿಯಾಗಿತ್ತು. ವಿವಾದಿತ ಅಂಶವೆಂದರೆ, ಭಾರತದ ಸ್ವಾತಂತ್ರ್ಯ ಅಧಿನಿಯಮ ಅಥವಾ ೧೯೩೫ರ ಭಾರತ ಸರ್ಕಾರದ ಅಧಿನಿಯಮಕ್ಕೆ ಮಾಡುವ ತಿದ್ದುಪಡಿಯು ಒಮ್ಮೆ ಸಂವಿಧಾನ ರಚನಾಸಭೆಯಲ್ಲಿ ಅಂಗೀಕೃತವಾದರೆ, ಒಪ್ಪಿಗೆಗಾಗಿ ಗವರ್ನರ್ ಜನರಲ್ ಅವರ ಬಳಿಗೆ ಹೋಗಬೇಕಾಗಿಲ್ಲವೆಂದೂ, ಹಾಗೆ ಹೋದರೆ ಅದರಿಂದ ಸಂವಿಧಾನ ರಚನಾಸಭೆಯ ಸಾರ್ವಭೌಮತ್ವಕ್ಕೆ ಧಕ್ಕೆಯಾಗುತ್ತದೆಯೆಂದೂ ವಾದಿಸಲಾಗಿತ್ತು. ಅಂತಹ ನಿಯಮವನ್ನು ಒಪ್ಪಿಕೊಂಡರೆ, ಮುಂದಿನ ದಿನಗಳಲ್ಲಿ ಗವರ್ನರ್ ಜನರಲ್ ಅವರು ಸದ್ಯ ಜಾರಿಯಲ್ಲಿರುವ ಸಂವಿಧಾನವನ್ನು ತಿದ್ದುಪಡಿ ಮಾಡಲು ತಮ್ಮ ಒಪ್ಪಿಗೆಯನ್ನು ನೀಡಬಹುದು ಅಥವಾ ನೀಡದೆ ಅದನ್ನು ತಡೆಹಿಡಿಯಬಹುದು ಎಂಬುದೂ ಒಂದು ಆಕ್ಷೇಪಣೆಯಾಗಿತ್ತು. ಕೇಳಿಬಂದ ಮತ್ತೊಂದು ಅಭಿಪ್ರಾಯವೆಂದರೆ, ಕರಡು ಸಂವಿಧಾನವನ್ನು ಅಂಗೀಕರಿಸುವುದು ಹಾಗೂ ಸದ್ಯ ಇರುವ ಸಂವಿಧಾನವನ್ನು ತಿದ್ದುಪಡಿ ಮಾಡುವುದು – ಇವೆರಡು ಪ್ರಕ್ರಿಯೆಗಳ ನಡುವೆ ಯಾವ ವ್ಯತ್ಯಾಸವೂ ಇರಬಾರದು ಎಂಬುದು. ಈ ಆಕ್ಷೇಪಣೆಗಳೆಲ್ಲವನ್ನೂ ಅಂದು ಚರ್ಚೆ ಮಾಡಲಾಯಿತು ಮತ್ತು ದೀರ್ಘ ಚರ್ಚೆಯ ಅನಂತರ ಉದ್ದೇಶಿತ ನಿಯಮವನ್ನು ಮತ್ತೆ ಪರಿಶೀಲಿಸಲು ಕರಡು ರಚನಾ ಸಮಿತಿಗೆ ಕಳುಹಿಸಬೇಕೆಂಬ ಶ್ರೀ ಕಾಮತ್ ಅವರ ಸಲಹೆಯನ್ನು ಅಂಗೀಕರಿಸಲಾಯಿತು.

ಸದನವು ಈ ಸಲಹೆಯನ್ನು ಒಪ್ಪಿಕೊಂಡು ಈ ಕರಡು ನಿಯಮವನ್ನು ಮತ್ತೆ ಕರಡು ರಚನಾ ಸಮಿತಿಗೆ ಕಳುಹಿಸಲಾಯಿತು. ಕರಡು ರಚನಾ ಸಮಿತಿಯು ಈ ನಿಯಮವನ್ನು ಪರಿಶೀಲಿಸಿದೆ ಮತ್ತು ಅದನ್ನು ಈಗ ಸದನದ ಮುಂದೆ ಇರಿಸಲಾಗಿದೆ. ಮಾನ್ಯರೆ, ತಿದ್ದಿದ ಈ ನಿಯಮದ ಪ್ರಕಾರ, ಒಮ್ಮೆ ಸಂವಿಧಾನ ರಚನಾಸಭೆಯು ೩೮–ಎ ನಿಯಮದ ಪ್ರಕಾರ ಅಂಗೀಕರಿಸಿದ ಯಾವುದೇ ಮಸೂದೆಗೆ ಗವರ್ನರ್ ಜನರಲ್ ಅವರ ಒಪ್ಪಿಗೆ ಅಗತ್ಯವಾಗುವುದಿಲ್ಲ. ಮೊದಲಿನ ಕರಡು ಈ ರೀತಿ ಇದ್ದಿತು:

"ಸಂವಿಧಾನ ರಚನಾಸಭೆಯು ೩೮–ಎ ನಿಯಮದ ಅಡಿಯಲ್ಲಿ ಒಂದು ಮಸೂದೆಯನ್ನು ಅಂಗೀಕರಿಸಿದರೆ, ಅಧ್ಯಕ್ಷರು ಸಹಿಮಾಡಿದ ಅದರ ಒಂದು ಪ್ರತಿಯನ್ನು ಅಂಗೀಕಾರಕ್ಕಾಗಿ ಗವರ್ನರ್ ಜನರಲ್ ಅವರಿಗೆ ಕಳುಹಿಸಬೇಕು. ಗವರ್ನರ್ ಜನರಲ್ ಅವರು ಒಪ್ಪಿಗೆಯನ್ನು ನೀಡಿದ ಬಳಿಕ ಅದು ಕಾನೂನಾಗುತ್ತದೆ ಮತ್ತು ಅದನ್ನು ಭಾರತದ ರಾಜ್ಯಪತ್ರದಲ್ಲಿ ಪ್ರಕಟಿಸಬೇಕು."

ಮಾನ್ಯ ಸದಸ್ಯರು ಇದರಲ್ಲಿ ಈಗ ಮಾಡಿರುವ ಬದಲಾವಣೆಯಲ್ಲಿನ ಮಹತ್ವವನ್ನು ಗುರುತಿಸುತ್ತಾರೆಂದು ಮತ್ತು ಈ ವಿಷಯವನ್ನು ಕುರಿತು ಮತ್ತಷ್ಟು ವಿವರಣೆಯನ್ನು ನೀಡುವ ಅಗತ್ಯವಿಲ್ಲವೆಂದು ನಾನು ಭಾವಿಸುತ್ತೇನೆ. ನಾನು ಈಗ ಈ ಪ್ರಸ್ತಾವವನ್ನು ಒಪ್ಪಿಗೆಗಾಗಿ ಸದನದ ಮುಂದೆ ಇರಿಸುತ್ತಿದ್ದೇನೆ.

**ಮಾನ್ಯ ಸಭಾಧ್ಯಕ್ಷರು** : ಶ್ರೀ ಕಾಮತ್ ಅವರು ಇದರಲ್ಲಿರುವ **'ಈಸ್'** ಎಂಬ ಪದಕ್ಕೆ ಬದಲಾಗಿ **'ಹ್ಯಾಸ್ ಬೀನ್'** ಎಂಬ ಪದಗಳನ್ನು ಸೇರಿಸಬೇಕೆಂಬ ತಿದ್ದುಪಡಿಯನ್ನು ಸೂಚಿಸಿದ್ದಾರೆ.

**ಶ್ರೀ ಎಚ್.ವಿ. ಕಾಮತ್** : ಮಾನ್ಯ ಸಭಾಧ್ಯಕ್ಷರೆ, ನಾನು ನನ್ನ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ:

"ಉದ್ದೇಶಿತ ೩೮–ವಿ ನಿಯಮದಲ್ಲಿ ಇರುವ 'ವೆನ್ ದ ಬಿಲ್ ಈಸ್ ಅಥೆಂಟಿ ಕೇ ಟೆಡ್' ಎಂಬುದಕ್ಕೆ ಬದಲಾಗಿ 'ವೆನ್ ದ ಬಿಲ್ ಹ್ಯಾಸ್ ಬೀನ್ ಅಥೆಂಟಿಕೇಟೆಡ್' ಎಂಬುದನ್ನು ಸೇರಿಸಬೇಕು."

ಈ ತಿದ್ದುಪಡಿಯು ಈ ಹಿಂದೆ ನನ್ನ ಮಾನ್ಯ ಮಿತ್ರರಾದ ಶ್ರೀಮತಿ ದುರ್ಗಾಬಾಯಿಯವರು ಮಂಡಿಸಿದ್ದ ಮತ್ತೊಂದು ಪ್ರಸ್ತಾವಕ್ಕೆ ಸೂಚಿಸಿದ್ದ ತಿದ್ದುಪಡಿಯ ರೀತಿಯಲ್ಲಿಯೇ ಇದೆ ಮತ್ತು ಅದನ್ನು ಸದನವು ಅಂಗೀಕರಿಸಿತ್ತು. ಈ ಬದಲಾವಣೆಯು ಭಾಷೆಯ ನುಡಿಗಟ್ಟುಗಳಿಗೆ ಅನುಸಾರವಾಗಿದ್ದು, ಇದನ್ನು ಸದನವು ಅಂಗೀಕರಿಸಿದರೆ ಒಟ್ಟಾರೆಯಾಗಿ ಭಾಷೆ ಸುಖಕರವಾಗಿರುತ್ತದೆ.

ಈ ತಿದ್ದುಪಡಿಯು ಅಂಗೀಕಾರವಾದರೆ ಪ್ರಸ್ತಾವಿತ ನಿಯಮವು ಹೀಗಿರುತ್ತದೆ :

"When a bill referred to in rule 38-A is passed by the Assembly, the president shall authenticate the same by affising his signature thereto when the bill has been so authenticated, it shall become an act......" etc.

ನಾನು ಈ ತಿದ್ದುಪಡಿಯನ್ನು ಒಪ್ಪಿಗೆಗಾಗಿ ಸದನದ ಮುಂದೆ ಇರಿಸುತ್ತಿದ್ದೇನೆ:

**ಮಾನ್ಯ ಸಭಾಧ್ಯಕ್ಷರು** : ಪ್ರಸ್ತಾವವನ್ನು ತಿದ್ದುಪಡಿಯೊಂದಿಗೆ ಸದನದ ಮುಂದೆ ಇರಿಸಲಾಗಿದೆ. ಈ ಪ್ರಸ್ತಾವವನ್ನು ಕುರಿತು ಸದಸ್ಯರಲ್ಲಿ ಯಾರಾದರೂ ಮಾತನಾಡಬಯಸಿದರೆ, ಅವರು ಹಾಗೆ ಮಾಡಬಹುದು.

**ಶ್ರೀಮತಿ ಜಿ. ದುರ್ಗಾಬಾಯಿ** : ನಾನು ತಿದ್ದುಪಡಿಯನ್ನು ಒಪ್ಪಿಕೊಳ್ಳುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಬೇರೆ ಯಾವ ಸದಸ್ಯರೂ ಇದರ ಬಗ್ಗೆ ಮಾತನಾಡುವಂತೆ ಕಾಣಿಸುತ್ತಿಲ್ಲ. ಪ್ರಸ್ತಾವವನ್ನು ಮಂಡಿಸಿದವರು ತಿದ್ದುಪಡಿಯನ್ನು ಅಂಗೀಕರಿಸಿದ್ದಾರೆ. ನಾನು ತಿದ್ದುಪಡಿಯನ್ನು ಮತಕ್ಕೆ ಹಾಕುತ್ತಿದ್ದೇನೆ.

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ತಿದ್ದುಪಡಿಯಾದಂತೆ ಈ ಪ್ರಸ್ತಾವವನ್ನು ಈಗ ಮತಕ್ಕೆ ಹಾಕುತ್ತಿದ್ದೇನೆ.

ತಿದ್ದುಪಡಿಯಾದಂತೆ ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

## ವ್ಯವಹಾರದ ಕಾರ್ಯಕ್ರಮ

**ಮಾನ್ಯ ಸಭಾಧ್ಯಕ್ಷರು** : ನಾವೀಗ ಕಾರ್ಯಸೂಚಿಯಲ್ಲಿರುವ ಮುಂದಿನ ವಿಷಯಕ್ಕೆ ಹೋಗೋಣ. ಆದರೆ ಹಾಗೆ ಹೋಗುವುದಕ್ಕೆ ಮೊದಲು, ಕರಡು ಸಂವಿಧಾನದ ವಿಷಯದಲ್ಲಿ ಅನುಸರಿಸಲು ಉದ್ದೇಶಿಸಿರುವ ಕ್ರಮವನ್ನು ನಾನು ಸದನಕ್ಕೆ ವಿವರಿಸಬಯಸುತ್ತೇನೆ. ಸದಸ್ಯರಿಗೆ ತಿಳಿದಿರುವ ಹಾಗೆ ಕರಡು ಸಂವಿಧಾನವನ್ನು ಈ ಸದನವು ನೇಮಿಸಿದ ಕರಡು ರಚನಾ ಸಮಿತಿಯು ಸಿದ್ಧಪಡಿಸಿದ್ದು ಅದನ್ನು ೮ ತಿಂಗಳುಗಳಿಗೂ ಮೊದಲೇ ಸದಸ್ಯರ ಕೈಗೆ ನೀಡಲಾಗಿತ್ತು. ಅದಕ್ಕೆ ಮಾಡಬೇಕೆಂದು ತೋರಿದ ತಿದ್ದುಪಡಿಯನ್ನು ಕಚೇರಿಗೆ ತಿಳಿಸಬೇಕೆಂದು ಸದಸ್ಯರನ್ನು ಕೋರಲಾಗಿತ್ತು ಮತ್ತು ಸದಸ್ಯರಿಂದಷ್ಟೇ ಅಲ್ಲದೆ, ನಾಗರಿಕರಿಂದ, ಸಾರ್ವಜನಿಕ ಸಂಸ್ಥೆಗಳಿಂದ, ಪ್ರಾಂತೀಯ ಸರ್ಕಾರಗಳು ಮೊದಲಾದವುಗಳಿಂದ ಸಾಕಷ್ಟು ತಿದ್ದುಪಡಿಗಳು ಬಂದಿದ್ದವು. ಆ ಎಲ್ಲ ಸಲಹೆ ಮತ್ತು ತಿದ್ದುಪಡಿಗಳನ್ನೂ ಕರಡು ರಚನಾ ಸಮಿತಿಯು ಪರಿಶೀಲಿಸಿ ಅವುಗಳ ಆಧಾರದ ಮೇಲೆ ಹಲವು ಅನುಚ್ಛೇದಗಳ ಕರಡನ್ನು ಪುನಾರೂಪಿಸಿದೆ. ಈಗ ನಮ್ಮ ಬಳಿ ಮೂಲ ಕರಡಷ್ಟೇ ಅಲ್ಲದೆ, ಸ್ವೀಕರಿಸಲ್ಪಟ್ಟ ಸಲಹೆ ಮತ್ತು ತಿದ್ದುಪಡಿಗಳನ್ನು ಆಧರಿಸಿ ಪುನಾರೂಪಿಸಿದ ಅನುಚ್ಛೇದಗಳೂ ಇವೆ. ಇವನ್ನೂ ಸದಸ್ಯರಿಗೆ ನೀಡಲಾಗಿದೆ. ಇವುಗಳನ್ನು ಪರಿಶೀಲಿಸಬೇಕೆಂಬ ಪ್ರಸ್ತಾವವನ್ನು ಸ್ವೀಕರಿಸಿದ ಅನಂತರ, ನಾನು ಈ ಪುನಾರೂಪಿತ ಅನುಚ್ಛೇದಗಳನ್ನು ಒಂದಾದ ಅನಂತರ ಒಂದನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಿದ್ದೇನೆ. ಅನಂತರ ಸದಸ್ಯರು ಸೂಚನೆಯನ್ನು ನೀಡಿ ಸಲ್ಲಿಸಿರುವ ತಿದ್ದುಪಡಿಗಳನ್ನು ಪರಿಶೀಲಿಸಲಾಗುವುದು. ಈಗಾಗಲೇ ಸೂಚನೆಯನ್ನು ನೀಡಿರುವ ಸದಸ್ಯರು ಪ್ರಸ್ತಾವವನ್ನು ಪರಿಶೀಲಿಸಲು ಒಪ್ಪಿಗೆ ನೀಡಿದ ಮೇಲೆ ಮತ್ತೆ ಸೂಚನೆಯನ್ನು ನೀಡುವ ಆವಶ್ಯಕತೆಯಿಲ್ಲ. ಏಕೆಂದರೆ, ಎಲ್ಲ ಸದಸ್ಯರಿಗೂ ಸಾಕಷ್ಟು ಸಮಯವನ್ನು ನೀಡಿದ್ದೇವೆ. ಅಲ್ಲದೆ, ಇನ್ನು ಯಾವುದಾದರೂ ತಿದ್ದುಪಡಿಗಳನ್ನು ಮಾಡಲು ಸದಸ್ಯರು ಬಯಸಿದರೆ, ಅದಕ್ಕೆ ಅವರಿಗೆ ಇನ್ನೂ ಎರಡು ದಿನಗಳ ಸಮಯಾವಕಾಶವನ್ನು ನಾನು ನೀಡುತ್ತೇನೆ. ಅಂಗೀಕರಿಸುವುದು ಅನಿವಾರ್ಯವೆಂದು ತೋರಿದ ತಿದ್ದುಪಡಿಗಳನ್ನು ಹೊರತು ಪಡಿಸಿ, ಉಳಿದ ತಿದ್ದುಪಡಿಗಳಿಗೆ ಈ ಎರಡು ದಿನಗಳ ಕಾಲಾವಕಾಶದ ಅನಂತರ ಅವಕಾಶವಿರುವುದಿಲ್ಲ. ಅಷ್ಟಾದರೂ, ಅನಂತರ ಕೆಲವೊಂದು ಆನುಷಂಗಿಕ ತಿದ್ದುಪಡಿಗಳನ್ನು ನಾವು ಪರಿಶೀಲಿಸಲೇಬೇಕಾಗುತ್ತದೆ ಮತ್ತು ಅವುಗಳನ್ನು ಅಂಗೀಕರಿಸಲೇಬೇಕಾಗುತ್ತದೆ. ಇವಲ್ಲದೆ, ಕೆಲವೊಮ್ಮೆ ಸದನವು ಇತರ ಕಾರಣಗಳಿಗಾಗಿ ಪರಿಗಣಿಸಲೇಬೇಕಾದ ಕೆಲವು ತಿದ್ದುಪಡಿಗಳು ಬರುವ ಸಂಭವವಿರುತ್ತದೆ. ಅವುಗಳ ಮೇಲಿನ ಚರ್ಚೆಯನ್ನು ನಾನು ಚಿವುಟಿಹಾಕುವುದಿಲ್ಲ. ಅವುಗಳ ಮೇಲಿನ ಚರ್ಚೆಗೂ ಅವಕಾಶವನ್ನು ನೀಡುತ್ತೇನೆ. ಈಗಾಗಲೇ ನಮಗೆ ಸೂಚನೆ ಬಂದಿರುವ ತಿದ್ದುಪಡಿಗಳಿಗೆ ಸದ್ಯದಲ್ಲಿ ಸೀಮಿತವಾಗಿರುವಂತೆ ನಾನು ಸದಸ್ಯರನ್ನು ವಿನಂತಿಸಿಕೊಳ್ಳುತ್ತೇನೆ, ಮತ್ತು ಅಂತಹವುಗಳ ಸಂಖ್ಯೆ ಸುಮಾರು ಒಂದು ಸಾವಿರವಿದೆ ಎಂಬುದು ನನ್ನ ಅನಿಸಿಕೆ. ಕರಡಿನಲ್ಲಿರುವ ಯಾವ ಅನುಚ್ಛೇದಗಳನ್ನು ಕುರಿತ ಚರ್ಚೆಗೂ ಕಡಿವಾಣ ಹಾಕದೆ, ನಮ್ಮ ಕೆಲಸದಲ್ಲಿನ ನಿಷ್ಕೃಷ್ಟತೆಯ ವಿಷಯದಲ್ಲಿ ರಾಜಿ ಮಾಡಿಕೊಳ್ಳದೆ ಆದಷ್ಟು ಕಡಿಮೆ ಸಮಯದಲ್ಲಿ ನಾವು ಈ ಕಾರ್ಯವನ್ನು ನಿರ್ವಹಿಸಬೇಕು. ಸದನದ ಒಪ್ಪಿಗೆಯನ್ನು ಆಧರಿಸಿ, ನಾನು ಈ ವಿಧಾನವನ್ನು ಅನುಸರಿಸಲು ಇಚ್ಛಿಸುತ್ತೇನೆ. ಸದಸ್ಯರಿಗೆ ಇದರ ಬಗ್ಗೆ ವಿವೇಚಿಸಲು ಸಾಕಷ್ಟು ಸಮಯವನ್ನು ನೀಡಿರುವುದರಿಂದ, ಈ ಕ್ರಮ ನ್ಯಾಯಯುತವಾಗಿದೆ ಎಂದು ಭಾವಿಸುತ್ತೇನೆ. ಒಂದು ಸಾವಿರ ತಿದ್ದುಪಡಿಗಳು ಬಂದಿವೆಯೆಂದರೆ, ಸದಸ್ಯರು ಸಾಕಷ್ಟು ಆಳವಾಗಿ ಪರಿಶೀಲಿಸಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಯಾವುದಾದರೂ ತಿದ್ದುಪಡಿಯು ನಮ್ಮ ಗಮನಕ್ಕೆ ಬಾರದೆ ಹೋದರೆ ಮತ್ತು ಆ ತಿದ್ದುಪಡಿಯು ಅಗತ್ಯವೆಂದು ಸದಸ್ಯರಲ್ಲಿ ಯಾರಾದರೂ ಭಾವಿಸಿದರೆ, ನಾವು ಅದನ್ನು ಕೈಗೆತ್ತಿಕೊಳ್ಳಬಹುದು. ಆದರೆ, ಸಾಮಾನ್ಯವಾಗಿ, ಈಗಿರುವ ತಿದ್ದುಪಡಿಗಳ ಹೊರತಾಗಿ ಹೊಸದಾಗಿ ಬರುವ ತಿದ್ದುಪಡಿಗಳನ್ನು ನಾನು ಚರ್ಚೆಗೆ ಕೈಗೆತ್ತಿಕೊಳ್ಳುವುದಿಲ್ಲ. ನಾನು ಮಾಡಲು ಉದ್ದೇಶಿಸಿರುವ ಕ್ರಮವೆಂದರೆ, ಡಾ. ಅಂಬೇಡ್ಕರ್ ಅವರು ಇಂದು ಮತ್ತು ನಾಳೆ, ಎರಡು ದಿನ, ಈ

ತಿದ್ದುಪಡಿಗಳನ್ನು ಮಂಡಿಸುತ್ತಾರೆ. ಇದಕ್ಕಾಗಿ ನಾವು ಬೆಳಗ್ಗೆ ಮತ್ತು ಸಾಯಂಕಾಲ ಸಭೆ ಸೇರಬೇಕು ಮತ್ತು ಶನಿವಾರ ಮತ್ತು ಭಾನುವಾರಗಳಂದು ತಿದ್ದುಪಡಿಗಳನ್ನು ಕುರಿತ ಸೂಚನೆಯನ್ನು ನೀಡಲು ಸದಸ್ಯರಿಗೆ ಸಮಯವನ್ನು ನೀಡುತ್ತೇವೆ. ನಮಗೀಗಾಗಲೇ ತಿದ್ದುಪಡಿಗಳಿಗಾಗಿ ಬಂದಿರುವ ಸೂಚನೆಗಳನ್ನು ಮತ್ತು ಭಾನುವಾರ ಸಂಜೆ ಐದು ಗಂಟೆಯವರೆಗೆ ಬರುವ ಸೂಚನೆಗಳನ್ನೆಲ್ಲಾ ಒಟ್ಟಿಗೆ ಸೇರಿಸಿ ಅವಕ್ಕೆ ತಃಖ್ತೆಯ ರೂಪವನ್ನು ನೀಡಿ ಮುದ್ರಿಸಿ ಸದಸ್ಯರಿಗೆ ನೀಡಲಿದ್ದೇವೆ. ಮುಂದಿನ ಮಂಗಳವಾರ ನಾವು ಇವುಗಳ ಮೇಲಿನ ಚರ್ಚೆಯನ್ನು ಪ್ರಾರಂಭಿಸಬಹುದು. ಇದು ನಾನು ರೂಪಿಸಿರುವ ಕಾರ್ಯಕ್ರಮದ ರೀತಿ.

ಸದಸ್ಯರಿಗೆ ತಿಳಿಸಬೇಕಾದ ಮತ್ತೊಂದು ವಿಷಯವಿದೆ. ಪ್ರಸ್ತಾವವೊಂದಕ್ಕೆ ಸೂಚನೆ ಬಂದಿದೆ ಮತ್ತು ಇನ್ನೊಂದು ತಿದ್ದುಪಡಿಯಿದ್ದು, ಸದನವು ಸಂವಿಧಾನವನ್ನು ಕುರಿತ ಚರ್ಚೆಯನ್ನು ಮುಂದೂಡಬೇಕು ಮತ್ತು ಕೋಮು ವಿಷಯಗಳಿಂದ ಮುಕ್ತವಾದ ರೀತಿಯಲ್ಲಿ ವಯಸ್ಕ ಮತದಾನದಿಂದ ಒಂದು ಹೊಸ ಸದನವನ್ನು ಆಯ್ಕೆ ಮಾಡಬೇಕು ಹಾಗೂ ಆ ಸದನವು ಸಂವಿಧಾನವನ್ನು ರೂಪಿಸುವ ಕಾರ್ಯವನ್ನು ಮಾಡಬೇಕು ಎಂಬ ಸೂಚನೆಯನ್ನು ಸದಸ್ಯರು ನೀಡಿದ್ದಾರೆ. ಕಳೆದ ಎರಡು ವರ್ಷಗಳಲ್ಲಿ ನಾವು ಮಾಡಿರುವುದೆಲ್ಲವನ್ನೂ ಈ ಸದನವು ಎಸೆದುಬಿಡಲು ಸಿದ್ಧವಿದೆಯೇ ಎಂಬುದು ನನಗೆ ತಿಳಿದಿಲ್ಲ. ಅದರಲ್ಲಿಯೂ, ಸಂವಿಧಾನವು ಜಾರಿಗೆ ಬಂದ ಆರಂಭಿಕ ವರ್ಷಗಳಲ್ಲಿ ಅದನ್ನು ತಿದ್ದುಪಡಿ ಮಾಡಲು ಸುಲಭವಾದ ಅವಕಾಶಗಳನ್ನು ಸಂವಿಧಾನದ ಕರಡಿನಲ್ಲಿ ಅಳವಡಿಸಲ್ಪಟ್ಟಿರುವುದರಿಂದ, ಅದರಲ್ಲಿ ಯಾವುದಾದರೂ ಲೋಪದೋಷಗಳು ಇದ್ದರೆ ಅದನ್ನು ಸುಲಭವಾಗಿ ಸರಿಪಡಿಸಬಹುದು. ಆದ್ದರಿಂದ, ಇದಕ್ಕಾಗಿ ನಾವು ವಯಸ್ಕ ಮತದಾನದ ಪದ್ಧತಿಯು ಜಾರಿಗೆ ಬರುವವರೆಗೆ ಕಾಯುವ ಅಗತ್ಯವಿಲ್ಲ. ವಯಸ್ಕ ಮತದಾನದ ಪದ್ಧತಿಯಲ್ಲಿ ನಮಗೆ ಎದುರಾಗುವ ಮೊದಲ ಸಮಸ್ಯೆಯೆಂದರೆ ಮತದಾರ ಸಮುದಾಯವನ್ನು ರೂಪಿಸುವುದು. ಅದಕ್ಕೆ ಅಗತ್ಯವಾದ ಕಾನೂನುಗಳು ಸದ್ಯದಲ್ಲಿ ಇಲ್ಲ. ನಾವು ಸಂವಿಧಾನದ ಕರಡಿನಲ್ಲಿ ವಯಸ್ಕ ಮತದಾನವನ್ನು ಕುರಿತು ಪರ್ಯಾಲೋಚಿಸಿದ್ದೇವೆ ಮತ್ತು ಈ ಸಂವಿಧಾನವು ಅಂಗೀಕೃತವಾದ ಮೇಲೆ ಅದು ಜಾರಿಗೆ ಬರುತ್ತದೆ. ಆದ್ದರಿಂದ, ವಯಸ್ಕ ಮತದಾನದ ಪದ್ಧತಿಯನ್ನು ನೀವು ಬಯಸಿದರೆ, ಮತ್ತು ಸಂವಿಧಾನದ ತಿದ್ದುಪಡಿಗಳನ್ನು ಸಿದ್ಧಮಾಡಲು ಹೊಸ ಸಂವಿಧಾನ ರಚನಾಸಭೆಯು ಬೇಕೆಂದರೆ, ನಾವು ಅದಕ್ಕಾಗಿ ಮತ್ತೊಂದು ಕಾನೂನನ್ನು ಅಂಗೀಕರಿಸಬೇಕಾಗುತ್ತದೆ ಮತ್ತು ಅಂತಹ ಹೊಸ ಸಂವಿಧಾನ ರಚನಾಸಭೆಯನ್ನು ನೇಮಿಸಲು ಅಗತ್ಯವಾದ ಕಾನೂನನ್ನು ಯಾವ ಸದನವು ಅಂಗೀಕರಿಸುತ್ತದೆ ಎಂಬುದು ನನಗೆ ತಿಳಿದಿಲ್ಲ. ಇಂತಹ ಸನ್ನಿವೇಶದಲ್ಲಿ, ನಾವೀಗ ಕಷ್ಟಪಟ್ಟು ರೂಪಿಸಿರುವ, ಕರಡು ರಚನಾ ಸಮಿತಿ ಹಾಗೂ ಈ ಸದನದ ಸದಸ್ಯರು ಅತಿ ಎಚ್ಚರಿಕೆಯಿಂದ ಪರಿಶೀಲಿಸಿರುವ ಕರಡು ಸಂವಿಧಾನವನ್ನು ಕುರಿತು ಚರ್ಚೆಯನ್ನು ಮುಂದುವರಿಸುವುದು ಹೆಚ್ಚು ಸೂಕ್ತವೆಂಬುದು ನನ್ನ ಭಾವನೆ.

ಇದು ನಾನು ಅನುಸರಿಸಲು ಉದ್ದೇಶಿಸಿರುವ ಕ್ರಮ, ಮತ್ತು ಈ ವಿಷಯದಲ್ಲಿ ಯಾವುದಾದರೂ ಸದಸ್ಯರು ಬೇರೆಯ ಸಲಹೆಯನ್ನು ನೀಡಲು ಬಯಸಿದರೆ, ನಾನು ಅದನ್ನು ಸಂತೋಷದಿಂದ ಪರಿಶೀಲಿಸುತ್ತೇನೆ. ಇನ್ನು ಒಂದೇ ಒಂದು ವಿಷಯವನ್ನು ನಾನು ಇಲ್ಲಿ ಹೇಳಬಯಸುತ್ತೇನೆ, ಅದೇನೆಂದರೆ ನಾನು ಚರ್ಚೆಯನ್ನು ಮೊಟಕುಗೊಳಿಸಲು ಇಚ್ಛಿಸುವುದಿಲ್ಲ. ಪ್ರತಿಯೊಂದು ಅನುಚ್ಛೇದವನ್ನು ಹಾಗೂ ಪ್ರತಿಯೊಂದು ಸಾಂವಿಧಾನಿಕ ಪ್ರಶ್ನೆಯನ್ನು ಕುರಿತು ಪರಿಶೀಲಿಸಲು ಸದಸ್ಯರಿಗೆ ಗರಿಷ್ಠ ಅವಕಾಶವನ್ನು ನೀಡಬಯಸುತ್ತೇನೆ. ಏಕೆಂದರೆ, ಇದು ನಮ್ಮ ಸಂವಿಧಾನವಾಗಲಿದೆ. ಆದರೆ, ಒಂದು ಬಾರಿ ಚರ್ಚಿತವಾಗಿರುವ ವಿಷಯವನ್ನೇ ಮತ್ತೆ ಮತ್ತೆ, ಬೇರೆ ಬೇರೆ ಆಧಾರಗಳ ಮೇಲೆ ಚರ್ಚಿಸುತ್ತಾ ಅಗತ್ಯಕ್ಕಿಂತ ಹೆಚ್ಚು ಸಮಯವನ್ನು ವ್ಯಯಮಾಡುವುದನ್ನು ನಾನು ಇಷ್ಟ ಪಡುವುದಿಲ್ಲ. ಈ ಕಾರಣಕ್ಕಾಗಿ, ಈಗಾಗಲೇ ತೀರ್ಮಾನವನ್ನು ತೆಗೆದುಕೊಂಡಿರುವ ವಿಷಯಗಳಲ್ಲಿ ಹಲವನ್ನು ಪುನರ್‌ಪರಿಶೀಲನೆಗೆ ನಾವು ತೆಗೆದುಕೊಳ್ಳಬಾರದು. ನಾವು ದೀರ್ಘವಾಗಿ ಚರ್ಚೆಗಳನ್ನು ನಡೆಸಿದ್ದೇವೆ

ಮತ್ತು ಅವುಗಳ ಅನಂತರವೇ ನಾವು ಸಂವಿಧಾನದ ತತ್ತ್ವಗಳು, ಅದರ ಕರಡು, ಅದರ ಗಾತ್ರ ಇವುಗಳ ಬಗ್ಗೆ ಸದನವು ತೀರ್ಮಾನವನ್ನು ತೆಗೆದುಕೊಂಡಿದೆ. ಸದಸ್ಯರು ಆ ತೀರ್ಮಾನಗಳನ್ನು ಲಘುವಾಗಿ ಪರಿಗಣಿಸಿ, ಮತ್ತೆ ಅವುಗಳನ್ನು ಪುನರ್‌ಪರಿಶೀಲಿಸಲು ಒತ್ತಾಯಿಸುತ್ತಾರೆಂಬುದನ್ನು ನಾನು ನಿರೀಕ್ಷಿಸುವುದಿಲ್ಲ. ಪುನರ್‌ಪರಿಶೀಲನೆಯು ಅಗತ್ಯವಾದ ಸಂದರ್ಭಗಳು ಬರಬಹುದು. ಸಾಮಾನ್ಯವಾಗಿ ಈಗಾಗಲೇ ತೆಗೆದುಕೊಂಡಿರುವ ತೀರ್ಮಾನಗಳನ್ನು ಇಟ್ಟುಕೊಂಡು ನಾವು ಮುಂದುವರಿಯೋಣ ಮತ್ತು ಎಲ್ಲಿ ಈ ಸದನವು ಇನ್ನೂ ತೀರ್ಮಾನವನ್ನು ತೆಗೆದುಕೊಂಡಿಲ್ಲವೋ ಅಂತಹ ವಿಷಯಗಳಲ್ಲಿ ಮೊದಲ ಬಾರಿಗೆ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಇನ್ನೂ ತೀರ್ಮಾನವಾಗದಿರುವ ಕೆಲವು ನಿರ್ದಿಷ್ಟ ಪ್ರಶ್ನೆಗಳಿವೆ. ಸದನವು ಹಲವು ಸಮಿತಿಗಳನ್ನು ರಚಿಸಿದೆ. ಈ ಸಮಿತಿಗಳ ವರದಿಗಳನ್ನು ಇನ್ನೂ ಪರಿಶೀಲಿಸಿಲ್ಲ. ಆದರೆ ಕರಡು ರಚನಾ ಸಮಿತಿಯು ಬಹಳ ಎಚ್ಚರಿಕೆಯಿಂದ ತಾನು ಇತರ ಸಮಿತಿಗಳ ದೃಷ್ಟಿಕೋನಕ್ಕಿಂತ ವಿಭಿನ್ನವಾದ ದೃಷ್ಟಿಕೋನವನ್ನು ಹೊಂದಿರುವಂತಹ ವಿಧಿಗಳ ರೂಪಣದಲ್ಲಿ, ತನ್ನ ದೃಷ್ಟಿಕೋನಗಳನ್ನು ಒಳಗೊಂಡ ಅನುಚ್ಛೇದಗಳನ್ನು ಒಂದು ವರ್ಗವನ್ನಾಗಿಯೂ, ಮತ್ತು ಇತರ ಸಮಿತಿಗಳ ಶಿಫಾರಸ್ಸಿನ ಹಾಗೂ ತೀರ್ಪುಗಳ ಮೇಲೆ ರಚಿಸಿದ ಅನುಚ್ಛೇದಗಳ ಇನ್ನೊಂದು ವರ್ಗವನ್ನೂ ಪರ್ಯಾಯವಾಗಿ ರಚಿಸಿದೆ. ಆದ್ದರಿಂದ ನಾವು ಅಂತಹ ಅನುಚ್ಛೇದಗಳನ್ನು ಕೈಗೆತ್ತಿಕೊಂಡಾಗ ಸದನವು ಅವುಗಳ ಗುಣಶ್ರೇಷ್ಠತೆಯನ್ನು ಪರಿಗಣಿಸಿ ಈ ಎರಡು ವರ್ಗದ ವಿಧಿಗಳಲ್ಲಿ ಯಾವ ವಿಧಿಯನ್ನು ಪರಿಗಣಿಸಬೇಕು ಎಂಬುದನ್ನು ಪರಿಶೀಲಿಸಬೇಕು. ಸದನಕ್ಕೆ ಸಿದ್ಧಪಡಿಸಿದ ಕರಡು ದೊರೆಯುವುದರಿಂದ, ಈ ಪ್ರಶ್ನೆಗಳ ಮೇಲಿನ ಕರಡನ್ನು ಸಿದ್ಧಮಾಡಲು ಸದನವು ಕಾಯಬೇಕಾಗಿರುವುದಿಲ್ಲ. ನಾವು ಎಲ್ಲ ಅಂಶಗಳನ್ನೂ ಈ ದೃಷ್ಟಿಯಿಂದ ನೋಡಿದರೆ, ಇದರ ಮೇಲಿನ ಚರ್ಚೆ ಮಾಡಲು ಬೇಕಾದ ಸಮಯವು ಕಡಿಮೆಯಾಗುತ್ತದೆ. ಏಕೆಂದರೆ, ಕರಡನ್ನು ರಚನಾ ಸಮಿತಿಯು ಕರಡನ್ನು ತಯಾರು ಮಾಡುವಾಗಲೇ ಇವುಗಳಲ್ಲಿ ಬಹುತೇಕ ಸಲಹೆ ಮತ್ತು ತಿದ್ದುಪಡಿಗಳನ್ನು ಸ್ವೀಕರಿಸಿ ಅವುಗಳನ್ನು ಅಳವಡಿಸಿಕೊಂಡಿದೆ. ಇನ್ನೂ ಇತ್ಯರ್ಥವಾಗದೆ ಇರುವ ಪ್ರಶ್ನೆಗಳ ತಾತ್ತ್ವಿಕ ಅಂಶಗಳ ಮೇಲೆ ಚರ್ಚೆಯಾಗಬಹುದು, ಆದರೂ, ಹಲವು ಪ್ರಶ್ನೆಗಳ ವಿಷಯದಲ್ಲಿ ನಾವೀಗಾಗಲೇ ತತ್ತ್ವಗಳನ್ನು ಕುರಿತು ಚರ್ಚೆ ಮಾಡಿ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಆದ್ದರಿಂದ, ನನಗೆ ಎನಿಸುವುದೇನೆಂದರೆ, ನಾವು ಈಗ ಸುವ್ಯವಸ್ಥಿತ ರೀತಿಯಲ್ಲಿ ಕೆಲಸವನ್ನು ಮಾಡಲು ಪ್ರಾರಂಭಿಸಿದರೆ, ನಾವು ನಮ್ಮ ಕೆಲಸವನ್ನು ಮೊದಲು ಪ್ರಾರಂಭಮಾಡಿದ ಎರಡನೆಯ ವಾರ್ಷಿಕೋತ್ಸವದ ಹೊತ್ತಿಗೆ, ಅಂದರೆ ಮುಂದಿನ ಡಿಸೆಂಬರ್ ೯ರ ಹೊತ್ತಿಗೆ, ನಮ್ಮ ಚರ್ಚೆಯನ್ನು ಮುಗಿಸಬಹುದು.

ಹಾಗೆ ಮಾಡುವುದರಲ್ಲಿ ನಾವು ಯಶಸ್ವಿಯಾದರೆ, ಕೆಲವು ದಿನಗಳ ಮಟ್ಟಿಗೆ ನಾವು ನಮ್ಮ ಕಲಾಪವನ್ನು ಮುಂದೂಡಬಹುದು ಮತ್ತು ಆ ವೇಳೆಯಲ್ಲಿ ಕರಡು ರಚನಾ ಸಮಿತಿಯು ಅಂಗೀಕರಿಸಲ್ಪಟ್ಟ ಎಲ್ಲ ತಿದ್ದುಪಡಿಗಳನ್ನೂ ಪರಿಶೀಲಿಸಿ, ಸುವ್ಯವಸ್ಥಿತಗೊಳಿಸಿ, ಅನುಚ್ಛೇದಗಳೆಲ್ಲಕ್ಕೂ ಕ್ರಮಸಂಖ್ಯೆಯನ್ನು ಪುನಃ ನೀಡಬಹುದು. ಇಷ್ಟಕ್ಕೆ ಸುಮಾರು ಹದಿನೈದು ದಿನಗಳಷ್ಟು ಹಿಡಿಯಬಹುದು. ತದನಂತರ ಎರಡನೆಯ ಬಾರಿಗೆ ನಾವು ಸಭೆ ಸೇರಿ ಎಲ್ಲ ತಿದ್ದುಪಡಿಗಳನ್ನೂ ಅಳವಡಿಸಿ ಕ್ರಮಗೊಳಿಸಿದ ಸಂವಿಧಾನವನ್ನು ಅಂತಿಮವಾಗಿ ಅಂಗೀಕರಿಸಬಹುದು. ಎರಡನೆಯ ಅಧಿವೇಶನದಲ್ಲಿ ನಿಯಮಗಳ ಪ್ರಕಾರ ನಾವು ವಿಷಯಗಳನ್ನು ಮತ್ತೆ ಆಳವಾಗಿ ವಿಶ್ಲೇಷಿಸಲು ಹೋಗುವ ಹಾಗಿಲ್ಲ. ತಿದ್ದುಪಡಿಗಳು ಸದನದಲ್ಲಿ ನಾವು ಅಂಗೀಕರಿಸಿದ ಹಾಗೆಯೇ ಈ ಅಂತಿಮ ರೂಪದ ಸಂವಿಧಾನದಲ್ಲಿ ನೀಡಲಾಗಿದೆಯೇ ಎಂಬುದನ್ನಷ್ಟೇ ನಾವು ಪರಿಶೀಲಿಸಬೇಕಾಗಿರುತ್ತದೆ.

ಇದು ನಾನು ಸದನದ ಮುಂದೆ ಇಡುತ್ತಿರುವ ಪ್ರಸ್ತಾವ ಮತ್ತು ಇದು ಸದನದಲ್ಲಿನ ಎಲ್ಲ ಸದಸ್ಯರಿಗೂ ಸಮ್ಮತವಾಗುತ್ತದೆ ಎಂದು ನನಗೆ ತೋರುತ್ತದೆ.

**ಶ್ರೀ ಸೇಠ್ ಗೋವಿಂದ ದಾಸ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : *[ಮಾನ್ಯ ಸಭಾಧ್ಯಕ್ಷರೆ,

ರಾಷ್ಟ್ರೀಯ ಭಾಷೆಗೆ ಸಂಬಂಧಿಸಿದ ಅನುಚ್ಛೇದವನ್ನು ಅಂಗೀಕರಿಸಿದ ಅನಂತರ, ಅಲ್ಲಿಯವರೆಗೆ ಅಂಗೀಕರಿಸಲಾಗಿರುವ ಎಲ್ಲ ಖಂಡಗಳನ್ನೂ ಹಿಂದಿಯಲ್ಲಿ ಅನುವಾದಿಸಿ ಒಪ್ಪಿಗೆಗಾಗಿ ಸದನದ ಮುಂದೆ ಇಡಲಾಗುವುದೇ ಎಂಬುದನ್ನು ನಾನು ತಿಳಿಯಲು ಇಚ್ಛಿಸುತ್ತೇನೆ.]*

**ಮಾನ್ಯ ಸಭಾಧ್ಯಕ್ಷರು :** *[ಹೌದು, ಅದು ಸಹಜವೇ ಆಗಿದೆ. ಎಲ್ಲ ಅನುಚ್ಛೇದಗಳನ್ನೂ ಅಂಗೀಕರಿಸಲ್ಪಟ್ಟಿರುವ ರಾಷ್ಟ್ರೀಯ ಭಾಷೆಯಲ್ಲಿ ಮತ್ತೆ ಪರಿಶೀಲಿಸಲಾಗುತ್ತದೆ. ಆಗ ಅನುಚ್ಛೇದಗಳ ಮೇಲೆ ಚರ್ಚೆಯಿರುವುದಿಲ್ಲ, ಬದಲಿಗೆ ಅನುಚ್ಛೇದಗಳು ಆ ಭಾಷೆಯಲ್ಲಿ ಸರಿಯಾಗಿ ಅನುವಾದಗೊಂಡಿವೆಯೋ ಅಥವಾ ಇಲ್ಲವೋ ಎಂಬುದನ್ನಷ್ಟೇ ಸದನವು ನೋಡಬೇಕಾಗಿರುತ್ತದೆ. ಆದ್ದರಿಂದ ನಮ್ಮ ಚರ್ಚೆಗಳು ಸದ್ಯದಲ್ಲಿರುವ ಇಂಗ್ಲಿಷ್ ಭಾಷೆಯಲ್ಲಿರುವ ಕರಡನ್ನು ಆಧರಿಸಿರಬೇಕು. ಈಗ ಕರಡನ್ನು ತಯಾರಿಸಿರುವವರು, ಅದರ ಬಗ್ಗೆ ಆಲೋಚಿಸಿರುವವರು ಎಲ್ಲರೂ ಅದನ್ನು ಇಂಗ್ಲಿಷ್ ಭಾಷೆಯಲ್ಲಿ ಮಾತ್ರ ಹಾಗೆ ಮಾಡಿದ್ದಾರೆ. ರಾಷ್ಟ್ರೀಯ ಭಾಷೆಗೆ ಸಂಬಂಧಪಟ್ಟ ಅನುಚ್ಛೇದವನ್ನು ಅಂತಿಮವಾಗಿ ಅಂಗೀಕರಿಸಿದ ಅನಂತರ ಆ ಭಾಷೆಯಲ್ಲಿ ಸಂವಿಧಾನವನ್ನು ಅನುವಾದ ಮಾಡಿಸಿ ಸದನದ ಮುಂದೆ ತಮ್ಮ ಒಪ್ಪಿಗೆಗಾಗಿ ಇಡಲಾಗುವುದು.]*

**ಪಂಡಿತ್ ಬಾಲಕೃಷ್ಣ ಶರ್ಮ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯರೆ, ನನ್ನ ಗೌರವಾನ್ವಿತ ಮಿತ್ರ ಶ್ರೀ ಸೇಠ್ ಗೋವಿಂದ ದಾಸ್ ಅವರು ಸದನದ ಮುಂದೆ ಎತ್ತಿದ ಬಹು ಮುಖ್ಯ ಪ್ರಶ್ನೆಗೆ ಸಂಬಂಧಿಸಿದಂತೆ ನಿಮ್ಮ ಗಮನವನ್ನು ಸೆಳೆಯಬಯಸುತ್ತೇನೆ.

**ಶ್ರೀ ಮಹಾವೀರ ತ್ಯಾಗಿ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : *[ಮಾನ್ಯ ಸಭಾಧ್ಯಕ್ಷರೆ, ಮೂಲಭೂತ ಪ್ರಶ್ನೆಗಳತ್ತ ಹೋಗುವ ಮೊದಲು, ಒಂದು ವಿಷಯವನ್ನು ಕುರಿತು ನಾನು ನನ್ನ ಅಭಿಪ್ರಾಯವನ್ನು ಸಲ್ಲಿಸಬಯಸುತ್ತೇನೆ. ತಿದ್ದುಪಡಿಗಳನ್ನು ಪರಿಶೀಲನೆಗೆ ಮಂಡಿಸುವುದಕ್ಕೆ ಅನುಸರಿಸಬೇಕಾದ ನಿಯಮಗಳನ್ನು ತಾವು ನಿರ್ಧರಿಸಬೇಕು. ಇನ್ನು ಮುಂದೆಯೂ ಹಳೆಯ ಕ್ರಮವನ್ನೇ ಅನುಸರಿಸುತ್ತೇವೆಯೋ ಅಥವಾ ಈಗ ತಾವು ಹೇಳಿರುವ ಕ್ರಮವನ್ನು ಅನುಸರಿಸಲಿದ್ದೇವೆಯೋ? ಚರ್ಚೆಯು ಮುಂದುವರಿಯುವ ಕ್ರಮದ ಬಗ್ಗೆ ಮತ್ತು ತಿದ್ದುಪಡಿಯನ್ನು ನಾವು ಯಾವ ಕಾಲಮಿತಿಯೊಳಗೆ ಕಳುಹಿಸಬೇಕೆಂಬುದರ ಬಗ್ಗೆ ತಿಳಿವಳಿಕೆಯಿರುವುದು ಅಗತ್ಯ.]*

**ಮಾನ್ಯ ಅಧ್ಯಕ್ಷರು :** *[ಎರಡನ್ನೂ ಒಟ್ಟಿಗೇ ತೀರ್ಮಾನಿಸಲಾಗುವುದು.]*

**ಪಂಡಿತ್ ಬಾಲಕೃಷ್ಣ ಶರ್ಮ :** ಮಾನ್ಯರೆ, ಇದರಲ್ಲಿ ಕ್ರಮದ ಪ್ರಶ್ನೆ ಎಲ್ಲಿ ಉದ್ಭವವಾಗುತ್ತದೆ ಎಂಬುದು ನನಗೆ ಗೊತ್ತಾಗುತ್ತಿಲ್ಲ. ವಾಸ್ತವವಾಗಿ, ನಾನು ಒಂದು ಅಂಶದತ್ತ ತಮ್ಮ ಗಮನವನ್ನು ಸೆಳೆಯಲು ಬಯಸಿದ್ದೆ. ತಾವು ಗೌರವಾನ್ವಿತ ಡಾ. ಅಂಬೇಡ್ಕರ್ ಅವರನ್ನು ಕರಡು ಸಂವಿಧಾನವನ್ನು ಪರಿಶೀಲನೆಗೆ ಸದನದಲ್ಲಿ ಮಂಡಿಸಲು ಆದೇಶಿಸುವ ಮೊದಲು, ನನ್ನ ಮಿತ್ರ ಸೇಠ್ ಗೋವಿಂದ ದಾಸ್ ಅವರು ಎತ್ತಿದ್ದ ಪ್ರಶ್ನೆಯನ್ನು ಕುರಿತು ತಮ್ಮ ಗಮನವನ್ನು ಸೆಳೆಯುವುದು ನನ್ನ ಉದ್ದೇಶವಾಗಿತ್ತು. ಗೌರವಾನ್ವಿತ ಡಾ. ಅಂಬೇಡ್ಕರ್ ಅವರು ಮಂಡಿಸಿದ ಅನಂತರ ನಾವು ಸಂವಿಧಾನದ ಒಂದೊಂದು ಅನುಚ್ಛೇದವನ್ನೂ ನಿಶ್ಚಯವಾಗಿಯೂ ಪರಿಶೀಲಿಸಲಿದ್ದೇವೆ. ಸರ್, ತಮಗೆ ತಿಳಿದಿರುವ ಹಾಗೆ, ಹಿಂದಿಯು ರಾಷ್ಟ್ರೀಯ ಭಾಷೆಯಾಗಬೇಕೆಂಬುದರ ಬಗ್ಗೆ ಮತ್ತು ಅದರ ಲಿಪಿಯು ದೇವನಾಗರಿಯಾಗಿರಬೇಕೆಂಬ ಸೂಚನೆಯನ್ನು ನೀಡಿದವರಲ್ಲಿ ನಾನೂ ಒಬ್ಬನಾಗಿದ್ದೇನೆ. ನಾವು ಸಂವಿಧಾನದ ಒಂದೊಂದು ಅನುಚ್ಛೇದವನ್ನೂ ಪರಿಶೀಲನೆಗೆ ತೆಗೆದುಕೊಂಡಾಗ, ಸಂವಿಧಾನವು ಅಂಗೀಕರಿಸಲ್ಪಟ್ಟ ಭಾಷೆಯು ಯಾವುದು ಎಂಬ ಪ್ರಶ್ನೆ ಸಹಜವಾಗಿಯೇ ಎದುರಾಗುತ್ತದೆ. ತಮಗೆ ನನ್ನ ಸಲಹೆ ಏನೆಂದರೆ, ಸಂವಿಧಾನದ ಒಂದೊಂದು ಅಧ್ಯಾಯವನ್ನು ಪರಿಶೀಲಿಸಿದ ಅನಂತರವೂ, ನಾವು ಹಿಂದೀ ಭಾಷೆಯಲ್ಲಿ ಆಯಾ ಅಧ್ಯಾಯದಲ್ಲಿ, ಈ ಸದನವು ಅಂಗೀಕರಿಸಿರುವ ತಿದ್ದುಪಡಿಗಳನ್ನು ಅಳವಡಿಸಿದ ಅನುಚ್ಛೇದಗಳನ್ನು ಸದನವು ನೇಮಿಸಿರುವ ಉಪಸಮಿತಿಯು ಸರಿಯಾಗಿ ಅನುವಾದ ಮಾಡಿದೆಯೇ

ಎಂಬುದನ್ನು ಪರಿಶೀಲಿಸಬೇಕು. ಆದ್ದರಿಂದ ಮಾನ್ಯರೆ, ತಾವು ಸಂವಿಧಾನದ ಪ್ರತಿ ಅನುಚ್ಛೇದವನ್ನೂ ಪರಿಶೀಲನೆಗೆ ಕೈಗೆತ್ತಿಕೊಳ್ಳುವ ಮೊದಲು ತಾವು ದಯವಿಟ್ಟು ಸದನದ ಒಂದು ಉಪ-ಸಮಿತಿಯನ್ನು ನೇಮಕ ಮಾಡಬೇಕು ಮತ್ತು ಆ ಉಪ-ಸಮಿತಿಯು ಪ್ರತಿಯೊಂದು ಅನುಚ್ಛೇದವನ್ನೂ ಹಾಗೂ ಸದನವು ಅಂಗೀಕರಿಸುವ ಪ್ರತಿಯೊಂದು ತಿದ್ದುಪಡಿಯನ್ನೂ ಅರ್ಥಮಾಡಿಕೊಂಡು, ಅವುಗಳನ್ನು ಸದನವು ಅಂಗೀಕರಿಸುತ್ತಿದ್ದ ಹಾಗೆಯೇ, ಹಿಂದಿಗೆ ಭಾಷಾಂತರಿಸುವ ವ್ಯವಸ್ಥೆಯನ್ನು ಮಾಡಬೇಕು. ಒಂದು ಅಧ್ಯಾಯವನ್ನು ಮುಗಿಸಿದ ಕೂಡಲೇ, ಭಾಷಾಂತರಗೊಂಡ ಅನುಚ್ಛೇದಗಳನ್ನು ಸದನದಲ್ಲಿ ಮಂಡಿಸಬೇಕು. ಅದರ ಅನಂತರ, ಸಂವಿಧಾನವು ಹಿಂದೀ ಭಾಷೆಯಲ್ಲಿ ಅಂಗೀಕೃತವಾಗಿದೆ ಎಂದು ಪರಿಗಣಿಸಬಹುದು. ಇಂಗ್ಲಿಷ್ ಭಾಷೆಯನ್ನು ಸಂಪೂರ್ಣವಾಗಿ ಕೈಬಿಟ್ಟ ಮೇಲೆ, ಮೂಲ ಸಂವಿಧಾನವು ಹಿಂದೀ ಭಾಷೆಯಲ್ಲಿಯೇ ಅಂಗೀಕರಿಸಲ್ಪಟ್ಟಿದೆ ಎಂದು ಪರಿಗಣಿಸಬಹುದು ಮತ್ತು ಆ ಸಂವಿಧಾನವೇ ನಮ್ಮ ಪರಮೋಚ್ಚ ಅಧಿಕಾರವಾಣಿಯಾಗಬೇಕು ಮತ್ತು ಅಧಿಕೃತ ಸಂವಿಧಾನವಾಗಬೇಕು. ನಾವು ಹಾಗೆ ಮಾಡದಿದ್ದರೆ, ೯೯ನೆಯ ವಿಧಿಯು ನಮ್ಮ ಮುಂದೆ ಪರಿಶೀಲನೆಗೆ ಬಂದು ನಾವು ಹಿಂದಿಯನ್ನು ರಾಷ್ಟ್ರೀಯ ಭಾಷೆಯೆಂದು ಮತ್ತು ಅದರ ಲಿಪಿಯು ದೇವನಾಗರಿಯಾಗಿರಬೇಕೆಂದು ಘೋಷಿಸಿದಾಗ ನಾವು ತೀವ್ರವಾದ ಅಡಚಣೆಯನ್ನು ಎದುರಿಸಬೇಕಾಗುತ್ತದೆ ಎಂದು ನನಗೆ ಎನಿಸುತ್ತದೆ. ದಕ್ಷಿಣ ಭಾರತದ ನಮ್ಮ ಮಿತ್ರರ ಮುಂದೆ ಕೆಲವು ತೊಂದರೆಗಳಿವೆ ಎಂಬ ಭಾವನೆ ನನಗೆ ಬರುತ್ತಿದೆ. ಅವರು "ಈಗ ಸಂವಿಧಾನವು ಇಂಗ್ಲಿಷ್ ಭಾಷೆಯಲ್ಲಿದೆ ಅದನ್ನು ನಾವು ಚೆನ್ನಾಗಿ ಅರ್ಥಮಾಡಿಕೊಂಡಿದ್ದೇವೆ. ಹಿಂದೀ ಭಾಷೆಯಲ್ಲಿರುವ ಪ್ರತಿ ಅನುಚ್ಛೇದವನ್ನೂ ಪರಿಶೀಲಿಸಲು ನಮ್ಮ ಮುಂದೆ ಇಟ್ಟರೆ, ನಮಗೆ ಆ ಭಾಷೆಯು ಅರ್ಥವಾಗುವುದಿಲ್ಲ" ಎಂದು ಸರಳವಾಗಿ ಹೇಳಬಹುದು. ಹಿಂದಿ ಭಾಷೆಯನ್ನು ಅಷ್ಟು ಚೆನ್ನಾಗಿ ಅರಿತಿರದ ನನ್ನ ದಕ್ಷಿಣಭಾರತದ ಮಿತ್ರರು ತಮ್ಮ ಸದಸ್ಯಮಿತ್ರರ ಮೇಲೆ ವಿಶ್ವಾಸವನ್ನಿರಿಸಬೇಕಾಗುತ್ತದೆ ಎಂದು ನಾನು ಅಭಿಪ್ರಾಯ ಪಡುತ್ತೇನೆ. ಈ ಸದನದಲ್ಲಿ ಇಂಗ್ಲಿಷ್ ಭಾಷೆಯನ್ನು ತಿಳಿಯದ ಹಲವು ಸದಸ್ಯರಿದ್ದಾರೆ. ಅವರು ನಿಮ್ಮ ಮೇಲೆ ವಿಶ್ವಾಸವನ್ನು ಇರಿಸಿದ್ದಾರೆ ಮತ್ತು ಇಂಗ್ಲಿಷ್ ಭಾಷೆಯು ತಮಗೆ ತಿಳಿಯದೆಂದು ಅದರ ವಿರುದ್ಧ ಯಾವ ಆಕ್ಷೇಪಣೆಯನ್ನೂ ಎತ್ತುವುದಿಲ್ಲ, ಈ ಕಾರಣಕ್ಕಾಗಿ ಅವರು ಸಂವಿಧಾನವು ಸರಿಯಿಲ್ಲವೆಂದು ನಿಂದಿಸುವುದಿಲ್ಲ. ಹಾಗೆಯೇ, ದಕ್ಷಿಣಭಾರತದ ಮಿತ್ರರು ಕೂಡ ನಮ್ಮೊಡನೆ ಈ ವಿಷಯದಲ್ಲಿ ಸಹಕರಿಸಬೇಕು.

**ಮಾನ್ಯ ಸಭಾಧ್ಯಕ್ಷರು :** ನಾನು ಈ ವಿಷಯದಲ್ಲಿ ಏನನ್ನು ಮಾಡಬೇಕೆಂದು ಉದ್ದೇಶಿಸಿದ್ದೇನೆಂಬುದನ್ನು ತಿಳಿಸಿದರೆ, ಅದು ನಮ್ಮ ಚರ್ಚೆಯನ್ನು ಮುಕ್ತಾಯ ಮಾಡುತ್ತದೆಯೆಂದು ನಾನು ಭಾವಿಸುತ್ತೇನೆ. ಅನುವಾದವನ್ನು ಸಿದ್ಧಮಾಡುವ ಉದ್ದೇಶದಿಂದ ಒಂದು ಸಮಿತಿಯನ್ನು ರಚಿಸಲು ಒಂದು ನಿಲುವಳಿಯನ್ನು ಮಂಡಿಸುವುದಕ್ಕಾಗಿ ಸೂಚನೆಯನ್ನು ಈಗಾಗಲೇ ನೀಡಲಾಗಿದೆ ಮತ್ತು ಅನುವಾದಿತವಾದ ಪ್ರತಿಯೊಂದು ಅನುಚ್ಛೇದವನ್ನೂ ಪರಿಶೀಲಿಸಿ ಈ ಸದನವು ಅಂಗೀಕರಿಸಬೇಕು ಮತ್ತು ಅದನ್ನೇ ಮೂಲವೆಂದು ಪರಿಗಣಿಸಬೇಕು. ಹೆಚ್ಚುಕಡಿಮೆ ಈ ಎಲ್ಲ ಆಶಯಗಳನ್ನೂ ಸಾಧಿಸಲು ಸೂಚನೆಯನ್ನು ಕೊಡಲಾಗಿದೆ. ನಾನು ಮಾಡಬೇಕೆಂದಿರುವುದು ಹೀಗಿದೆ: ನಾವು ಅನುವಾದವನ್ನು ಮಾಡಿಸಿರುವ ವಿಷಯವನ್ನು ಸದಸ್ಯರು ಅರಿತಿದ್ದಾರೆ. ಹಿಂದಿ, ಉರ್ದು ಮತ್ತು ಹಿಂದೂಸ್ಥಾನಿಗಳಲ್ಲಿ ಅನುವಾದವನ್ನು ಮಾಡಿಸಲಾಗಿದೆ. ಕರಡು ತಯಾರಿಕಾ ಸಮಿತಿಯು ಈ ಮೂರೂ ಭಾಷೆಗಳ ಅನುವಾದವನ್ನು ಸಿದ್ಧಪಡಿಸಿದ್ದು, ಅದರ ಪ್ರತಿಗಳು ಸದಸ್ಯರಿಗೆ ತಲುಪಿವೆಯೆಂದು ನಾನು ಭಾವಿಸಿದ್ದೇನೆ. ನಮ್ಮ ಭಾಷೆಯು ಯಾವುದಿರಬೇಕೆಂಬುದು ನಿರ್ಣಯವಾದ ಕೂಡಲೇ, ಆ ಭಾಷೆಯ ಅನುವಾದವನ್ನು ಅದು ಇಂಗ್ಲಿಷ್ ಭಾಷೆಯ ಮೂಲ ಆವೃತ್ತಿಯೊಂದಿಗೆ ಅಕ್ಷರಶಃ ಹೋಲುತ್ತದೆಯೆಂಬುದನ್ನು ಖಚಿತ ಪಡಿಸಿಕೊಳ್ಳಲು ನಾವು ಒಂದು ಸಮಿತಿಯನ್ನು ನೇಮಿಸೋಣ. ಭಾವನಾತ್ಮಕ ಅಂಶಗಳು ಏನೇ ಇದ್ದರೂ, ಸಂವಿಧಾನದ ಕರಡನ್ನು ಸಿದ್ಧ ಪಡಿಸುವುದರಲ್ಲಿ ತೊಡಗಿಕೊಂಡಿರುವವರು ಅದರಲ್ಲಿನ ಅನುಚ್ಛೇದಗಳನ್ನು ಹಿಂದೀ ಭಾಷೆಗಿಂತ ಹೆಚ್ಚು ನಿಖರವಾಗಿ ಇಂಗ್ಲಿಷ್ ಭಾಷೆಯಲ್ಲಿ ಅಭಿವ್ಯಕ್ತಿಗೊಳಿಸಬಲ್ಲರು. ಇದು ಇಂಗ್ಲಿಷ್ ಅಥವಾ ಹಿಂದಿಯಲ್ಲಿ

ಅಭಿವ್ಯಕ್ತಿಗೊಳಿಸುವ ಪ್ರಶ್ನೆಯಲ್ಲ. ಆದರೆ, ಹಲವು ಅಂಶಗಳನ್ನು ನಾವು ಪಾಶ್ಚಾತ್ಯ ಸಂವಿಧಾನಗಳಿಂದಲೂ ತೆಗೆದುಕೊಂಡಿದ್ದೇವೆ. ಆದ್ದರಿಂದ ನಮ್ಮ ಸಂವಿಧಾನವು ಒಳಕೊಂಡಿರುವ ಹಲವು ಅಂಶಗಳಿಗೆ ತಮ್ಮದೇ ಆದ ಇತಿಹಾಸವಿದೆ. ನಾವು ಆ ಸಂವಿಧಾನಗಳಲ್ಲಿ ಉಪಯೋಗಿಸಿರುವ ನುಡಿಗಟ್ಟುಗಳನ್ನು, ಪದಗುಚ್ಛಗಳನ್ನು ಹಾಗೆಯೇ ಸ್ವೀಕರಿಸಿದ್ದೇವೆ. ನಮ್ಮ ಸಂವಿಧಾನದ ಕರಡನ್ನು ತಯಾರು ಮಾಡುವವರ ಈ ಕೊರತೆಯನ್ನು ನಾವು ಈ ಕಾರಣಕ್ಕಾಗಿ ಮನ್ನಿಸಬೇಕು. ಅದರಿಂದ ನಾವು ಏನನ್ನಾದರೂ ಕಳೆದುಕೊಂಡಿದ್ದೇವೆ ಎಂದು ನನಗೆ ಭಾಸವಾಗುತ್ತಿಲ್ಲ. ಆದರೆ ಒಮ್ಮೆ ಇಂಗ್ಲಿಷ್ ಭಾಷೆಯಲ್ಲಿರುವ ಅನುಚ್ಛೇದಗಳನ್ನು ಈ ಸದನವು ಅಂತಿಮವಾಗಿ ಅಂಗೀಕರಿಸಿದ ಮೇಲೆ, ನಮ್ಮ ರಾಷ್ಟ್ರಭಾಷೆಯೆಂದು ಅಂಗೀಕರಿಸಲಾಗುವ ಭಾಷೆಯಲ್ಲಿ ಸಂವಿಧಾನದ ಎಲ್ಲ ಅನುಚ್ಛೇದಗಳನ್ನೂ ಸಾಧ್ಯವಾದಷ್ಟು ಅಚ್ಚುಕಟ್ಟಾಗಿ ಮತ್ತು ಕರಾರುವಾಕ್ಕಾಗಿ ಅನುವಾದಿಸಲಾಗುತ್ತದೆ. ಆದ್ದರಿಂದ, ರಾಷ್ಟ್ರೀಯ ಭಾಷೆಯ ವಿಷಯದಲ್ಲಿ ಈಗ ಚರ್ಚೆಯನ್ನು ಮಾಡುವುದನ್ನು ಸದಸ್ಯರು ನಿರೀಕ್ಷಿಸಬಾರದು. ಅದು ಮುಂದಿನ ದಿನಗಳಲ್ಲಿ ಸಾಧ್ಯವಾಗುತ್ತದೆ. ಈ ಪ್ರಶ್ನೆಯು ತೀರ್ಮಾನವಾದ ಅನಂತರ, ಸಾಧ್ಯವಾದಷ್ಟು ಶೀಘ್ರವಾಗಿ ಅದರ ಅನುವಾದವನ್ನು ರಾಷ್ಟ್ರೀಯ ಭಾಷೆಯೆಂದು ಅಂಗೀಕೃತವಾಗುವ ಭಾಷೆಯಲ್ಲಿ ಮಾಡಿಸಲಾಗುವುದು ಎಂಬ ಭರವಸೆಯನ್ನು ನಾನು ನೀಡುತ್ತೇನೆ ಮತ್ತು ಅನುವಾದಿತ ಸಂವಿಧಾನವನ್ನೂ ಸದನದ ಒಪ್ಪಿಗೆಗಾಗಿ ಅದರ ಮುಂದೆ ಇರಿಸಲಾಗುವುದು.

**ಶ್ರೀ ಗೋವಿಂದ ದಾಸ್ :** *[ಮಾನ್ಯ ಸಭಾಧ್ಯಕ್ಷರೆ, ನಮ್ಮ ಮುಂದೆ ಸಂವಿಧಾನವನ್ನು ಇಟ್ಟಾಗ, ನಮ್ಮ ರಾಷ್ಟ್ರೀಯ ಭಾಷೆಯಲ್ಲಿರುವ ಸಂವಿಧಾನವೇ ಮೂಲಸಂವಿಧಾನವೆಂದು ಪರಿಗಣಿತವಾಗುವುದು ಎಂದು ತಾವು ನಿರ್ದಿಷ್ಟವಾದ ಆಶ್ವಾಸನೆಯನ್ನು ನೀಡಿದ್ದೀರಿ. ಅದೇ ಸಮಯದಲ್ಲಿ ನಾನು ತಮಗೆ ಒಂದು ಪ್ರಶ್ನೆಯನ್ನು ಕೇಳಿದ್ದೆ ಮತ್ತು ಅದಕ್ಕೆ ಉತ್ತರವಾಗಿ ತಾವು ಮೂಲ ಕರಡು ಸಂವಿಧಾನವು ನಮ್ಮ ಭಾಷೆಯಲ್ಲಿ ಇರುತ್ತದೆ ಎಂದು ಹೇಳಿದ್ದಿರಿ. ಆದರೆ ಡಾ. ಅಂಬೇಡ್ಕರ್ ಅವರು ನಮ್ಮ ಮುಂದೆ ಇರಿಸಿರುವ ಕರಡು ಸಂವಿಧಾನವು ಇಂಗ್ಲಿಷ್ ಭಾಷೆಯಲ್ಲಿ ಇದೆ. ನಮ್ಮ ಮುಂದೆ ಇರಿಸಿರುವ ಸಂವಿಧಾನವು ಇಂಗ್ಲಿಷ್ ಭಾಷೆಯಲ್ಲಿ ಇರುವುದರಿಂದ, ತಾವು ನಮ್ಮ ಮುಂದೆ ಇರಿಸುತ್ತೇನೆಂದು ಆಶ್ವಾಸನೆಯನ್ನು ನೀಡಿರುವ ಸಂವಿಧಾನವು ನಮ್ಮ ರಾಷ್ಟ್ರೀಯ ಭಾಷೆಯಲ್ಲಿ ಯಾವಾಗ ಕರಡು ರೂಪದಲ್ಲಿ ಬರೆಯಲ್ಪಟ್ಟಿತು ಎಂಬುದನ್ನು ನಾನು ತಿಳಿದುಕೊಳ್ಳಲು ಬಯಸುತ್ತೇನೆ.]*

**ಶ್ರೀ ಘನಶ್ಯಾಮ ಸಿಂಗ್ ಗುಪ್ತ** (ಮಧ್ಯಪ್ರಾಂತ್ಯ ಮತ್ತು ಬೇರಾರ್ : ಸಾಮಾನ್ಯ) : *[ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಯ ಭಾಷೆಯನ್ನು ಕುರಿತ ಅನುಚ್ಛೇದವನ್ನು ಅಂಗೀಕರಿಸಿದ ನಂತರ, ಇಂಗ್ಲಿಷ್ ಭಾಷೆಯಲ್ಲಿ ಒಂದೊಂದು ವಿಧಿಯನ್ನೂ ಕೈಗೆತ್ತಿಕೊಂಡು ಪರಿಶೀಲಿಸಿದಂತೆಯೇ, ರಾಷ್ಟ್ರೀಯ ಭಾಷೆಯಲ್ಲಿನ ಕರಡು ಸಂವಿಧಾನದ ಪ್ರತಿಯೊಂದು ಅನುಚ್ಛೇದವನ್ನೂ ಪರಿಶೀಲಿಸಿ ಅಂತಿಮವಾಗಿ ಅಂಗೀಕರಿಸಲಾಗುವುದೇ ಎಂಬುದರ ಬಗ್ಗೆ ನಾನು ಪ್ರಶ್ನಿಸುತ್ತಿದ್ದೇನೆ.]*

**ಮಾನ್ಯ ಸಭಾಧ್ಯಕ್ಷರು :** *[ಪ್ರತಿಯೊಂದು ಅನುಚ್ಛೇದವನ್ನೂ ಪರಿಶೀಲಿಸಲು ಕೈಗೆತ್ತಿಕೊಳ್ಳಲಾಗುವುದು.]*

**ಪಂಡಿತ್ ಬಾಲಕೃಷ್ಣ ಶರ್ಮ :** ಮಾನ್ಯರೆ, ನಾನು ಒಂದು ಸಲಹೆಯನ್ನು ನೀಡಬಯಸುತ್ತೇನೆ. ಕರಡು ಸಂವಿಧಾನದ ಅನುಚ್ಛೇದಗಳನ್ನು ಪರಿಶೀಲನೆಗೆ ಒಂದೊಂದಾಗಿ ತೆಗೆದುಕೊಳ್ಳುವ ಮೊದಲು ರಾಷ್ಟ್ರೀಯ ಭಾಷೆಯ ಪ್ರಶ್ನೆಯನ್ನು ಚರ್ಚೆಗೆ ತೆಗೆದುಕೊಂಡು ಒಂದು ನಿರ್ಣಯವನ್ನು ತೆಗೆದುಕೊಳ್ಳುವುದು ಉತ್ತಮವಾಗುವುದಿಲ್ಲವೇ? ರಾಷ್ಟ್ರೀಯ ಭಾಷೆಯ ಪ್ರಶ್ನೆಯನ್ನು ಕೈಗೆತ್ತಿಕೊಂಡು ಒಂದು ನಿರ್ಣಯವನ್ನು ತೆಗೆದುಕೊಂಡರೆ, ಎಲ್ಲ ವಿರೋಧೀ ಭಾವನೆಗಳ ಮೇಲಾಟವನ್ನು ಅದು ನಿವಾರಿಸುತ್ತದೆ *(ಜಯಕಾರ)*. ನೀವು ೧೦ ಅಥವಾ ೧೫ ಉಪಖಂಡಗಳನ್ನು ಇಂಗ್ಲಿಷ್‌ನಲ್ಲಿ ಚರ್ಚಿಸಬಹುದು. ಸಮಿತಿಯು ಮರುದಿನ ಹೊತ್ತಿಗೆ ಅದರ ಅನುವಾದವನ್ನು ತಯಾರು ಮಾಡಿರುತ್ತದೆ ಮತ್ತು ಅದನ್ನು ಸದನದಲ್ಲಿ ಚರ್ಚೆಗೆ ಎತ್ತಿಕೊಂಡು

ಸದನವು ಅದಕ್ಕೆ ಒಪ್ಪಿಗೆಯನ್ನು ನೀಡಬಹುದು. ಆದ್ದರಿಂದ ಕರಡು ಸಂವಿಧಾನದ ಅನುಚ್ಛೇದಗಳನ್ನು ಒಂದೊಂದಾಗಿ ಚರ್ಚೆಗೆ ತೆಗೆದುಕೊಳ್ಳುವ ಮೊದಲು, ರಾಷ್ಟ್ರೀಯ ಭಾಷೆಯ ಪ್ರಶ್ನೆಯನ್ನು ಚರ್ಚೆಗೆ ದಯವಿಟ್ಟು ತೆಗೆದುಕೊಳ್ಳಬೇಕು ಎಂದು ಸಲಹೆಯನ್ನು ತಮಗೆ ನಾನು ನೀಡುತ್ತಿದ್ದೇನೆ. ರಾಷ್ಟ್ರೀಯ ಭಾಷೆಯ ಪ್ರಶ್ನೆಯು ಸಂವಿಧಾನದ ೯೯ನೆಯ ವಿಧಿಯಲ್ಲಿ ಇರುವುದರಿಂದ, ಅದನ್ನು ಕೈಗೆತ್ತಿಕೊಳ್ಳುವುದಕ್ಕೆ ಇನ್ನೂ ಸಾಕಷ್ಟು ಸಮಯವು ಬೇಕಾಗುತ್ತದೆ. ಈ ಪ್ರಶ್ನೆಯಲ್ಲಿ ಹಲವು ತರಹದ ಸಮಸ್ಯೆಗಳು ತುಂಬಿವೆ ಮತ್ತು ನಮ್ಮಲ್ಲಿ ಕೆಲವರು ಇದರಲ್ಲಿ ನಮ್ಮ ಭವಿಷ್ಯವು ಹಾಸುಹೊಕ್ಕಾಗಿದೆ ಎಂದು ಭಾವಿಸುತ್ತಾರೆ. ಇತರ ಕೆಲವು ಸದಸ್ಯರು ಇದಕ್ಕೆ ಪ್ರಾಮುಖ್ಯವನ್ನು ನೀಡುವುದಿಲ್ಲ. ಆದ್ದರಿಂದ ಈ ಪ್ರಶ್ನೆಯನ್ನು ತಾವು ಮೊದಲು ಚರ್ಚೆಗೆ ತೆಗೆದುಕೊಂಡು ಅದರ ಬಗೆಗೆ ನಿರ್ಧಾರವನ್ನು ತೆಗೆದುಕೊಳ್ಳುವ ಅವಕಾಶವನ್ನು ನಮಗೆ ನೀಡಬೇಕೆಂದು ನಾನು ತಮ್ಮನ್ನು ಬೇಡಿಕೊಳ್ಳುತ್ತೇನೆ. ಅನಂತರ ನಾವು ಇಂಗ್ಲಿಷ್ ಕರಡು ಸಂವಿಧಾನದಲ್ಲಿರುವ ಅನುಚ್ಛೇದಗಳನ್ನು ತದನಂತರ ಹಿಂದೀ ಭಾಷೆಯಲ್ಲಿರುವ ಅನುಚ್ಛೇದಗಳನ್ನು ಪರಿಶೀಲಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಬಹುದು.

**ಮಾನ್ಯ ಸಭಾಧ್ಯಕ್ಷರು :** ಅವರು ರಾಷ್ಟ್ರೀಯ ಭಾಷೆಯನ್ನು ಕುರಿತ ಚರ್ಚೆಯನ್ನು ಮೊದಲು ಕೈಗೆತ್ತಿಕೊಳ್ಳಿ ಎಂದು ಒತ್ತಾಯಿಸಲು ಬಳಸಿದ ಕಾರಣಗಳೇ ನನ್ನನ್ನು ಈ ಪ್ರಶ್ನೆಯನ್ನು ಕೈಗೆತ್ತಿಕೊಳ್ಳುವುದನ್ನು ಇನ್ನೂ ಮುಂದಕ್ಕೆ ದೂಡಬೇಕೆಂದು ಪ್ರೇರೇಪಿಸುತ್ತಿವೆ ಎಂದು ನಾನು ಹೇಳಬೇಕಾಗಿದೆ. ಅವರು ತಮ್ಮ ವಾದಕ್ಕೆ ನೀಡಿರುವ ಕಾರಣವೆಂದರೆ ಈ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ, ಕೆಲವರು ಒಂದು ವಾದಕ್ಕೆ ಬಲವಾಗಿ ಅಂಟಿಕೊಂಡಿದ್ದರೆ, ಇತರರು ಬೇರೆ ಒಂದು ವಾದಕ್ಕೆ ಅಷ್ಟೇ ಬಲವಾಗಿ ಅಂಟಿಕೊಂಡಿದ್ದಾರೆ. ಶಾಂತ ವಾತಾವರಣದಲ್ಲಿ ಮತ್ತು ನಮ್ಮ ಮನಸ್ಸುಗಳು ಪರಸ್ಪರ ತಿಕ್ಕಾಡಿ ಕಿರಿಕಿರಿಗೊಳ್ಳುವ ಮೊದಲು ನಾವು ಸಂವಿಧಾನದ ಮೂಲಾಂಶಗಳನ್ನು ಚರ್ಚಿಸೋಣವೆಂದು ನಾನು ಸಲಹೆಯನ್ನು ನೀಡುತ್ತೇನೆ. ಆದ್ದರಿಂದ ನಾವು ಸಂವಿಧಾನದ ಅನುಚ್ಛೇದಗಳನ್ನೇ ಕ್ರಮವಾಗಿ ಕೈಗೆತ್ತಿಕೊಂಡು ಪ್ರತಿಯೊಂದು ವಿಷಯವನ್ನು ಚರ್ಚಿಸೋಣ. ಇದರಿಂದ ಭಾಷೆಯ ಪ್ರಶ್ನೆಗೆ ಯಾವ ತೊಂದರೆಯೂ ಆಗದು. ವಿಷಯಗಳನ್ನು ಕ್ರಮವಾಗಿ ತೆಗೆದುಕೊಂಡು ಚರ್ಚಿಸಿದ ಅನಂತರ ಭಾಷೆಯ ಪ್ರಶ್ನೆಯ ಬಗ್ಗೆ ಸೂಕ್ತ ತೀರ್ಮಾನವನ್ನು ಸದನವು ತೆಗೆದುಕೊಳ್ಳಬಹುದು. ಹಾಗೆ ಭಾಷೆಯ ಪ್ರಶ್ನೆಯು ತೀರ್ಮಾನವಾದ ಅನಂತರ ಎಲ್ಲ ಅನುಚ್ಛೇದಗಳನ್ನೂ ಆ ಭಾಷೆಗೆ ಅನುವಾದ ಮಾಡಿಸಿ ಅದನ್ನೂ ಸದನವು ಅಂಗೀಕರಿಸಬಹುದು. ಇದರಲ್ಲಿ ಕಳೆದುಕೊಳ್ಳುವುದು ಏನೂ ಇಲ್ಲ. ಬದಲಿಗೆ ಪ್ರಾರಂಭದಲ್ಲಿಯೇ ನಾವು ನಮ್ಮ ತಾಳ್ಮೆಯನ್ನು ಕಳೆದುಕೊಳ್ಳದೆ ಸಮಚಿತ್ತದಿಂದ ಮುಂದುವರಿಯಲು ಇದು ಸಹಾಯವಾಗುತ್ತದೆ.

**ಶ್ರೀ ಆರ್.ವಿ. ಧುಲೇಕರ್** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ): *[ಮಾನ್ಯ ಸಭಾಧ್ಯಕ್ಷರೆ, ನಾನು ತಮ್ಮ ಮುಂದೆ ಮಂಡಿಸಲಿರುವ ಪ್ರಸ್ತಾವವು ಹೀಗಿದೆ. ನಾನು ಮೊದಲಬಾರಿಗೆ ಈ ಸದನದಲ್ಲಿ ನನ್ನ ಭಾಷಣವನ್ನು ಹಿಂದಿಯಲ್ಲಿ ಮಾಡಿದಾಗ, ನಮ್ಮ ಸಂವಿಧಾನವು ನಮ್ಮ ರಾಷ್ಟ್ರಭಾಷೆಯಲ್ಲಿ ರೂಪಿಸಬೇಕು ಮತ್ತು ಇಂಗ್ಲಿಷ್ ಭಾಷೆಯ ಆವೃತ್ತಿಯನ್ನು ಅದರ ಅನುವಾದವೆಂದು ಪರಿಗಣಿಸಬೇಕು ಎಂಬ ಒಂದು ತಿದ್ದುಪಡಿಯನ್ನು ಮಂಡಿಸಿದ್ದೆ. ಆದ್ದರಿಂದ ಈಗ ನಾನು ಸಲ್ಲಿಸುವ ಮನವಿಯೆಂದರೆ, ಇಂಗ್ಲಿಷ್ ಭಾಷೆಯಲ್ಲಿರುವ ಸಂವಿಧಾನದ ಅನುಚ್ಛೇದಗಳನ್ನು ಚರ್ಚಿಸಿ ಅವೆಲ್ಲವುಗಳನ್ನೂ ಅಂತಿಮವಾಗಿ ಅಂಗೀಕರಿಸಿದ ಅನಂತರ, ಹಾಗೂ ನಿಮ್ಮ ಅನುಮತಿಯ ಮೇಲೆ ರಾಷ್ಟ್ರಭಾಷೆಯನ್ನು ಕುರಿತು ಒಂದು ನಿರ್ಣಯವನ್ನು ತಲುಪಿದ ತರುವಾಯ, ರಾಷ್ಟ್ರಭಾಷೆಯಲ್ಲಿರುವ ಸಂವಿಧಾನದ ಆವೃತ್ತಿಯನ್ನೇ ಮೂಲ ಆವೃತ್ತಿಯೆಂದು ಪರಿಗಣಿಸಬೇಕೆಂಬ ಪ್ರಸ್ತಾವವನ್ನು ನಾನು ಮಂಡಿಸುತ್ತೇನೆ. ಇಂಗ್ಲಿಷ್ ಭಾಷೆಯ ಸಂವಿಧಾನದ ಅನುವಾದವನ್ನು ನಮ್ಮ ಸಂವಿಧಾನವೆಂದು ಅಂಗೀಕರಿಸಿದರೆ ಅದು ನಮ್ಮ ಗೌರವಕ್ಕೆ ಕುಂದು ತರುತ್ತದೆ. ಅದನ್ನು ಯಾವು ರಾಷ್ಟ್ರವೂ ಇಲ್ಲಿಯವರೆಗೆ ಮಾಡಿಲ್ಲ.

ಚರ್ಚೆಯಲ್ಲಿ ಸದಸ್ಯರು ಇಂಗ್ಲಿಷ್‌ನಲ್ಲಿ ಮಾತನಾಡುತ್ತಾರೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾನು ಕೂಡ ಇಂಗ್ಲಿಷ್‌ನಲ್ಲಿಯೇ ಮಾತನಾಡಲು ಇಚ್ಛಿಸುತ್ತೇನೆ ಮತ್ತು ಇನ್ನು ಮುಂದೆ ಹಿಂದಿಯಲ್ಲಿಯೂ ಮಾತನಾಡುತ್ತೇನೆ. ಈ ಚರ್ಚೆಯು ಮುಗಿದ ಅನಂತರ ನಾನು ಒಂದು ಗೊತ್ತುವಳಿಯನ್ನು ಮಂಡಿಸುತ್ತೇನೆಂದು ತಮಗೆ ತಿಳಿಸುತ್ತಿದ್ದೇನೆ. ಅದೇಂದರೆ, ಇಂಗ್ಲಿಷ್ ಭಾಷೆಯಲ್ಲಿನ ಸಂವಿಧಾನದ ಆವೃತ್ತಿಯನ್ನು ಅನುವಾದವೆಂದೂ, ರಾಷ್ಟ್ರಭಾಷೆಯಲ್ಲಿನ ಆವೃತ್ತಿಯನ್ನು ಮೂಲವೆಂದೂ ಪರಿಗಣಿಸಬೇಕು. ಇಂಗ್ಲಿಷ್ ಭಾಷೆಯಲ್ಲಿನ ಸಂವಿಧಾನವನ್ನು ಅನುವಾದವೆಂದೇ ಕರೆಯಬೇಕು. ನಾನು ಈ ಗೊತ್ತುವಳಿಯನ್ನು ಯಾವಾಗ ಮಂಡಿಸಬಹುದೆಂಬುದನ್ನು ನನಗೆ ತಿಳಿಸಬೇಕೆಂದು ತಮ್ಮನ್ನು ಕೋರುತ್ತೇನೆ.]*

**ಮಾನ್ಯ ಸಭಾಧ್ಯಕ್ಷರು** : *[ಹಿಂದಿ ಅಥವಾ ಉರ್ದು ಭಾಷೆಯಲ್ಲಿನ ಸಂವಿಧಾನವು ಮೂಲ ಸಂವಿಧಾನವೆಂದು ಅಂಗೀಕೃತವಾಗಬೇಕೆ ಎಂಬುದನ್ನು ತೀರ್ಮಾನಿಸುವ ಹಕ್ಕನ್ನು ಈ ಸದನವು ಹೊಂದಿದೆ. ಇತರ ಆವೃತ್ತಿಗಳನ್ನು ಅದರ ಅನುವಾದವೆಂದು ಪರಿಗಣಿಸಲಾಗುವುದು. ಹಾಗೆ ಹೇಳಲು ನಿಮಗೆ ಅಧಿಕಾರವಿದೆ.]*

**ಶ್ರೀ ಸುರೇಶ್ಚಂದ್ರ ಮಜುಮ್‌ದಾರ್** (ಪಶ್ಚಿಮ ಬಂಗಾಳ : ಸಾಮಾನ್ಯ) : ಮಾನ್ಯರೆ, ನೀವು ಅನುವಾದಗಳ ವಿಷಯದಲ್ಲಿ ತಮ್ಮ ಆದೇಶವನ್ನು ಇತ್ತಿದ್ದೀರಿ. ಕೆಲವೊಂದು ಭಾಷೆಗಳಿಗೆ ಸಂವಿಧಾನದ ಅನುವಾದವು ಆಗಿದೆ. ಅದರ ಬಗ್ಗೆ ನನ್ನ ತಕರಾರೇನೂ ಇಲ್ಲ. ಆದರೆ, ನಾವು ಸಂವಿಧಾನವನ್ನು ರೂಪಿಸುವ ಸಮಯದಲ್ಲಿ ಅದು ನಮ್ಮ ದೇಶದ ಜನರಿಗೆ, ಅವರು ಯಾವ ಭಾಷೆಯಲ್ಲಿಯೇ ಮಾತನಾಡಿದರೂ, ಅರ್ಥವಾಗುವಂತೆ ಇರಬೇಕು. ಆದ್ದರಿಂದ, ತಾವು ದಯವಿಟ್ಟು, ತಮ್ಮ ಅನುವಾದದ ಈ ಪ್ರಕ್ರಿಯೆಯಲ್ಲಿ ಭಾರತದ ಎಲ್ಲ ಪ್ರಮುಖ ಭಾಷೆಗಳನ್ನೂ ಸೇರಿಸಿದರೆ, ಅದರಿಂದ ಎಲ್ಲರಿಗೂ ಅನುಕೂಲವುಂಟಾಗುತ್ತದೆ. ಹೀಗೆ ಮಾಡಿದರೆ, ತಮಗೆ ತಿಳಿಯದ ಭಾಷೆಯಲ್ಲಿ ಅಥವಾ ಭಾಷೆಗಳಲ್ಲಿ ಸಭೆಯ ನಡವಳಿಯು ನಡೆಸಲ್ಪಟ್ಟಿತು ಎಂದು ಬರಬಹುದಾದ ದೂರು ತಪ್ಪುತ್ತದೆ. ಇದು ನನ್ನ ಸಲಹೆ. ನನಗೆ ಹಿಂದಿಯ ಬಗ್ಗೆ ದ್ವೇಷವಾಗಲೀ, ಇಂಗ್ಲಿಷ್‌ನ ಬಗ್ಗೆ ಮೋಹವಾಗಲೀ ಇಲ್ಲ, ಆದರೆ, ಇಲ್ಲಿ ಮುಖ್ಯವಾಗಿರುವುದು ಸಂವಿಧಾನ. ಅದು ನಮ್ಮ ದೇಶದ ಎಲ್ಲ ಜನರಿಗೂ ಅರ್ಥವಾಗುವಂತೆ ಇರಬೇಕು. ಆದ್ದರಿಂದ ಅನುವಾದದ ತಮ್ಮ ಯೋಜನೆಯಲ್ಲಿ ಕನಿಷ್ಠ ಪಕ್ಷ ಭಾರತದ ಎಲ್ಲ ಪ್ರಮುಖ ಭಾಷೆಗಳನ್ನೂ ಸೇರಿಸಬೇಕೆಂಬುದು ನನ್ನ ಪ್ರಾರ್ಥನೆ. ಇದು ತಮಗೆ ಕಷ್ಟಕರವಾದ ಕೆಲಸವೇನೂ ಆಗುವುದಿಲ್ಲ.

**ಪಂಡಿತ್ ಹೃದಯನಾಥ ಕುಂಜ್ರು** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ನಮ್ಮ ಮುಂದಿರುವ ಮಸೂದೆಗೆ ಸಂಬಂಧಿಸಿದಂತೆ ಯಾವ ಕ್ರಮಗಳನ್ನು ಅನುಸರಿಸಲಿರುವಿರಿ ಎಂಬುದನ್ನು ಕುರಿತು ತಾವು ಒಂದು ಪ್ರಕಟಣೆಯನ್ನು ನೀಡಿದ್ದಿರಿ. ಅದು ಸದ್ಯದಲ್ಲಿಯೇ ನಡೆಯಲಿರುವ ಚರ್ಚೆಗಳ ಮೇಲೆ ಗಾಢವಾದ ಪ್ರಭಾವವನ್ನು ಬೀರಲಿದೆ. ತಾವು ಎರಡು ಅಂಶಗಳ ಬಗ್ಗೆ ನಮ್ಮ ಗಮನವನ್ನು ಸೆಳೆದಿದ್ದಿರಿ.

ಮೊದಲನೆಯ ಅಂಶ, ಈ ಮಸೂದೆಯ ವಿಷಯಗಳು ಕೆಲವು ತಿಂಗಳುಗಳ ಹಿಂದೆ ಈ ಸದನದಿಂದ ಅಂಗೀಕರಿಸಲ್ಪಟ್ಟಿರುವುದರಿಂದ, ಇದರಲ್ಲಿನ ನಿಯಮಗಳನ್ನು ಕುರಿತ ಅಥವಾ ಅವುಗಳನ್ನು ತಿದ್ದುಪಡಿ ಮಾಡುವ ಯಾವ ಪ್ರಸ್ತಾವವನ್ನೂ ಮಂಡಿಸಬಾರದು. ಮಾನ್ಯರೆ, ಈ ವಿಷಯವು.......

**ಮಾನ್ಯ ಸಭಾಧ್ಯಕ್ಷರು** : ಹಾಗೆ ಹೇಳುವಾಗ ನಾನು 'ಸಾಮಾನ್ಯವಾಗಿ' ಎಂಬ ವಿಶೇಷಣವನ್ನು ಅದಕ್ಕೆ ಹಚ್ಚಿದ್ದೆ.

**ಪಂಡಿತ್ ಹೃದಯನಾಥ ಕುಂಜ್ರು** : ಪೀಠವು ಈ ಪದವನ್ನು ಹೇಗೆ ಅರ್ಥೈಸುತ್ತದೆ ಎಂಬುದನ್ನು ಇದು ಅವಲಂಬಿಸಿರುತ್ತದೆ. ಈ ಮಸೂದೆಯಲ್ಲಿಯ ನಿಯಮಗಳನ್ನು ಕುರಿತು ಚರ್ಚೆಯು ನಡೆಯುತ್ತಿದ್ದಾಗ, ಇಡೀ ಚಿತ್ರಣವು ನಮ್ಮ ಕಣ್ಣಿನ ಮುಂದೆ ಬಂದಾಗ ನಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಲು ಉತ್ತಮ ಅವಕಾಶಗಳು ಸಿಗಲಿವೆ ಎಂದು ಹೇಳಲಾಗಿತ್ತು. ಮಾನ್ಯರೆ, ಈ ವಿಷಯಕ್ಕೆ ಗಂಭೀರವಾಗಿ ನಾವು ನಮ್ಮ ಗಮನವನ್ನು ನೀಡಬೇಕಾಗಿದೆಯೆಂಬುದು ನನ್ನ ಅಭಿಪ್ರಾಯ. ಕೆಲವು ತಿಂಗಳುಗಳ ಹಿಂದೆ ಕೆಲವೊಂದು

ನಿರ್ಣಯಗಳನ್ನು ಅಂಗೀಕರಿಸಿದ್ದೆವು. ಆದರೆ, ಕಾನೂನನ್ನು ಮತ್ತೆ ಸಂಪೂರ್ಣವಾಗಿ ನೋಡಿದಾಗ ಅಥವಾ ಅದರ ಬಗ್ಗೆ ಮರುಚಿಂತನೆಯನ್ನು ಮಾಡಿದಾಗ, ನಮ್ಮಲ್ಲಿ ಕೆಲವರಿಗೆ ಈ ಕಾನೂನಿನಲ್ಲಿರುವ ನಿಯಮಗಳನ್ನು ಮಾರ್ಪಡಿಸಬೇಕೆಂದು ಅಥವಾ ಸಂಪೂರ್ಣವಾಗಿ ಬದಲಾಯಿಸಬೇಕೆಂದು ತೋರಿದರೆ, ಅಂತಹವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಹಕ್ಕನ್ನು ಹತ್ತಿಕ್ಕಬಾರದು.

**ಮಾನ್ಯ ಸಭಾಧ್ಯಕ್ಷರು :** ನಾನು ತತ್‌ಕ್ಷಣ ಪ್ರತಿಕ್ರಿಯಿಸಬೇಕೆಂದರೆ, ನಾನು ಯಾವ ಚರ್ಚೆಯನ್ನೂ ತಡೆಯಬೇಕೆಂಬ ಉದ್ದೇಶವನ್ನು ಹೊಂದಿಲ್ಲ. ತನ್ನ ಹಿಂದಿನ ತೀರ್ಮಾನಗಳನ್ನು ಪುನರ್‌ಪರಿಶೀಲಿಸುವ ನಿರ್ಧಾರವನ್ನು ತೆಗೆದುಕೊಳ್ಳುವುದು ಸದನಕ್ಕೆ ಬಿಟ್ಟ ವಿಚಾರ. ಈ ಸದನದ ಅಧ್ಯಕ್ಷನಾಗಿ ನಾನು ಯಾವುದೇ ಚರ್ಚೆಯನ್ನೂ ಅಥವಾ ಪುನರ್‌ಪರಿಶೀಲನೆಯನ್ನೂ ತಡೆಯುವ ಉದ್ದೇಶವನ್ನು ಹೊಂದಿಲ್ಲ.

**ಪಂಡಿತ್ ಹೃದಯನಾಥ್ ಕುಂಜ್ರು :** ತನ್ನ ಹಿಂದಿನ ತೀರ್ಮಾನಗಳನ್ನು ಅಥವಾ ಅದರಲ್ಲಿನ ಕೆಲವು ಅಂಶಗಳನ್ನು ಮತ್ತೆ ಪರಿಶೀಲಿಸುವ ಅಧಿಕಾರವು ಖಂಡಿತವಾಗಿಯೂ ಸದನಕ್ಕೆ ಇದೆ. ಹಿಂದೆ ತೆಗೆದುಕೊಂಡ ತೀರ್ಮಾನಗಳಲ್ಲಿ ಬದಲಾವಣೆಗಳನ್ನು ಮಾಡಲು ಒಪ್ಪದಿದ್ದರೆ, ಯಾವುದಾದರೂ ಸದಸ್ಯರು ಮಾರ್ಪಾಟಿಗಾಗಿ ಮಾಡಿದ ಸಲಹೆಯನ್ನು ಅದು ಸಾರಾಸಗಟಾಗಿ ತಿರಸ್ಕರಿಸುವ ಹಕ್ಕು ಅದಕ್ಕಿದೆ. ಆದರೆ ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಕೆಲವು ನಿರ್ದಿಷ್ಟ ತಿದ್ದುಪಡಿಗಳನ್ನು ತಾವು ಒಪ್ಪುವುದೇ ಇಲ್ಲವೆಂಬ ಅಭಿಪ್ರಾಯವು ನನ್ನ ಮನಸ್ಸಿನಲ್ಲಿ ಕುಳಿತಿತ್ತು.

**ಮಾನ್ಯ ಸಭಾಧ್ಯಕ್ಷರು :** ತಮ್ಮಲ್ಲಿ ಅಂತಹ ಅಭಿಪ್ರಾಯವನ್ನು ಮೂಡಿಸಿದ್ದಕ್ಕಾಗಿ ನಾನು ವಿಷಾದಿಸುತ್ತೇನೆ.

**ಪಂಡಿತ್ ಹೃದಯನಾಥ ಕುಂಜ್ರು :** ತಾವು ಆ ರೀತಿ ಹೇಳಿದುದಕ್ಕೆ ನನಗೆ ಬಹಳ ಸಂತೋಷವಾಗಿದೆ. ಮಾನ್ಯರೆ, ಅದು ನಿಮ್ಮ ಉದ್ದೇಶವಾಗಿರಲಿಲ್ಲ. ಆದ್ದರಿಂದ ತಮ್ಮ ಹೇಳಿಕೆಯ ಬಗ್ಗೆ ಚರ್ಚೆಯನ್ನು ಮುಂದುವರಿಸುವ ಆವಶ್ಯಕತೆಯಿಲ್ಲ.

ಮುಂದೆ ತಿದ್ದುಪಡಿಯನ್ನು ಮಂಡಿಸುವ ಮೊದಲು ನೀಡಬೇಕಾದ ಸೂಚನೆಯ ಸಂದರ್ಭದಲ್ಲಿ ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳಿರುವ ಕೆಲವು ಅಂಶಗಳನ್ನು ಕುರಿತು ನಾನೀಗ ಮಾತನಾಡಲಿದ್ದೇನೆ. ಮುಂದಿನ ಭಾನುವಾರ ಸಂಜೆ ಐದು ಗಂಟೆಯವರೆಗೆ ಬರುವ ತಿದ್ದುಪಡಿಗಳ ಸೂಚನೆಗಳನ್ನು ಮಾತ್ರ ಪರಿಗಣಿಸುವುದಾಗಿಯೂ, ಅನಂತರ ಬಂದ ಸೂಚನೆಗಳು ಗಂಭೀರವಾದ ವಿಷಯಗಳಿಗೆ ಸಂಬಂಧಪಡದೆ ಇದ್ದರೆ ಅವುಗಳನ್ನು ಗಮನಿಸುವುದಿಲ್ಲವೆಂದೂ ಹೇಳಿದ್ದಿರಿ. ತಾಮ್ಮ ಹೇಳಿಕೆಯಲ್ಲಿ ಇರುವ ತಿರುಳನ್ನು ನಾವೆಲ್ಲರೂ ಪ್ರಶಂಸಿಸುತ್ತೇವೆ. ಸಾಧ್ಯವಾದಮಟ್ಟಿಗೂ, ನಮ್ಮ ಚರ್ಚೆಗಳು ಒಂದು ನಿರ್ದಿಷ್ಟ ಕ್ರಮದಲ್ಲಿ ಸಾಗಬೇಕು ಮತ್ತು ಸದನವು ಪರಿಗಣಿಸಬಹುದಾದ ಅಂಶಗಳಿಗೆ ಮಾತ್ರ ಅವು ಸಂಬಂಧಿಸಿರಬೇಕು. ತಿದ್ದುಪಡಿಗಳ ಲಕ್ಷಣಗಳನ್ನು ಕುರಿತು ತಾವು ನೀಡಿರುವ ಸಲಹೆಗಳು ಬಹಳ ತೂಕವನ್ನುಳ್ಳದ್ದಾಗಿವೆ. ಆದರೆ, ಮಾನ್ಯರೆ, ಯಾವುದೇ ತಿದ್ದುಪಡಿಯು ಭಾನುವಾರ ಸಂಜೆ ಐದು ಗಂಟೆಯ ಒಳಗೆ ಸಲ್ಲಿಸಿರಲಿಲ್ಲ ಎಂಬ ಕಾರಣದಿಂದ ತಿರಸ್ಕರಿಸಲ್ಪಡಬಾರದು. ಚರ್ಚೆಯನ್ನು ನಿಯಮಿತ ರೂಪದಲ್ಲಿ ನಡೆಯುವಂತೆ ನೋಡಿಕೊಳ್ಳುವುದು ಪೀಠದ ಕರ್ತವ್ಯ ಮತ್ತು ಇಂತಹ ಕಷ್ಟತರವಾದ ಕಾರ್ಯವನ್ನು ನಿರ್ವಹಿಸುವಲ್ಲಿ ಎಲ್ಲ ಸದಸ್ಯರೂ ಪೀಠಕ್ಕೆ ತಮ್ಮ ಬೆಂಬಲವನ್ನು ನೀಡುತ್ತಾರೆಂಬ ವಿಷಯದಲ್ಲಿ ನನಗೆ ಸಂದೇಹವಿಲ್ಲ. ನಿಯಮಗಳ ಅಡಿಯಲ್ಲಿ ಯಾವಾಗ ಬೇಕಾದರೂ ತಿದ್ದುಪಡಿಯ ಸೂಚನೆಯನ್ನು ನೀಡಲು ನಮಗೆ ಹಕ್ಕಿದೆ, ಮತ್ತು ಹೊಸ ತಿದ್ದುಪಡಿಗಳನ್ನು ಸದನದ ಮುಂದೆ ಇಡುವ ನಮ್ಮ ಹಕ್ಕನ್ನು ಯಾರೂ ಪ್ರಶ್ನಿಸುವ ಹಾಗಿಲ್ಲ. ಅದನ್ನು ಮಾನ್ಯರೆ, ತಾವೂ ಪ್ರಶ್ನಿಸುವ ಹಾಗಿಲ್ಲ.

ಯಾವುದಾದರೂ ತಿದ್ದುಪಡಿಯು ಅನಗತ್ಯವೆಂದು ಅಥವಾ ಮುಖ್ಯವಲ್ಲದ ಅಂಶಗಳನ್ನು ಕುರಿತದ್ದಾಗಿದೆಯೆಂದು ತಾವು ಪರಿಗಣಿಸಿದಾಗ, ಅಂತಹ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳುವಂತೆ ತಾವು

ಸಂಬಂಧಪಟ್ಟ ಸದಸ್ಯರಿಗೆ ಸಲಹೆಯನ್ನು ನೀಡಬಹುದು. ಆದರೆ ಸದರಿ ಸದಸ್ಯರು ತಮ್ಮ ತಿದ್ದುಪಡಿಯು ಅಮುಖ್ಯವಾದ ಅಂಶಗಳನ್ನು ಕುರಿತದ್ದಾಗಿದ್ದರೂ ಅದನ್ನು ಮಂಡಿಸಲು ಒತ್ತಾಯಿಸಿದರೆ, ನಮ್ಮ ಹಕ್ಕುಗಳನ್ನು ಅಬಾಧಿತವಾಗಿರುವಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಹೊತ್ತುಕೊಂಡಿರುವ ತಾವು ತಮ್ಮ ಅಧಿಕಾರದ ಬಲದಿಂದ ತಿದ್ದುಪಡಿಯನ್ನು ಮಂಡಿಸಲು ಆ ಸದಸ್ಯರಿಗೆ ಇರುವ ಹಕ್ಕನ್ನು ಮೊಟಕುಗೊಳಿಸಬಾರದು. ಇದು ಬಹಳ ಮುಖ್ಯವಾಗಿರುವ ವಿಷಯ. ಇದು ನಿಯಮಕ್ಕೆ ಸಂಬಂಧಿಸಿದ ವಿಷಯ. ನಮ್ಮ ದಿನನಿತ್ಯದ ವ್ಯವಹಾರದಲ್ಲಿ ಪೀಠ ಮತ್ತು ಸದಸ್ಯರ ನಡುವೆ ಯಾವುದಾದರೂ ತಿಕ್ಕಾಟವು ಬರುತ್ತದೆ ಎಂದು ನನಗೆ ಎನಿಸುವುದಿಲ್ಲ. ಆದರೆ, ಯಾವುದೇ ಹಕ್ಕುಗಳನ್ನೂ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಕಿತ್ತುಕೊಳ್ಳುವ ವಿಷಯದಲ್ಲಿ ನಾನು ಆತಂಕಿತನಾಗಿದ್ದೇನೆ. ನನ್ನ ಈ ಮಾತುಗಳು ಪೀಠದ ಗಮನಕ್ಕೆ ಬರುತ್ತವೆ ಮತ್ತು ನಾನು ಆಡಿದ ಮಾತಿನ ಹಿಂದಿರುವ ಅಭಿಪ್ರಾಯವನ್ನು ಪೀಠವು ಗುರುತಿಸುತ್ತದೆ ಎಂದು ನಾನು ಆಶಿಸುತ್ತೇನೆ. ನಾವೆಲ್ಲರೂ ತಮ್ಮನ್ನು ಗೌರವಿಸುತ್ತೇವೆ. ತಾವು ಆಡುವ ಮಾತನ್ನು ಗಮನವಿಟ್ಟು ಕೇಳುತ್ತೇವೆ ಮತ್ತು ನಿಮ್ಮ ಸಲಹೆ, ಸೂಚನೆಗಳನ್ನು ಪಾಲಿಸಲು ಬದ್ಧರಾಗಿದ್ದೇವೆ, ಆದರೆ ನಮಗೆ ನೀಡಿರುವ ಹಕ್ಕುಗಳಲ್ಲಿ ಅಲ್ಪವಾದುದನ್ನೂ ತಾವು ಕಿತ್ತುಕೊಳ್ಳಬಾರದೆಂದು ನಾನು ಮನಃಪೂರ್ವಕವಾಗಿ ಪ್ರಾರ್ಥಿಸುತ್ತೇನೆ. ತಾವು ನಮ್ಮ ಗೌರವದ ಮತ್ತು ಹಕ್ಕುಗಳ ರಕ್ಷಕರು ಎಂಬ ಭಾವನೆ ನಮ್ಮಲ್ಲಿ ಮೂಡುವಂತೆ ಮತ್ತು ಸದನವು ಹೊಂದಿರುವ ಪ್ರತಿಯೊಂದು ಹಕ್ಕನ್ನೂ ಮುಕ್ಕುಬಾರದ ರೀತಿಯಲ್ಲಿ ತಾವು ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತೀರಿ ಎಂಬ ವಿಶ್ವಾಸವನ್ನು ನಾವು ಹೊಂದಿದ್ದೇವೆ.

**ಮಾನ್ಯ ಸಭಾಧ್ಯಕ್ಷರು** : ಯಾವುದೇ ಸದಸ್ಯರಿಗೆ ಅವರ ಹಕ್ಕುಗಳನ್ನು ಮೊಟಕುಗೊಳಿಸುತ್ತಿದ್ದೇನೆಂಬ ಭಾವನೆಯನ್ನು ಮೂಡಿಸುವ ಕೆಲಸವನ್ನು ನಾನು ಮಾಡಿಲ್ಲವೆಂದು ಭಾವಿಸುತ್ತೇನೆ ಮತ್ತು ಅದೇ ಪರಂಪರೆಯನ್ನು ಮುಂದುವರಿಸುತ್ತೇನೆಂಬ ಆಶಾಭಾವನೆಯನ್ನು ಹೊಂದಿದ್ದೇನೆ.

**ಮೌಲಾನಾ ಹಸ್ರತ್ ಮೋಹಾನಿ** (ಸಂಯುಕ್ತ ಪ್ರಾಂತ್ಯಗಳು : ಮುಸ್ಲಿಮ್) : ಮಾನ್ಯರೆ, ನಾನು ಈಗಾಗಲೇ ಈ ಕೆಳಕಂಡ ಗೊತ್ತುವಳಿಯನ್ನು ಮಂಡಿಸಲು ಸೂಚನೆಯನ್ನು ನೀಡಿದ್ದೇನೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ:

> "ಒಂದು ಹೊಸ ಹಾಗೂ ಸಮರ್ಥ ಸಂವಿಧಾನ ರಚನಾಮಂಡಲಿಯನ್ನು ಕೋಮುವಾದಿ ಪಕ್ಷಗಳನ್ನು ಬಿಟ್ಟು, ರಾಜಕೀಯ ಪಕ್ಷಗಳ ಸಹಾಯದಿಂದ ಜಂಟಿ ಮತದಾರ ಸಮುದಾಯದಿಂದ ಆಯ್ಕೆ ಮಾಡುವಂತೆ ಮಾಡುವ ವರೆಗೆ, ಭಾರತದ ಸಂವಿಧಾನದ ಕರಡನ್ನು ಪರಿಶೀಲಿಸುವ ಕಾರ್ಯವನ್ನು ಮುಂದೂಡಬೇಕು."

ಅಲ್ಲದೆ, ನಾವು ಭಾರತದ ಕೇಂದ್ರ ಸಂವಿಧಾನವನ್ನು ಪರಿಶೀಲಿಸುವವರೆಗೆ ಪ್ರಾದೇಶಿಕ ಸಂವಿಧಾನವನ್ನು ಪರಿಶೀಲಿಸುವ ಕಾರ್ಯವನ್ನು ಮುಂದೂಡಬೇಕು ಎಂಬ ಸೂಚನೆಯನ್ನು, ನಾನು ಪ್ರಾದೇಶಿಕ ಸಂವಿಧಾನದ ಮಾದರಿಯ ನಿಯಮಗಳನ್ನು ಪ್ರಸ್ತುತ ಪಡಿಸುವ ಸಂದರ್ಭದಲ್ಲಿ ಮಾಡಿದ ತಿದ್ದುಪಡಿಯ ಸೂಚನೆಯನ್ನು ನೀಡಿದಾಗ ತಾವು ನೀಡಿದ ರೂಲಿಂಗ್‌ನ್ನು ಕೂಡ ತಮ್ಮ ಗಮನಕ್ಕೆ ತರಲು ಬಯಸುತ್ತೇನೆ....

**ಮಾನ್ಯ ಸಭಾಧ್ಯಕ್ಷರು** : ನಿಮ್ಮ ತಿದ್ದುಪಡಿಯನ್ನು ಸೂಕ್ತ ಸಮಯದಲ್ಲಿ ಕೈಗೆತ್ತಿಕೊಳ್ಳುತ್ತೇವೆ.

**ಮೌಲಾನಾ ಹಸ್ರತ್ ಮೋಹಾನಿ** : ನನ್ನ ಪ್ರಸ್ತಾವವನ್ನು ಮೊದಲು ತೆಗೆದುಕೊಳ್ಳಬೇಕೆಂದು ಬಯಸುತ್ತೇನೆ.

**ಶ್ರೀ ಹುಸೇನ್ ಇಮಾಮ್** : (ಬಿಹಾರ್ : ಮುಸ್ಲಿಮ್) : ಆ ಮಸೂದೆಯನ್ನು ಪರಿಗಣಿಸಬೇಕು ಎಂಬ ಪ್ರಸ್ತಾವವನ್ನು ಇನ್ನೂ ಮಂಡಿಸಲಾಗಿಲ್ಲ. ಆದ ಕಾರಣ, ಈ ತಿದ್ದುಪಡಿಯನ್ನು ಈ ಹಂತದಲ್ಲಿ ಕೈಗೆತ್ತಿಕೊಳ್ಳಲಾಗುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು** : ಈ ಕಾರಣದಿಂದಲೇ ನಾನು ಅದನ್ನು ಸೂಕ್ತ ಸಮಯದಲ್ಲಿ ಕೈಗೆತ್ತಿಕೊಳ್ಳಲಾಗುವುದು ಎಂದು ಹೇಳಿದೆ.

ಅನಂತರ ಸಭೆಯನ್ನು ಭೋಜನಕ್ಕಾಗಿ ಮೂರು ಗಂಟೆಯವರೆಗೆ ಮುಂದೂಡಲಾಯಿತು.

ಸಭೆಯು ಮತ್ತೆ ಮೂರು ಗಂಟೆಗೆ ಸಮಾವೇಶಗೊಂಡಿತು, ಗೌರವಾನ್ವಿತ ಸಭಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದ್ ಅವರು ಅಧ್ಯಕ್ಷ ಪೀಠದಲ್ಲಿದ್ದರು.

**ಶ್ರೀ ಮಹಾವೀರ ತ್ಯಾಗಿ :** ಮಾನ್ಯ ಸಭಾಧ್ಯಕ್ಷರೆ, ಭೋಜನವಿರಾಮಕ್ಕೆ ಮೊದಲು ಪರಿಶೀಲನೆಗಾಗಿ ತಮ್ಮ ಮುಂದೆ ಇರಿಸಿದ ಪ್ರಶ್ನೆ ಇಲ್ಲಿ ನಡೆಯುವ ಚರ್ಚೆಗಳ ವಿಷಯದಲ್ಲಿ ಅನುಸರಿಸಬೇಕೆಂದು ತಾವು ಹೇಳಿದ ಕ್ರಮಗಳು ಅನುಸರಿಸಲೇಬೇಕಾದ ನಿಯಮಗಳಾಗಿ ಮುಂದುವರಿಯುತ್ತವೆಯೋ ಅಥವಾ ನನ್ನ ಸ್ನೇಹಿತರಾದ ಪಂಡಿತ್ ಹೃದಯ್‌ನಾಥ್ ಕುಂಜ್ರು ಅವರು ತಮ್ಮ ಮುಂದಿಟ್ಟ ಕೋರಿಕೆಗೆ ತಾವು ಒಪ್ಪುತ್ತೀರೋ ಎಂಬುದು. ನಾವು ನೀಡುವ ಸೂಚನೆಗಳು ಸ್ವೀಕೃತವಾಗಬೇಕಾದರೆ ನಾವು ಅವುಗಳನ್ನು ಎರಡು ದಿನಗಳ ಮೊದಲು ತಮಗೆ ನೀಡಬೇಕು. ಅದಕ್ಕೆ ಸಂಬಂಧಿಸಿದ ನಿಯಮಗಳನ್ನು ಸೂಚಿಸುವುದು ಇಲ್ಲಿ ಅನಗತ್ಯ. ಅದು ಎಲ್ಲರಿಗೂ ತಿಳಿದೇ ಇದೆ. ಅದನ್ನು ನಾವು ಕಳೆದ ಬಾರಿ ಅನುಸ್ಮರಿಸಿದೆವು. ನಮಗೆ ಕರಡು ಸಂವಿಧಾನವನ್ನು ತಲಪಿಸಿದಾಗ, ನಾನು ಮತ್ತು ಇತರ ಹಲವು ಸದಸ್ಯರು ಅದರ ಮೇಲಿನ ಚರ್ಚೆಯ ಸಂದರ್ಭದಲ್ಲಿ ಹಳೆಯ ಕ್ರಮಗಳನ್ನೇ ಅನುಸರಿಸಲಾಗುವುದು ಎಂದು ಭಾವಿಸಿದ್ದೆವು. ಆದರೆ, ಮೊದಲು ನಾವು ಸಂವಿಧಾನದ ಅನುಚ್ಛೇದಗಳನ್ನು ಇಲ್ಲಿ ಚರ್ಚಿಸಿ, ಅನಂತರ ನಮ್ಮೊಳಗೇ ಪರಸ್ಪರ ಚರ್ಚೆಗಳನ್ನು ಮಾಡಿ ಅನಂತರ ನಮ್ಮ ತಿದ್ದುಪಡಿಗಳಿಗೆ ಸೂಚನೆಯನ್ನು ನೀಡಬಹುದು ಎಂದು ಭಾವಿಸಿ, ನಮ್ಮ ಮಿತ್ರರಲ್ಲಿ ಅನೇಕರು ಸೂಚನೆಗಳನ್ನು ಈಗ ನೀಡಿಲ್ಲದೆ ಇರುವ ಸಂಭವವೂ ಇದೆ. ಹಳೆಯ ನಿಯಮವಾದ ೨ ದಿನಗಳ ಅವಧಿಯು ನಮ್ಮಲ್ಲಿಯೇ ಗುಂಪುಗಳನ್ನು ಮಾಡಿಕೊಂಡು ಪರಸ್ಪರರೊಳಗೆ ಚರ್ಚಿಸಿ, ತಿದ್ದುಪಡಿಗಳಿಗೆ ಸೂಚನೆಯನ್ನು ನೀಡಲು ಅವಕಾಶವನ್ನು ನೀಡಿತ್ತು. ಈ ಕ್ರಮವನ್ನು ತೊರೆದು, ಒಂದೊಂದಾಗಿ ಅನುಚ್ಛೇದಗಳನ್ನು ಪರಿಶೀಲಿಸಿ ತಿದ್ದುಪಡಿಗಳಿಗೆ ಸೂಚನೆಯನ್ನು ನೀಡಲು ಅವಕಾಶವನ್ನು ಕೊಡದಿದ್ದರೆ, ಸಂವಿಧಾನ ರಚನಾಸಭೆಗೆ ಹೊಸದಾಗಿ ಬಂದಿರುವ ಸದಸ್ಯರಿಗೆ ಅನ್ಯಾಯ ಮಾಡಿದಂತೆ ಆಗುತ್ತದೆ. ಅವರಲ್ಲಿ ಹಲವರು ಇಂದು ರಿಜಿಸ್ಟರಿನಲ್ಲಿ ಸಹಿಯನ್ನು ಮಾಡಿ ಕೆಲವೇ ಗಂಟೆಗಳ ಹಿಂದೆ ಸಂವಿಧಾನ ರಚನಾಸಭೆಯ ಕಾಗದಪತ್ರಗಳನ್ನು ಪಡೆದುಕೊಂಡಿದ್ದಾರೆ. ಕರಡು ಸಂವಿಧಾನವು ಓದುವ ಮತ್ತು ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ಬಹಳ ಗಾತ್ರವುಳ್ಳದ್ದಾಗಿದೆ. ತಾವು ನನ್ನ ಸ್ನೇಹಿತ ಶ್ರೀ ಕುಂಜ್ರು ಅವರ ಕೋರಿಕೆಯನ್ನು ಮನ್ನಿಸಿ ಚರ್ಚೆಯು ಮುಂದುವರಿಯುತ್ತಿರುವ ಸಮಯದಲ್ಲಿಯೇ ಹೊಸ ಸದಸ್ಯರಿಗೆ ಸಂವಿಧಾನವನ್ನು ಅಧ್ಯಯನ ಮಾಡಲು ಅವಕಾಶವನ್ನು ನೀಡಿದರೆ, ಅವರಿಗೆ ಅವರು ಬಯಸುವ ತಿದ್ದುಪಡಿಗಳಿಗಾಗಿ ಸೂಚನೆಯನ್ನು ನೀಡಲು ಮತ್ತು ಚರ್ಚೆಯಲ್ಲಿ ಭಾಗವಹಿಸಲು ಸಹಾಯವನ್ನು ಮಾಡಿದಂತಾಗುತ್ತದೆ. ಹಾಗಿಲ್ಲದಿದ್ದರೆ ಹೊಸ ಸದಸ್ಯರುಗಳಿಗೆ ಇಲ್ಲಿ ಅವಕಾಶವೇ ಸಿಗುವುದಿಲ್ಲ.

ಮಾನ್ಯ ಸಭಾಧ್ಯಕ್ಷರೆ, ನಾವು ಸಂವಿಧಾನ ರಚನಾಸಭೆಯಲ್ಲಿದ್ದೇವೆ ಮತ್ತು ಸಂವಿಧಾನವನ್ನು ರೂಪಿಸುತ್ತಿದ್ದೇವೆ. ಶಾಸನಸಭೆಯೊಂದರಲ್ಲಿ ಅಂಗೀಕೃತವಾದ ಸಾಮಾನ್ಯ ಕಾನೂನೊಂದನ್ನು ತಿಂಗಳಿಗೊಂದು ಬಾರಿಯಂತೆ ತಿದ್ದುಪಡಿ ಮಾಡಬಹುದು. ಆದರೆ, ಸಂವಿಧಾನವನ್ನು ಹಾಗೆ ಮಾಡಲು ಬರುವುದಿಲ್ಲ. ನಾವು ಮುಂಬರುವ ಶತಮಾನಗಳಿಗಾಗಿ ಸಂವಿಧಾನವನ್ನು ಮಾಡುತ್ತಿದ್ದೇವೆ ಮತ್ತು ಅದಕ್ಕೆ ಸುಲಭವಾಗಿ – ಅಂದರೆ ಶಾಸನಸಭೆಯ ಕಾನೂನುಗಳನ್ನು ತಿದ್ದುಪಡಿ ಮಾಡುವಷ್ಟು ಸುಲಭವಾಗಿ – ತಿದ್ದುಪಡಿಗಳನ್ನು ಮಾಡಲಾಗುವುದಿಲ್ಲ. ಆದ್ದರಿಂದ ಸದನದ ಎಲ್ಲ ಸದಸ್ಯರಿಗೂ ಅವರವರ ಅಭಿಪ್ರಾಯಗಳನ್ನು ತಿಳಿಸಲು ಎಲ್ಲ ಅವಕಾಶಗಳನ್ನೂ ನೀಡಬೇಕು.

ಆದ್ದರಿಂದ, ಸದಸ್ಯರಿಗೆ ನೀಡಿರುವ ಎರಡು ದಿನಗಳ ಕಾಲಾವಧಿಯನ್ನು ಹಿಂತೆಗೆದುಕೊಳ್ಳದ ಹಾಗೆ ನೋಡಿಕೊಳ್ಳಬೇಕೆಂದು ಮತ್ತು ಆ ಸಮಯದಲ್ಲಿ ಪರಿಶೀಲನೆಯಲ್ಲಿರುವ ಪ್ರಸ್ತಾವಕ್ಕೆ ಇರುವ ಸಂಬಂಧವನ್ನು ಗಮನಿಸಿ, ಸಂಬಂಧವುಳ್ಳ ತಿದ್ದುಪಡಿಗಳಿಗೆ ಅವಕಾಶವನ್ನು ನೀಡಬೇಕೆಂದು ನಾನು ಮತ್ತೆ ತಮ್ಮನ್ನು

ಬೇಡಿಕೊಳ್ಳುತ್ತೇನೆ. ಅಧ್ಯಕ್ಷರ ಅನುಮತಿಯಿಲ್ಲದೆ, ಮುಖ್ಯವಾದ ಪ್ರಸ್ತಾವವನ್ನು ಅಸಿಂಧುಗೊಳಿಸುವಂತಹ ಯಾವುದೇ ತಿದ್ದುಪಡಿಯನ್ನೂ ಮಂಡಿಸುವ ಹಾಗಿರಬಾರದು. ಪ್ರಸ್ತಾವವು ಸದನದಲ್ಲಿ ಮಂಡಿಸುವುದಕ್ಕೆ ಮೊದಲು ಒಂದು ಪೂರ್ಣ ದಿನವಿರುವಂತೆ ತಿದ್ದುಪಡಿಗಳಿಗೆ ಸೂಚನೆಯನ್ನು ನೀಡುವ ಅವಕಾಶವಿರಬೇಕು. ಈ ನಿಯಮವು ಸದ್ಯದಲ್ಲಿ ಇರಬೇಕೆಂದರೆ, ಅದನ್ನು ಬದಲಿಸದೆ ಇದ್ದರೆ, ಇದಕ್ಕೆ ........

**ಮಾನ್ಯ ಸಭಾಧ್ಯಕ್ಷರು** : ಸಂಬಂಧಿಸಿದ ನಿಯಮವೆಂದರೆ ೩೮–೦.

**ಶ್ರೀ ಮಹಾವೀರ ತ್ಯಾಗಿ** : ಅದು ಈ ರೀತಿ ಇದೆ:

"ಸಂವಿಧಾನ ಅಥವಾ ಮಸೂದೆಯೊಂದು ಚರ್ಚೆಗೆ ಬರುವ ಎರಡು ದಿನ ಮೊದಲೇ ಸೂಚನೆಯನ್ನು ನೀಡದಿದ್ದರೂ ಅಂತಹ ಸೂಚನೆಯನ್ನು ಪರಿಗಣನೆಗೆ ತೆಗೆದುಕೊಳ್ಳಬಹುದು. ಆದರೆ ಅದಕ್ಕೆ ಯಾವುದಾದರೂ ಸದಸ್ಯರು ಆಕ್ಷೇಪಣೆಯನ್ನು ಎತ್ತಿದ ಸಂದರ್ಭದಲ್ಲಿ, ಅದನ್ನು ಅಧ್ಯಕ್ಷರು ತಮ್ಮ ಪರ್ಯಾಲೋಚನೆಯ ಪ್ರಕಾರ ಕೈಗೆತ್ತಿಕೊಳ್ಳಲು ಆದೇಶವನ್ನು ನೀಡದಿದ್ದರೆ, ಸದರಿ ಸದಸ್ಯರು ಎತ್ತಿದ ಆಕ್ಷೇಪಣೆಯ ಪ್ರಕಾರ ಆ ಸೂಚನೆಯನ್ನು ಪರಿಗಣಿಸಲಾಗುವುದಿಲ್ಲ."

**ಮಾನ್ಯ ಸಭಾಧ್ಯಕ್ಷರು** : ಮಾನ್ಯ ಸದಸ್ಯರು ಎತ್ತಿರುವ ಪ್ರಶ್ನೆಯ ಮೇಲೆ ನಾನು ಈ ನಿಯಮವನ್ನು ಅನುಸರಿಸಿ ತೀರ್ಮಾನವನ್ನು ತೆಗೆದುಕೊಳ್ಳುವಂತೆ ಅವರು ಒತ್ತಾಯಿಸುತ್ತಿಲ್ಲವೆಂದು ನಾನು ಭಾವಿಸುತ್ತೇನೆ (ನಗು).

**ಶ್ರೀ ಎಚ್.ವಿ. ಕಾಮತ್** : ತಾವು ಇಂದು ಮುಂಜಾನೆ ನೀಡಿದ ಹೇಳಿಕೆಗೆ ಸಂಬಂಧಿಸಿದಂತೆ ತಮ್ಮಿಂದ ಸ್ವಲ್ಪ ವಿವರಣೆಯನ್ನು ನಾನು ಬಯಸಬಹುದೇ?

**ಶ್ರೀ ಅಲಘು ರಾಯ್ ಶಾಸ್ತ್ರಿ** : (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : *[ಮಾನ್ಯ ಸಭಾಧ್ಯಕ್ಷರೆ, ಗೌರವಾನ್ವಿತ ಸದಸ್ಯರು ನಿಂತುಕೊಂಡು ಚರ್ಚೆಗೆ ಅಡ್ಡಿಬರುತ್ತಿದ್ದಾರೆ. ನನಗೂ ಮಾತನಾಡಲು ಒಂದು ಅವಕಾಶವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.]*

**ಶ್ರೀ ಎಚ್.ವಿ. ಕಾಮತ್** : ತಾವು ಇಂದು ಮುಂಜಾನೆ ನೀಡಿದ ಹೇಳಿಕೆಗೆ ಸಂಬಂಧಿಸಿದಂತೆ ತಮ್ಮಿಂದ ಸ್ವಲ್ಪ ವಿವರಣೆಯನ್ನು ನಾನು ಬಯಸಬಹುದೇ? ಸದನವು ಡಿಸೆಂಬರ್ ೯ರಂದು ಕೆಲವು ದಿನಗಳ ಮಟ್ಟಿಗೆ ಮುಂದೂಡಲ್ಪಡುತ್ತದೆ ಎಂದು ಹೇಳಿದ್ದಿರಿ. ಸಂವಿಧಾನದ ಪರಿಶೀಲನೆಯು ಪೂರ್ಣಗೊಂಡಿಲ್ಲದಿದ್ದರೂ ಅಂದು ಸದನವನ್ನು ಮುಂದೂಡಲಾಗುತ್ತದೆಯೇ?

**ಮಾನ್ಯ ಸಭಾಧ್ಯಕ್ಷರು** : ಆ ತರಹದ್ದೇನೂ ಇರುವುದಿಲ್ಲ. ನನ್ನ ಬುದ್ಧಿಗೆ ನ್ಯಾಯವೆಂದು ತೋರಿದ ಮಟ್ಟಿಗೆ ಒಂದು ರೀತಿಯ ಕಾರ್ಯಕ್ರಮದ ವೇಳಾಪಟ್ಟಿಯನ್ನು ಸೂಚಿಸಿದ್ದೆ. ಸದನವನ್ನು ಮುಂದೂಡಬೇಕೋ ಅಥವಾ ಮುಂದಿನ ವರ್ಷದ ಡಿಸೆಂಬರ್ ೯ರ ವರೆಗೂ ಸಭೆಯನ್ನು ನಡೆಸಬೇಕೋ ಎಂಬುದನ್ನು ತೀರ್ಮಾನಿಸುವುದು ಸದನಕ್ಕೆ ಬಿಟ್ಟದ್ದು. (ನಗು)

**ಶ್ರೀ ಎಚ್.ವಿ. ಕಾಮತ್** : ಡಿಸೆಂಬರ್ ೯ರಿಂದ ಮುಂದಿನ ದಿನಾಂಕವನ್ನು ನಿಗದಿಪಡಿಸುವವರೆಗೆ ನಮಗೆ ವಿರಾಮ ದೊರೆಯುತ್ತದೆಯೇ?

**ಮಾನ್ಯ ಸಭಾಧ್ಯಕ್ಷರು** : ಅದೆಲ್ಲವೂ ನಮ್ಮ ಕಾರ್ಯಭಾರದ ಮೇಲೆ ನಿಂತಿದೆ. ನಾನು ಚರ್ಚೆಯನ್ನು ಮೊಟಕುಗೊಳಿಸುವುದಿಲ್ಲವೆಂದು ಹಲವು ಬಾರಿ ಹೇಳಿದ್ದೇನೆ. ನಾವು ದೇಶದ ಸಂವಿಧಾನದ ಮೇಲೆ ಚರ್ಚೆಯನ್ನು ಮಾಡುತ್ತಿರುವುದರಿಂದ, ಯಾವುದನ್ನೂ ಆತುರದಲ್ಲಿ ಮಾಡಬಾರದು, ಮತ್ತು ಅದೇ ಸಮಯದಲ್ಲಿ, ನಮ್ಮ ವೇಳೆಯನ್ನೂ ಹಾಳುಮಾಡಬಾರದು.

**ಶ್ರೀ ಎಚ್.ವಿ. ಕಾಮತ್** : ಸಂವಿಧಾನದ ಮೇಲಿನ ಪರಿಶೀಲನೆಯನ್ನು ಮುಗಿಸದಿದ್ದರೂ ನಾವು ಡಿಸೆಂಬರ್ ೯ ರಂದು ಸದನವನ್ನು ಮುಂದೂಡಲಿದ್ದೇವೆಯೇ?

**ಮಾನ್ಯ ಸಭಾಧ್ಯಕ್ಷರು** : ಅದನ್ನು ಅನಂತರ ನೋಡೋಣ.

**ಶ್ರೀ ಎಚ್.ವಿ. ಕಾಮತ್** : ಹೈದರಾಬಾದ್ ಮತ್ತು ಭೂಪಾಲ್ ರಾಜ್ಯಗಳು ಈ ಸಂವಿಧಾನ ರಚನಾಸಭೆಯಲ್ಲಿ ಭಾಗವಹಿಸಿಲ್ಲದಿರುವುದನ್ನು ಕುರಿತು ತಾವು ಇಂದು ಮುಂಜಾನೆ ಅದು ಸರ್ಕಾರವು ಪರಿಗಣಿಸಬೇಕಾದ ವಿಷಯವೆಂದು ಹೇಳಿದ್ದಿರಿ. ಮಾನ್ಯ ಸಭಾಧ್ಯಕ್ಷರೆ, ತಮಗೆ ಇರುವ ಅಧಿಕಾರದ ಅಡಿಯಲ್ಲಿ ಈ ಸದನಕ್ಕೆ ಪ್ರತಿನಿಧಿಗಳನ್ನು ಕಳುಹಿಸಿಕೊಡುವಂತೆ ತಾವು ಹೈದರಾಬಾದ್ ಮತ್ತು ಇತರ ರಾಜ್ಯಗಳ ರಾಜರಿಗೆ ಕೇಳಬಹುದು. ಆದರೆ ಈ ವಿಷಯವು ಸರಕಾರದ ವ್ಯಾಪ್ತಿಯಲ್ಲಿರುವಂತಹುದು ಎಂದು ಹೇಳಿದಿರಿ. ಈ ವಿಷಯದಲ್ಲಿ ಸರಕಾರದ ಪ್ರವೇಶವು ಹೇಗೆ ಸಾಧ್ಯವೆಂಬುದು ನನಗೆ ತಿಳಿಯುತ್ತಿಲ್ಲ. ಈ ಸದನಕ್ಕೆ ಪ್ರತಿನಿಧಿಗಳನ್ನು ಕಳುಹಿಸುವಂತೆ ರಾಜರುಗಳನ್ನು ವಿನಂತಿಸಿಕೊಳ್ಳಲು ತಮಗೆ ಸಂಪೂರ್ಣ ಅಧಿಕಾರವಿದೆ.

**ಮಾನ್ಯ ಸಭಾಧ್ಯಕ್ಷರು** : ಈ ಸದನದಲ್ಲಿ ಕುಳಿತುಕೊಂಡು ಏನನ್ನಾದರೂ ಮಾಡುವಂತೆ ಯಾರನ್ನೂ ಒತ್ತಾಯಿಸುವ ಹಕ್ಕು ನನಗಿಲ್ಲ. ಇಲ್ಲಿಗೆ ಬಂದಿರುವವರು ಸದನದ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅಧಿಕಾರವನ್ನುಳ್ಳವರು ಮತ್ತು ಇಲ್ಲಿಗೆ ಬಂದಿಲ್ಲದೆ ಇರುವವರನ್ನು ನಾವು ಒತ್ತಾಯಿಸುವಂತಿಲ್ಲ. ಇದು ಸರಕಾರಕ್ಕೆ ಬಿಟ್ಟ ವಿಷಯ.

**ಶ್ರೀ ಅಲಘು ರಾಯ್ ಶಾಸ್ತ್ರಿ** : *[ಮಾನ್ಯ ಸಭಾಧ್ಯಕ್ಷರೆ, ನನಗೆ ನೆನಪಿನಲ್ಲಿರುವ ಹಾಗೆ, ನಾವು ಪ್ರಸ್ತುತ ಪಡಿಸಲಿರುವ ಸಂವಿಧಾನವು ಹಿಂದಿಯಲ್ಲಿ ಇರುತ್ತದೆಯೆಂದೂ, ಅದನ್ನು ಇಂಗ್ಲಿಷಿಗೆ ಭಾಷಾಂತರಿಸಬಹುದೆಂದೂ ತಾವು ಕಳೆದ ಅಧಿವೇಶನದಲ್ಲಿ ಹೇಳಿದ್ದಿರಿ. ಆದರೆ, ಕರಡು ರಚನಾ ಸಮಿತಿಯು ಇಂಗ್ಲಿಷಿನಲ್ಲಿ ಸಿದ್ಧಪಡಿಸಿರುವ ಸಂವಿಧಾನವನ್ನು ನಾವು ಪರಿಶೀಲಿಸಬೇಕು ಎಂದು ತಾವು ಇಂದು ಹೇಳಿದುದರಿಂದ ನಮಗೆ ನಿರಾಶೆಯಾಗಿದೆ. ನಮ್ಮ ಮುಂದೆ ಅದರ ಹಿಂದಿಯ ಆವೃತ್ತಿಯೂ ಇದೆ. ಹಿಂದಿ ಭಾಷೆಯ ಆವೃತ್ತಿಯು ನಮ್ಮ ಬಳಿ ಇರುವಾಗ ನಾವು ಅದನ್ನೇ ಏಕೆ ಚರ್ಚೆಗೆ ಎತ್ತಿಕೊಳ್ಳಬಾರದು ಎಂಬುದು ನನಗೆ ತಿಳಿಯುತ್ತಿಲ್ಲ. ನಾವು ಹಿಂದಿಯಲ್ಲಿರುವ ಕರಡುಪ್ರತಿಯ ಅನುಚ್ಛೇದಗಳನ್ನೇ ಒಂದೊಂದಾಗಿ ಚರ್ಚೆಗೆ ತೆಗೆದುಕೊಂಡು ಅನುವಾದವಾಗಿರುವ ಭಾಗದಲ್ಲಿ ಏನಾದರೂ ಭಾಷೆಯ ತೊಡಕುಗಳಿವೆಯೇ ಎಂಬುದನ್ನು ನೋಡಬಹುದು. ಸಂಸ್ಕೃತದಲ್ಲಿ ಅಗಾಧವಾದ ಪಾಂಡಿತ್ಯವನ್ನು ಹೊಂದಿರುವ ಡಾ. ಅಂಬೇಡ್ಕರ್ ಅವರು ಹಿಂದಿ ಭಾಷೆಯನ್ನು ಅರ್ಥಮಾಡಿಕೊಳ್ಳಲಾಗದ ಸದಸ್ಯರಿಗೆ ಅಂತಹ ಭಾಗಗಳನ್ನು ಇಂಗ್ಲಿಷ್‌ನಲ್ಲಿ ವಿವರಿಸಬಹುದು. ಪ್ರತಿಯೊಂದು ದೇಶವೂ ತನ್ನದೇ ಆದ ಭಾಷೆಯಲ್ಲಿ ತನ್ನ ಸಂವಿಧಾನವನ್ನು ಹೊಂದಿರುವುದು ಅಗತ್ಯ. ತನ್ನದೇ ಆದ ಭಾಷೆಗಳನ್ನು ಹೊಂದಿರುವ ದೇಶ ನಮ್ಮದು. ಆದುದರಿಂದ ನಮ್ಮ ಸಂವಿಧಾನದ ಪ್ರತಿಯೊಂದು ಖಂಡವನ್ನೂ ನಮ್ಮ ಭಾಷೆಯಲ್ಲಿಯೇ ಚರ್ಚಿಸಬೇಕು. ವಿದೇಶೀ ಭಾಷೆಯಲ್ಲಿ ತಯಾರಾದ ಸಂವಿಧಾನವನ್ನು ಈ ಸದನದ ಮುಂದೆ ಇರಿಸಬಾರದು.

ಬಹುಶಃ ಸಂವಿಧಾನ ರಚನಾಸಭೆಯ ಮೊದಲ ಅಧಿವೇಶನದಲ್ಲಿಯೇ ನಾನು ಸದನದಲ್ಲಿ ನಡೆಯುವ ಚರ್ಚೆಗಳು ಈ ದೇಶದ ಜನತೆಯು ಅರ್ಥಮಾಡಿಕೊಳ್ಳುವ ಭಾಷೆಯಲ್ಲಿಯೇ ಇರಬೇಕೆಂಬ ಪ್ರಾರ್ಥನೆಯನ್ನು ಸಲ್ಲಿಸಿದ್ದೆ. ಇದು ಬ್ರಿಟಿಷ್ ಸಂಸತ್ತು ಎನ್ನುವಂತೆ ನಾವು ಈ ಸದನದಲ್ಲಿ ವರ್ತಿಸಬಾರದು. 'ಡೊಮಿನಿಯನ್' ಎಂಬ ಪದವು ಸಂಪೂರ್ಣವಾಗಿ ವಿದೇಶೀ ಲಕ್ಷಣವನ್ನು ಹೊಂದಿರುವಂತಹುದು. ಮೌಲಾನಾ ಮೊಹಮ್ಮದ್ ಅಲಿಯವರ ಒಂದು ಹೇಳಿಕೆಯು ನನ್ನ ನೆನಪಿನಲ್ಲಿದೆ. ಅವರು 'ಡೊಮಿನಿಯನ್' ಎಂಬ ಪದವು ಆಫ್ರಿಕಾ, ದಕ್ಷಿಣ ಆಫ್ರಿಕಾ, ನ್ಯೂ ಝೀಲ್ಯಾಂಡ್, ಆಸ್ಟ್ರೇಲಿಯಾ ಮತ್ತು ತಾಸ್ಮೇನಿಯಾಗಳಿಗೆ ಅನ್ವಯವಾಗಬಹುದು ಎಂದು ಹೇಳುತ್ತಿದ್ದರು. ಈ ದೇಶಗಳಲ್ಲಿ ನಮ್ಮ ವಿದೇಶೀ ಪ್ರಭುಗಳು ತಮ್ಮ ವಸಾಹತುಗಳನ್ನು ಹಾಗೂ ದಂಡುಪ್ರದೇಶಗಳನ್ನು ನಿರ್ಮಿಸಿದ್ದರು. ಆದರೆ, ಭಾರತವನ್ನು ಬ್ರಿಟಿಷರ ಒಂದು ದಂಡುಪ್ರದೇಶವೆಂದು ಹೇಳಲಾಗುವುದಿಲ್ಲ. ನಾನು ಮೇಲೆ ಹೇಳಿದ ದೇಶಗಳಿಗೆ ಹೋಗಿ ಅವರು ಅಲ್ಲಿ ತಮ್ಮ ವಸಾಹತುಗಳನ್ನು ಮತ್ತು ದಂಡುಪ್ರದೇಶಗಳನ್ನು ನಿರ್ಮಿಸಿದರು. ಅವರು ಅಲ್ಲಿಗೆ ಹೋಗುವಾಗ ತಮ್ಮ ಜೊತೆಯಲ್ಲಿ ತಮ್ಮ ಭಾಷೆಯನ್ನು ತೆಗೆದುಕೊಂಡು ಹೋದರು ಮತ್ತು ಅಲ್ಲಿನ ಜನರು ಇಂಗ್ಲಿಷ್ ಭಾಷೆಯನ್ನು ಮಾತನಾಡುತ್ತಾರೆ. ಆದರೆ ನಮ್ಮ ವಿಷಯದಲ್ಲಿ

ಹೀಗೇ ಆಯಿತೆಂದು ಹೇಳಲಾಗುವುದಿಲ್ಲ. ನಮಗೆ ಹಲವು ಶತಮಾನಗಳಿಂದ ಬಂದಿರುವ ನಮ್ಮದೇ ಆದ ಭಾಷೆ, ನಮ್ಮದೇ ಆದ ಸಂಸ್ಕೃತಿ ಇದೆ. ಇಂಗ್ಲಿಷರು ತಮ್ಮ ಸಾಹಿತ್ಯದ ಬಗ್ಗೆ, ಷೇಕ್ಸ್‌ಪಿಯರ್ ಮತ್ತು ಮಿಲ್ಟನ್ ಅವರ ಬಗ್ಗೆ ಹೆಮ್ಮೆಯನ್ನು ಹೊಂದಿರುವಂತೆಯೇ ನಾವು ನಮ್ಮ ಕಾಳಿದಾಸ, ತುಳಸೀದಾಸ ಮತ್ತು ಸೂರದಾಸರ ಬಗೆಗೆ ಹೆಮ್ಮೆಯನ್ನು ಹೊಂದಿದ್ದೇವೆ. ತನ್ನದೇ ಆದ ಭಾಷೆಯನ್ನು ರೂಪಿಸಿಕೊಂಡಿರುವ ದೇಶಕ್ಕೆ ವಿದೇಶೀ ಭಾಷೆಯೊಂದರಲ್ಲಿ ತನ್ನ ಸಂವಿಧಾನವನ್ನು ರೂಪಿಸಿಕೊಳ್ಳುವುದು ಅವಮಾನದ ಸಂಗತಿ. ಆದ್ದರಿಂದ ನಾನು ತಮ್ಮಲ್ಲಿ ಪ್ರಾರ್ಥಿಸುವುದೇನೆಂದರೆ, ಸಂವಿಧಾನದ ಹಿಂದಿ ಆವೃತ್ತಿಯನ್ನು ಮೂಲ ಕರಡು ಸಂವಿಧಾನವೆಂದು ಈ ಸದನದ ಮುಂದೆ ಇರಿಸಬೇಕು. ಹಿಂದಿ ಭಾಷೆಯಲ್ಲಿರುವ ಸಂವಿಧಾನದ ಖಂಡಗಳನ್ನು ನಾವು ಚರ್ಚೆಗೆ ಎತ್ತಿಕೊಳ್ಳಬೇಕು ಮತ್ತು ಇಂಗ್ಲಿಷ್ ಭಾಷೆಯಲ್ಲಿರುವ ಕರಡು ಸಂವಿಧಾನವನ್ನು ಸದನದ ಮುಂದೆ ಇರಿಸಬಾರದು. ಅದನ್ನು ಕೇವಲ ಹಿಂದೀ ಭಾಷೆಯ ಸಂವಿಧಾನದ ಅನುವಾದವೆಂದು ಪರಿಗಣಿಸಬೇಕು.

ಇಂಗ್ಲಿಷರು ಈ ದೇಶವನ್ನು ಬಿಟ್ಟುಹೋದರು. ಅವರ ಧ್ವಂಡುಪ್ರದೇಶಗಳು ಈಗ ಇಲ್ಲಿಲ್ಲ. ಇಂಗ್ಲಿಷರ ಆಡಳಿತವನ್ನು ಕೊನೆಗಾಣಿಸಿ ತಮ್ಮ ಹೆಸರನ್ನು ನಮ್ಮ ಚರಿತ್ರೆಯಲ್ಲಿ ಅಜರಾಮರವಾಗಿರುವಂತೆ ಬರೆದಿರುವ ತಮ್ಮ ಹಾಗೂ ತಮ್ಮ ಸಹವರ್ತಿಗಳ ಮತ್ತು ಇತರ ಗೌರವಾನ್ವಿತ ಮುಖಂಡರ ಮೇಲ್ಪಂಕ್ತಿಯನ್ನು ಅನುಸರಿಸುತ್ತಾ ಇರುವ ನಾವು ಕರಡಿನಲ್ಲಿರುವ 'ಡೊಮಿನಿಯನ್' ಎಂಬ ಪದವನ್ನು ತೆಗೆದುಹಾಕಬೇಕು ಮತ್ತು ಅದನ್ನು ತೆಗೆದುಹಾಕಲಾಗುತ್ತದೆ ಎಂಬ ಭರವಸೆ ನನಗಿದೆ. ಈ ವಿಷಯದಲ್ಲಿ ಈ ಸದನದಲ್ಲಿರುವ ಸದಸ್ಯರು ಹೋರಾಡುತ್ತಾರೆಂದು ನನ್ನ ಅನಿಸಿಕೆ. ಆದರೆ ಇದರಲ್ಲಿ ನಮ್ಮ ಮುಂದಿನ ಚರ್ಚೆಯ ಭವಿಷ್ಯವು ಅಡಗಿದೆ. ಈಗ ಇರುವ ಪ್ರಶ್ನೆಯೆಂದರೆ, ನಮಗೆ ನಮ್ಮದೇ ಆದ ಭಾಷೆಯಿದೆಯೇ, ನಮ್ಮದೇ ಆದ ಸಂಸ್ಕೃತಿಯಿದೆಯೇ ಎಂಬುದು. ನಮ್ಮ ಭಾಷೆಯಲ್ಲಿ ನಾವು ನಮ್ಮ ಹಾಡುಗಳನ್ನು ಹಾಡಬಲ್ಲೆವೇ, ನಮ್ಮ ಆಲೋಚನೆ ಹಾಗೂ ಭಾವನೆಗಳನ್ನು ಅದರಲ್ಲಿ ವ್ಯಕ್ತ ಪಡಿಸಬಲ್ಲೆವೇ? ನಾವು ನಮ್ಮ ಭಾವನೆಗಳನ್ನು ವ್ಯಕ್ತಪಡಿಸುವ ಭಾಷೆಯಲ್ಲಿಯೇ ನಮ್ಮ ಸಂವಿಧಾನವನ್ನೂ ರಚಿಸಿಕೊಳ್ಳಬೇಕು. ಸಂವಿಧಾನದ ಪ್ರಸ್ತಾವನೆಯಲ್ಲಿ ಹೀಗೆ ಹೇಳಲಾಗಿದೆ – 'ಭಾರತದ ಪ್ರಜೆಗಳಾಗಿರುವ ನಾವು.... ಈ ಸಂವಿಧಾನವನ್ನು ನಮಗೆ ನಾವೇ ಕೊಟ್ಟುಕೊಳ್ಳುತ್ತಿದ್ದೇವೆ.' ಇಲ್ಲಿರುವ 'ಭಾರತದ ಪ್ರಜೆಗಳಾಗಿರುವ ನಾವು..' ಎಂಬುದು ಈ ಸದನದಲ್ಲಿ ಕುಳಿತಿರುವ ಕೆಲವೇ ಕೆಲವು ಜನರನ್ನು ಕುರಿತದ್ದಲ್ಲ, ಹೊರಗೆ ಇರುವ ಯಾವ ಮೂಕಜನತೆಯ ಪರವಾಗಿ ನಾವು ಈ ಸದನದಲ್ಲಿ ಇಂದು ಕುಳಿತು ಈ ಕಾರ್ಯವನ್ನು ಎಸಗುತ್ತಿದ್ದೇವೆಯೋ, ಆ ಎಲ್ಲ ಜನರನ್ನೂ ಕುರಿತದ್ದು. ಆದ್ದರಿಂದ ಇಲ್ಲಿ ಪ್ರಸ್ತುತಪಡಿಸುತ್ತಿರುವ ಈ ನಮ್ಮ ಸಂವಿಧಾನವು ನಮಗೆ ಅರ್ಥವಾಗುವ ಭಾಷೆಯಲ್ಲಿ ಇರಬೇಕು. ಭಾಷೆಯ ಸಮಸ್ಯೆಯು ಇನ್ನೂ ಪರಿಹಾರವಾಗದೆ ಉಳಿದಿದೆ, ನಮ್ಮ ಭಾಷೆಯು ಇನ್ನೂ ಪರಿಷ್ಕರಣಕ್ಕೆ ಒಳಗಾಗಿಲ್ಲ, ಆದ್ದರಿಂದ ಇಂಗ್ಲಿಷ್ ಭಾಷೆಯು ಇಲ್ಲಿ ಮುಂದುವರಿಯಬೇಕು ಎಂದು ನಮ್ಮ ಹಿರಿಯ ನಾಯಕರು ಈಗಲೂ ಹೇಳುತ್ತಿರುವುದು ವಿಷಾದದ ಸಂಗತಿ. ಕೆಲವು ಸಂದರ್ಭಗಳಲ್ಲಿ ಇಂತಹ ಮಾತುಗಳನ್ನು ಆಡಿದ್ದಾರೆ, ನಾನು ಅಂತಹ ಮುಖಂಡರ ಹೆಸರುಗಳನ್ನು ಇಲ್ಲಿ ಹೇಳಲು ಇಚ್ಛಿಸುವುದಿಲ್ಲ. ಅವರು ನಮಗೆ ನಮ್ಮದೇ ಆದ ಭಾಷೆಯಿಲ್ಲವೆಂದು ಹೇಳಿರುವುದರಿಂದ ನಾನು ಅವರಿಗೆ ನಮ್ಮ ಭಾಷೆಯು ಬಹಳ ಮುಂದುವರಿದ ಭಾಷೆಯಾಗಿದೆ, ನಮ್ಮ ಆಲೋಚನೆ, ಭಾವನೆಗಳನ್ನು ವ್ಯಕ್ತ ಪಡಿಸಲು ಸಮರ್ಥವಾಗಿರುವ ಶ್ರೀಮಂತ ಭಾಷೆಯೆಂದು ಹೇಳಬಯಸುತ್ತೇನೆ. ಅದರಲ್ಲಿರುವ ಪದಸಂಪತ್ತು ಶ್ರೀಮಂತವಾಗಿದೆ. ನಾವು ನಮ್ಮ ಭಾಷೆಯನ್ನು ನಮ್ಮ ಪುರಾತನ ಋಷಿಗಳಿಂದ ಬಳುವಳಿಯಾಗಿ ಪಡೆದಿದ್ದೇವೆ. ನಾವು ಅದನ್ನು ಕೌಟಿಲ್ಯನ ಅರ್ಥಶಾಸ್ತ್ರದಿಂದ ಪಡೆದಿದ್ದೇವೆ, ರಾಮಾಯಣ ಮತ್ತು ಮಹಾಭಾರತಗಳಂತಹ ಕೃತಿರತ್ನಗಳಿರುವ ನಮ್ಮ ಪ್ರಾಚೀನ ಸಾಹಿತ್ಯದಿಂದ ಪಡೆದಿದ್ದೇವೆ. ಈ ಮಹಾಕಾವ್ಯಗಳಿಂದ ನಾವು ನಮ್ಮ ಭಾಷೆಯನ್ನು ಬೆಳೆಸಿದ್ದೇವೆ. ಆದ್ದರಿಂದ ಹೀಗೆ ಹೇಳಲಾಗದು...... ... .]*

**ಮಾನ್ಯ ಸಭಾಧ್ಯಕ್ಷರು :** *[ಕ್ಷಮಿಸಿ, ನೀವು ಯಾವ ವಿಷಯವನ್ನು ಚರ್ಚಿಸುತ್ತಿದ್ದೀರಿ ಎಂಬುದು ನನಗೆ

ಅರ್ಥವಾಗುತ್ತಿಲ್ಲ. ನೀವು ಈಗ ಹೇಳುತ್ತಿರುವ ವಿಷಯವನ್ನೆಲ್ಲ ಈಗಾಗಲೇ ಚರ್ಚಿಸಿ ಹಲವಷ್ಟು ಅಂಶಗಳ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ.]*

**ಶ್ರೀ ಅಲಘು ರಾಯ್ ಶಾಸ್ತ್ರಿ :** *[ನಾವು ಇಲ್ಲಿ ಚರ್ಚಿಸಬೇಕಾಗಿರುವ ಕರಡು ಸಂವಿಧಾನವು ಹಿಂದಿಯಲ್ಲಿ ರೂಪಿತವಾಗಿರುವ ಕರಡು ಸಂವಿಧಾನವಾಗಿರಬೇಕು, ಇಂಗ್ಲಿಷಿನಲ್ಲಿ ಇರುವುದನ್ನಲ್ಲ ಎಂಬುದನ್ನು ನಾನು ಹೇಳುತ್ತಿದ್ದೇನೆ ಅಷ್ಟೆ. ಆದ್ದರಿಂದ ಹಿಂದಿಯಲ್ಲಿರುವ ಕರಡು ಸಂವಿಧಾನವನ್ನೇ ಮೂಲ ಕರಡು ಸಂವಿಧಾನವೆಂದು ಪರಿಗಣಿಸಿ ಅದರಲ್ಲಿರುವ ಖಂಡಗಳಿಗೆ ತಿದ್ದುಪಡಿಯನ್ನು ಹಿಂದಿಯಲ್ಲೇ ನೀಡುವ ಸ್ವಾತಂತ್ರ್ಯವನ್ನು ನಾವು ಹೊಂದಿರಬೇಕು. ನಾವು ನಮ್ಮದೇ ಆದ ಭಾಷೆಯನ್ನು ಹೊಂದಿದ್ದೇವಾದ್ದರಿಂದ ನಾನು ಈ ಪ್ರಸ್ತಾಪವನ್ನು ಮುಂದಿಡುತ್ತಿದ್ದೇನೆ. ನಾವು ನಮ್ಮ ಅಭಿವ್ಯಕ್ತಿಯನ್ನು ಇಂಗ್ಲಿಷ್‌ನಲ್ಲಿ ಮಾತ್ರ ವ್ಯಕ್ತಪಡಿಸಲು ನಮ್ಮನ್ನು ನಾವು ಬ್ರಿಟಿಷರ ಡೊಮಿನಿಯನ್ ವಶದಲ್ಲಿರುವವರು ಎಂದು ಪರಿಗಣಿಸಬೇಕಾಗಿಲ್ಲ,

ನಾನು ಮತ್ತೆರಡು ಮಾತುಗಳನ್ನು ಆಡಲಿಚ್ಛಿಸುತ್ತೇನೆ. ಬ್ರಿಟಿಷರು ಮೊದಲ ಬಾರಿಗೆ ಕಾಲಿಟ್ಟ ಸ್ಥಳಗಳಾದ ಕರಾವಳಿ ಪ್ರದೇಶಗಳಲ್ಲಿ ಅದೃಷ್ಟವಶಾತ್ ಅಥವಾ ದುರದೃಷ್ಟವಶಾತ್ ವಾಸಿಸುವ ನಮ್ಮ ಕೆಲವು ಸಹೋದರರು ಇಂಗ್ಲಿಷಿನಲ್ಲಿ ಸಾಕಷ್ಟು ಪ್ರಭುತ್ವವನ್ನು ಗಳಿಸಿಕೊಂಡಿದ್ದಾರೆ. ಹಿಂದಿಯನ್ನು ರಾಷ್ಟ್ರಭಾಷೆಯೆಂದು ಹೇಳಿದಾಗ ಇವರಿಗೆ ಹೆಚ್ಚಿನ ಇರಿಸುಮುರಿಸಾಗುತ್ತದೆ. ಮದ್ರಾಸಿನ ವಿದ್ವಾಂಸರು ವೇದ ಸಾಹಿತ್ಯವನ್ನು ಮತ್ತು ಸಂಸ್ಕೃತಿಯನ್ನು ಆಧಾರವಾಗಿಟ್ಟುಕೊಂಡು ಭಾರತಕ್ಕೆ ದಿವ್ಯವಾದ ಸಂದೇಶವನ್ನು ಇತ್ತಿರುವುದು ಆ ನಾಡಿನ ಪುಣ್ಯವಿಶೇಷ. ಹಾಗೆಯೇ ಇಂಗ್ಲಿಷನ್ನು ಕೂಡ......]*

**ಮಾನ್ಯ ಸಭಾಧ್ಯಕ್ಷರು** : *[ನೀವು ಅವಿವಾದಿತವಾಗಿರುವ ವಿಷಯದ ಮೇಲೆ ನಿರಂತರವಾಗಿ ಮಾತನಾಡುತ್ತಲೇ ಇದ್ದೀರಿ. ನಮ್ಮ ಭಾಷೆಯಲ್ಲಿಯೇ ಸಂವಿಧಾನವನ್ನು ರೂಪಿಸಬೇಕೆಂಬ ವಿಷಯದಲ್ಲಿ ನಾವೆಲ್ಲರೂ ಸಹಮತವನ್ನು ಹೊಂದಿದ್ದೇವೆ. ಈ ವಿಷಯದ ಮೇಲೆ ಮಾತನ್ನು ಮುಂದುವರಿಸುವುದಕ್ಕೆ ಅವಕಾಶವಿಲ್ಲ. ಹಿಂದೆ ಕೂಡ ಈ ವಿಷಯವನ್ನು ಹಲವು ಬಾರಿ ಚರ್ಚಿಸಿದ್ದೇವೆ ಮತ್ತು ಅದನ್ನು ಸೂಕ್ತ ಸಮಯದಲ್ಲಿ ಅಳವಡಿಸಿಕೊಳ್ಳಲಾಗುವುದು ಎಂಬ ಭರವಸೆ ನನಗಿದೆ.]*

**ಶ್ರೀ ಅಲಘು ರಾಯ್ ಶಾಸ್ತ್ರಿ** : *[ನಾನು ಈಗ ಹಿಂದಿ ಭಾಷೆಯಲ್ಲಿ ತಿದ್ದುಪಡಿಗಳನ್ನು ಮಂಡಿಸುವುದನ್ನು ಕುರಿತು ಮಾತನಾಡುತ್ತಿರುವೆ.]*

**ಮಾನ್ಯ ಸಭಾಧ್ಯಕ್ಷರು** : *[ನೀವು ಅಪೇಕ್ಷಿಸಿದರೆ ಹಿಂದಿಯಲ್ಲಿಯೇ ನಿಮ್ಮ ತಿದ್ದುಪಡಿಗಳನ್ನು ಮಂಡಿಸಬಹುದು. ಆದರೆ ಇಂಗ್ಲಿಷ್‌ನಲ್ಲಿರುವ ಖಂಡಗಳಿಗೆ ಹಿಂದೀಯಲ್ಲಿ ಮಂಡಿಸಿದ ತಿದ್ದುಪಡಿಗಳು ಹೇಗೆ ಸೂಕ್ತವಾಗುತ್ತವೆ? ನನಗೆ ಅದು ಕಷ್ಟವಾಗುತ್ತದೆ, ಆದರೆ, ನೀವು ಬಯಸಿದಲ್ಲಿ ನಿಮ್ಮ ತಿದ್ದುಪಡಿಗಳನ್ನು ಹಿಂದಿಯಲ್ಲಿ ಮಂಡಿಸಿ.]*

**ಸರ್ದಾರ್ ಭೂಪಿಂದರ್ ಸಿಂಗ್ ಮಾನ್** (ಪೂರ್ವ ಪಂಜಾಬ್ : ಸಿಖ್) : *[ಮಾನ್ಯ ಸಭಾಧ್ಯಕ್ಷರೆ, ಅಲ್ಪಸಂಖ್ಯಾತ ಮಂಡಲಿಯ ವರದಿಯನ್ನು ಚರ್ಚಿಸುತ್ತಿದ್ದ ಸಮಯದಲ್ಲಿ ಪೂರ್ವ ಪಂಜಾಬಿನಲ್ಲಿ ಪರಿಸ್ಥಿತಿಯು ಸಹಜವಾಗಿಲ್ಲದಿದ್ದುದರಿಂದ ಸಿಖ್ಖರ ಹಕ್ಕುಗಳ ಸಮಸ್ಯೆಯ ಮೇಲಿನ ಚರ್ಚೆಯನ್ನು ತಡೆಹಿಡಿಯಬೇಕೆಂದು ಈ ಸದನವು ಹಿಂದಿನ ಅಧಿವೇಶನದಲ್ಲಿ ತೀರ್ಮಾನಿಸಿತ್ತು ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇಂದು, ಎಲ್ಲ ಅಲ್ಪಸಂಖ್ಯಾತರ ಮೇಲಿನ ವರದಿಗಳೂ ನಮ್ಮ ಮುಂದೆ ಇದ್ದರೂ, ಸಿಖ್ಖರ ವಿಷಯದಲ್ಲಿ ಇಲ್ಲಿಯವರೆಗೂ ಯಾವ ನಿರ್ಧಾರವನ್ನು ತೆಗೆದುಕೊಂಡಿಲ್ಲ.]*

**ಮಾನ್ಯ ಸಭಾಧ್ಯಕ್ಷರು :** *[ಈ ಪ್ರಶ್ನೆಯನ್ನು ಚರ್ಚೆಗೆ ತೆಗೆದುಕೊಂಡಾಗ, ನೀವು ಹೇಳಲಿಚ್ಛಿಸಿರುವುದನ್ನು ಹೇಳಲು ಸ್ವತಂತ್ರರಿರುತ್ತೀರಿ.]*

**ಸರ್ದಾರ್ ಭೂಪಿಂದರ್ ಸಿಂಗ್ ಮಾನ್ :** *[ಸರ್, ತಿದ್ದುಪಡಿಯ ಸೂಚನೆಗಳನ್ನು ಎರಡು ದಿನಗಳ

ಒಳಗೆ ಸಲ್ಲಿಸಬೇಕೆಂದು ಹೇಳಿದ್ದಿರಿ, ಆದರೆ, ಈ ವಿಷಯದಲ್ಲಿ ಇನ್ನೂ ಯಾವ ನಿರ್ಧಾರವನ್ನೂ ತೆಗೆದುಕೊಂಡಿಲ್ಲ.]*

**ಮಾನ್ಯ ಸಭಾಧ್ಯಕ್ಷರು :** *[ಈ ವಿಷಯದಲ್ಲಿ ನಿರ್ಣಯವನ್ನು ತೆಗೆದುಕೊಂಡ ಅನಂತರ ನೀವು ನಿಮ್ಮ ತಿದ್ದುಪಡಿಯ ಸೂಚನೆಯನ್ನು ಸಲ್ಲಿಸಬಹುದು.]*

**ಶ್ರೀ ಹುಸೇನ್ ಇಮಾಮ್ :** ಮಾನ್ಯ ಸಭಾಧ್ಯಕ್ಷರೆ, ಈ ವಿಷಯದ ಮೇಲಿನ ಚರ್ಚೆಯನ್ನು ಅತಿಯಾಗಿ ಮುಂದುವರಿಸಿಕೊಂಡು ಹೋಗಲು ಇಷ್ಟ ಪಡುವುದಿಲ್ಲ. ಎರಡು ಮುಖ್ಯ ಅಂಶಗಳನ್ನು ತಮ್ಮ ಗಮನಕ್ಕೆ ತರಲು ನಾನು ಬಯಸುತ್ತೇನೆ. ಈಗ ರೂಪಿಸಿರುವ ನಿಯಮವು ಎಲ್ಲವನ್ನೂ ಒಳಗೊಂಡಿದೆ, ಸಂವಿಧಾನದ ಚರ್ಚೆಗೆ ಎರಡು ದಿನಗಳ ಮೊದಲು ತಿದ್ದುಪಡಿಯ ಸೂಚನೆಯನ್ನು ನೀಡಲು ಅವಕಾಶವನ್ನು ನೀಡಲಾಗಿದೆ. ಇದು ತಮ್ಮ ವಿವೇಚನೆಗೆ ಬಿಟ್ಟಿರುವ ವಿಷಯ ಮತ್ತು ಈ ನಿಟ್ಟಿನಲ್ಲಿ ತಾವು ಉದಾರವಾಗಿರುತ್ತೀರೆಂದು ನಾನು ಆಶಿಸುತ್ತೇನೆ. ತಾವು ನೀಡಿರುವ ಎರಡು ದಿನಗಳ ಕಾಲಾವಕಾಶದ ಬಗೆಗೆ ನನಗೆ ಮನವರಿಕೆಯಾಗಿಲ್ಲವೆಂದು ಇದರ ಅರ್ಥವಲ್ಲ, ಆದರೆ, ಪರಿಗಣಿಸಲೇಬೇಕಾದ ಅಂಶಗಳಿದ್ದರೆ, ತಾವು ಅಂತಹ ಸಂದರ್ಭಗಳಲ್ಲಿ ಈ ಕಾಲಾವಕಾಶದ ವಿಷಯದಲ್ಲಿ ಉದಾರವಾಗಿರುತ್ತೀರಿ ಎಂಬುದರ ಭರವಸೆಯನ್ನು ನನ್ನ ಮಿತ್ರರಿಗೆ ನೀಡುವುದಷ್ಟೇ ನನ್ನ ಉದ್ದೇಶ.

ಮತ್ತೊಂದು ವಿಷಯದಲ್ಲಿ ತಮ್ಮ ಉದಾರದೃಷ್ಟಿಯನ್ನು ನಾನು ಬಯಸುತ್ತಿದ್ದೇನೆ. ತಿದ್ದುಪಡಿಯೊಂದು ಸದನದ ಮುಂದೆ ಚರ್ಚೆಗೆ ಬಂದಾಗ ಮಾತ್ರ ಅದಕ್ಕೆ ತಿದ್ದುಪಡಿಗಳು ಬರುವುದು ಸಾಧ್ಯ. ಆದುದರಿಂದ ಅಂತಹ ತಿದ್ದುಪಡಿಗಳಿಗೆ ತಾವು ನಿಯಮದಲ್ಲಿ ರಿಯಾಯಿತಿಯನ್ನು ತೋರಿಸಿ ಮೊದಲ ತಿದ್ದುಪಡಿಯನ್ನು ಚರ್ಚಿಸುವ ವೇಳೆಯಲ್ಲಿ ಅದಕ್ಕೆ ತಿದ್ದುಪಡಿಯನ್ನು ನೀಡಲು ತಾವು ನಮಗೆ ಅವಕಾಶವನ್ನು ನೀಡಬೇಕು.

**ಮಾನ್ಯ ಸಭಾಧ್ಯಕ್ಷರು :** ಖಂಡಿತವಾಗಿಯೂ.

**ಶ್ರೀ ಹುಸೇನ್ ಇಮಾಮ್ :** ಮೂರನೆಯದಾಗಿ, ಹಿಂದಿಯ ಪರವಾಗಿ ಮಾತನಾಡುತ್ತಿರುವ ನಮ್ಮ ಎಲ್ಲ ಮಿತ್ರರೂ ಒಂದು ಸಮಿತಿಯನ್ನು ಮಾಡಿಕೊಂಡು, ಪ್ರಾರಂಭದಿಂದಲೇ ಅನುವಾದದ ಕಾರ್ಯವನ್ನು ಕೈಗೆತ್ತಿಕೊಂಡರೆ ಅಥವಾ ಹಿಂದಿಯ ಆವೃತ್ತಿಯನ್ನು ಜೊತೆಜೊತೆಯಲ್ಲಿಯೇ ಮಂಡಿಸಿದರೆ, ಭಾಷೆಯ ಸಮಸ್ಯೆಯನ್ನು ಸುಲಭವಾಗಿ ಪರಿಹರಿಸಬಹುದು. ಹಿಂದಿ ತಿದ್ದುಪಡಿಗಳ ಇಂಗ್ಲಿಷ್ ಅನುವಾದವನ್ನು ನಮಗೆ ಒದಗಿಸುವಂತಾದರೆ, ತಿದ್ದುಪಡಿಗಳನ್ನು ಹಿಂದಿಯಲ್ಲಿಯೇ ಮಂಡಿಸಬಹುದು. ಈ ಕ್ರಮಗಳನ್ನು ಅನುಸರಿಸಿದರೆ ನಾವು ಎರಡೂ ಉದ್ದೇಶಗಳನ್ನು ಸಾಧಿಸಬಹುದು. ಯಾವುದಾದರೂ ಭಾಷೆಯಲ್ಲಿ ನೀಡಿದ ತಿದ್ದುಪಡಿಗಳ ಅನುವಾದವನ್ನು ನಮಗೆ ನೀಡುವ ಸೌಲಭ್ಯವನ್ನು ಒದಗಿಸಿದರೆ, ಯಾವ ಭಾಷೆಯಲ್ಲಿ ಬೇಕಾದರೂ ತಿದ್ದುಪಡಿಗಳನ್ನು ನೀಡುವ ಅವಕಾಶವನ್ನು ನೀಡಬಹುದು. ಅದನ್ನು ಸಂವಿಧಾನ ರಚನಾಸಭೆಯು ಒಪ್ಪಿ ಅದರ ಅನುವಾದವನ್ನು ಏಕಕಾಲದಲ್ಲಿ ಆದೇಶದ ಪತ್ರದಲ್ಲಿ ಕಾಣಿಸಿದರೆ ಕೆಲಸವು ಸುಸೂತ್ರವಾಗಿ ನೆರವೇರಿದಂತೆ ಆಗುತ್ತದೆ.

ನಾಲ್ಕನೆಯದಾಗಿ, ಸಂವಿಧಾನವನ್ನು ನಾವು ಮುಂದಿನ ತಲೆಮಾರುಗಳವರೆಗೆ ಇರಲೆಂದು ನಾವು ಮಾಡುತ್ತಿದ್ದೇವೆಂದು ನಾನು ಹೇಳುತ್ತಿಲ್ಲ, ಬದಲಿಗೆ ಅದು ತನ್ನ ಉದ್ದೇಶವನ್ನು ಸಾಧಿಸುವವರೆಗೂ ಇರುವಂತೆ ರಚಿಸುತ್ತಿದ್ದೇವೆ. ಅಮೆರಿಕ ಸಂಯುಕ್ತ ಸಂಸ್ಥಾನವು ತನ್ನ ಸಂವಿಧಾನಕ್ಕೆ ತಿದ್ದುಪಡಿಗಳನ್ನು ಮಾಡುತ್ತದೆ. ಇಲ್ಲಿಯವರೆಗೂ ಸುಮಾರು ಇಪ್ಪತ್ತು ತಿದ್ದುಪಡಿಗಳನ್ನು ಅದು ಮಾಡಿದೆ. ಅಲ್ಲಿ ತಿದ್ದುಪಡಿ ಮಾಡುವ ವಿಧಾನವು ಸ್ವಲ್ಪ ಕಷ್ಟಕರದ್ದಾಗಿರುತ್ತದೆ. ಅಲ್ಲಿ ಅದು ಎರಡು ಸದನಗಳಲ್ಲಷ್ಟೇ ಅಂಗೀಕರಿಸಲ್ಪಟ್ಟರೆ ಸಾಲದು, ಜೊತೆಗೆ ಸಂಯುಕ್ತ ಸಂಸ್ಥಾನದ ಎಲ್ಲ ಸಂಸ್ಥಾನಗಳೂ ಅದಕ್ಕೆ ಸಮ್ಮತಿಯನ್ನು ಸೂಚಿಸಬೇಕಾಗುತ್ತದೆ. ನಮ್ಮ ವಿರೋಧಪಕ್ಷದವರು ಅಷ್ಟು ಹಟಮಾರಿಗಳಲ್ಲ. ಆದರೆ, ಇಲ್ಲಿ ಒಂದು ವಿಷಯದಲ್ಲಿ ತಮ್ಮ ಉದಾರನೀತಿಯನ್ನು

ನಾವು ಬಯಸುತ್ತೇವೆ. ಅದೇಂದರೆ, ಪ್ರಕೃತ ಇರುವ ಅಥವಾ ಹೊಸ ಪ್ರಾಂತ್ಯಗಳ ಗಡಿಗಳ ವಿಷಯ. ಒಮ್ಮೆ ಸಂವಿಧಾನವು ಅಂಗೀಕೃತವಾದರೆ ಈ ವಿಷಯ ಮತ್ತಷ್ಟು ಜಟಿಲವಾಗುತ್ತದೆ, ಅಷ್ಟೇ ಅಲ್ಲದೆ ಅದನ್ನು ಪರಿಹರಿಸುವುದು ಅಸಾಧ್ಯವೇ ಆಗುತ್ತದೆ. ಸದನವು ಪ್ರಬಲವಾದ ಇಚ್ಛೆಯನ್ನು ಹೊಂದಿದ್ದರೆ, ಅದು ಮುಂದಿನ ಬಾರಿ ಸಮಾವೇಶಗೊಂಡಾಗ, ನಾವು ಸಂವಿಧಾನವನ್ನು ಅಂತಿಮಗೊಳಿಸುವ ಮೊದಲು, ಪ್ರಾಂತ್ಯಗಳು, ತಮ್ಮ ಈಗಿನ ಗಡಿಗಳಲ್ಲಿ ಪರಿವರ್ತನೆಯನ್ನು ಹೊಂದಿ, ಪುನಾರೂಪಣದ ಯೋಜನೆಯು ಒಂದು ನಿಶ್ಚಿತ ಸ್ವರೂಪದಲ್ಲಿ ನಮ್ಮ ಕಣ್ಣಿನ ಮುಂದೆ ಬರುವಂತೆ ಮಾಡುವುದು ಸೂಕ್ತವಾಗಿರುತ್ತದೆ.

**ಮಾನ್ಯ ಸಭಾಧ್ಯಕ್ಷರು** : ಈ ಸಲಹೆಯು ಸ್ವಲ್ಪ ಅವಸರದಿಂದ ಕೂಡಿದೆಯೆಂದು ನನಗೆ ತೋರುತ್ತದೆ. ನಾವು ನೇಮಿಸಿರುವ ಸಮಿತಿಯ ವರದಿಯು ಇನ್ನೂ ಬರಬೇಕಾಗಿದ್ದು, ಅದು ಬಂದನಂತರ ಈ ಪ್ರಶ್ನೆಯನ್ನು ಪರಿಗಣಿಸಲಾಗುತ್ತದೆ.

**ಶ್ರೀ ಹುಸೇನ್ ಇಮಾಮ್** : ಆ ವರದಿಯು ಬಂದನಂತರ ಅದಕ್ಕೆ ನಮ್ಮ ತಿದ್ದುಪಡಿಗಳನ್ನು ಮಂಡಿಸಬಹುದು. ನನ್ನ ಮಾತನ್ನು ಮುಗಿಸುವ ಮೊದಲು ಈ ವಿಷಯವು ತುರ್ತಿನದಾಗಿರುವುದರತ್ತ ಮತ್ತು ಅದಕ್ಕೆ ಸಂಪೂರ್ಣ ಗಮನವನ್ನು ನೀಡಬೇಕಾಗಿರುವುದರತ್ತ ನಾನು ಈ ಸದನದ ಗಮನವನ್ನು ಸೆಳೆಯಬಯಸುತ್ತೇನೆ.

**ಶ್ರೀ ಆರ್.ವಿ. ಧುಲೇಕರ್** : *[ಮಾನ್ಯರೆ, ನಾಳೆ ನಮಗೆ ಚರ್ಚೆಗೆ ನೀಡಲಿರುವ ಎರಡು ಗಂಟೆಯ ಅವಧಿಯು ಬಹಳ ಕಡಿಮೆಯಾಯಿತು. ನೂರಾರು ತಿದ್ದುಪಡಿಗಳು ಬರುತ್ತವೆಯೆಂಬುದು ಬೇರೆಯ ವಿಷಯ. ಪ್ರತಿಯೊಬ್ಬ ಸದಸ್ಯರಿಗೂ ತಮ್ಮ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವಕಾಶವಿರುವಾಗ, ಮಂಡಿಸಿದ ತಿದ್ದುಪಡಿಗಳು ಹಲವು ದಿನಗಳ ಚರ್ಚೆಯ ಅನಂತರ ಮಾರ್ಪಾಟಾಗುತ್ತವೆ. ಆದ್ದರಿಂದ ತಾವು ನಮಗೆ ಮೂರು ಅಥವಾ ನಾಲ್ಕು ದಿನಗಳ ಸಮಯವನ್ನು ನೀಡಬೇಕು, ಮತ್ತು ಪ್ರತಿಯೊಬ್ಬ ಸದಸ್ಯರೂ ಹದಿನೈದು ನಿಮಿಷಗಳಿಗಿಂತ ಹೆಚ್ಚು ಮಾತನಾಡಬಾರದು ಎಂಬ ನಿಯಮವನ್ನು ಪಾಲಿಸುವಂತೆ ಮಾಡಬೇಕು. ಹಾಗಾದರೆ, ಎಲ್ಲರಿಗೂ ಸಂವಿಧಾನದ ರೂಪಣೆಯಲ್ಲಿ ಭಾಗವಹಿಸಿದ ತೃಪ್ತಿಯಿರುತ್ತದೆ. ಒಂದು ದಿನದಲ್ಲಿ ದೊರೆಯುವುದು ಕೇವಲ ಐದು ಗಂಟೆಗಳು. ಡಾ. ಅಂಬೇಡ್ಕರ್ ಅವರು ಇಂದು ನಾಲ್ಕು ಗಂಟೆಗೆ ತಮ್ಮ ಮಂಡನೆಯನ್ನು ಪ್ರಾರಂಭಿಸಿದರೆ, ಅದು ನಾಳೆಯ ಅರ್ಧದಿನದ ವರೆಗೆ ಮುಂದುವರಿಯುತ್ತದೆ. ಇದರಿಂದ ನಮಗೆ ದೊರೆಯುವ ಸಮಯ ಬಹಳ ಕಡಿಮೆ. ನಮಗೆಲ್ಲರಿಗೂ ಈ ಮಹತ್ತ್ವದ ಸಂವಿಧಾನದ ಬಗ್ಗೆ ಮಾತನಾಡಲು ಅವಕಾಶವನ್ನು ತಾವು ನೀಡಬೇಕೆಂದು ನಾನು ತಮ್ಮನ್ನು ಕೋರುತ್ತೇನೆ. ಸಂವಿಧಾನವನ್ನು ರೂಪಿಸುವಂತಹ ಅವಕಾಶಗಳು ಮೇಲಿಂದ ಮೇಲೆ ದೊರೆಯುವುದಿಲ್ಲ ಮತ್ತು ಪ್ರತಿಯೊಬ್ಬರೂ ತಮ್ಮ ದೇಶಕ್ಕಾಗಿ ಮತ್ತು ತಮ್ಮ ರಾಷ್ಟ್ರಕ್ಕಾಗಿ ತಮ್ಮ ಅಭಿಪ್ರಾಯವನ್ನು ಹೇಳಲು ಬಯಸುತ್ತಾರೆ. ನಾವು ಮಾತನಾಡುವುದು ಕೇವಲ ಈ ಸದನಕ್ಕಾಗಿಯಲ್ಲ ಅಥವಾ ಪ್ರಕೃತ ಸಮಯಕ್ಕೆ ಮಾತ್ರ ಸಂಬಂಧಿಸಿದುದಲ್ಲ. ನಾವು ಇಲ್ಲಿ ಚರ್ಚೆ ಮಾಡುವ ವಿಷಯವನ್ನು ನೂರು ವರ್ಷದ ಅನಂತರ, ಎರಡು, ಮೂರು ನಾಲ್ಕುನೂರು ವರ್ಷಗಳ ಅನಂತರ ಜನರು ಓದುತ್ತಾರೆ ಮತ್ತು ತಮ್ಮ ಪೂರ್ವಿಕರು ಯಾವ ವಿಷಯವನ್ನು ಕುರಿತು ಏನನ್ನು ಹೇಳಿದ್ದರು ಎಂಬುದನ್ನು ತಿಳಿದುಕೊಳ್ಳುವ ಅವಕಾಶವನ್ನು ಹೊಂದಿರುತ್ತಾರೆ. ಅವರು ಅದನ್ನು ಹಾಗೆಯೇ ಅರ್ಥೈಸಿಕೊಳ್ಳುತ್ತಾರೆ. ಆದ್ದರಿಂದ, ಮಾನ್ಯರೆ, ತಾವು ಸದಸ್ಯರಿಗೆ ಕನಿಷ್ಠ ನಾಲ್ಕು ದಿವಸಗಳ ಕಾಲಾವಕಾಶವನ್ನಾದರೂ ಚರ್ಚೆಗೆ ನೀಡಿದರೆ ನಾವು ಕೃತಜ್ಞರಾಗಿರುತ್ತೇವೆ. ಪ್ರತಿಯೊಬ್ಬ ಸದಸ್ಯರೂ ಬಯಸುವುದು ಕೇವಲ ಹದಿನೈದು ನಿಮಿಷಗಳ ಸಮಯವನ್ನು. ತಾವು ಇಷ್ಟು ಕಾಲವನ್ನು ನೀಡಿದರೆ, ನಾವು ಒಟ್ಟಿಗೆ ಕುಳಿತು ಮಾಡಬೇಕಾಗಿರುವ ನೂರಾರು ತಿದ್ದುಪಡಿಗಳ ವಿಷಯವನ್ನು ಚರ್ಚೆ ಮಾಡಿ ಸಂವಿಧಾನವನ್ನು ಆದಷ್ಟು ಶೀಘ್ರವಾಗಿ ಅಂತಿಮಗೊಳಿಸಲು ತಮಗೆ ಸಹಾಯವನ್ನು ಮಾಡುತ್ತೇವೆ ಎಂದು ನಾನು ಎಲ್ಲ ಸದಸ್ಯರ ಪರವಾಗಿ ತಮಗೆ ತಿಳಿಸುತ್ತಿದ್ದೇನೆ.]*

**ಮಾನ್ಯ ಸಭಾಧ್ಯಕ್ಷರು** : *[ಇದರ ಬಗ್ಗೆ ನಾವು ಮುಂದೆ ಪರಿಶೀಲಿಸೋಣ. ಪೂರ್ವಭಾವಿ ವಿಷಯಗಳ

ಮೇಲಿನ ಚರ್ಚೆಗೇ ಬಹಳ ಸಮಯವನ್ನು ನಾವು ತೆಗೆದುಕೊಂಡರೆ, ಮುಖ್ಯ ವಿಷಯಕ್ಕೆ ಸಿಗುವ ಕಾಲವು ಬಹಳ ಕಡಿಮೆಯಾಗುತ್ತದೆ. ಆದ್ದರಿಂದ, ನಾವು ಈಗ ಮುಖ್ಯವಾದ ಕೆಲಸವನ್ನು ಪ್ರಾರಂಭಿಸೋಣ.]*

**ಪಂಡಿತ್ ಠಾಕುರ್ ದಾಸ್ ಭಾರ್ಗವ** (ಪೂರ್ವ ಪಂಜಾಬ್ : ಸಾಮಾನ್ಯ) : *[ಮಾನ್ಯ ಸಭಾಧ್ಯಕ್ಷರೆ, ಪ್ರಾರಂಭದಲ್ಲಿಯೇ ನಾನು, ೩೮–ಎಲ್ ನಿಯಮದ ಪ್ರಕಾರ, ಡಾ. ಅಂಬೇಡ್ಕರ್ ಅವರು ಕರಡು ಸಂವಿಧಾನವನ್ನು ಮಂಡಿಸಲು ಸೂಚನೆಯನ್ನು ನೀಡಿದ್ದಾರೆಯೇ ಅಥವಾ ಇಲ್ಲವೇ ಎಂದು ತಿಳಿದುಕೊಳ್ಳಬಯಸುತ್ತೇನೆ. ನಾನು ಇದನ್ನು ಮಾಹಿತಿಗಾಗಿ ಕೇಳುತ್ತಿದ್ದೇನೆ. ಏಕೆಂದರೆ, ಅವರು ಇಂತಹ ಸೂಚನೆಯನ್ನು ನೀಡದೆ ಇದ್ದರೆ ಸಂವಿಧಾನದ ಕರಡನ್ನು ಮಂಡಿಸಲು ಸಾಧ್ಯವಾಗುವುದಿಲ್ಲವೆಂಬುದು ನನ್ನ ಭಾವನೆ. ನಿಯಮದ ಪ್ರಕಾರ ಐದು ದಿನಗಳ ಮುನ್ಸೂಚನೆ ಅಗತ್ಯ.]*

**ಮಾನ್ಯ ಸಭಾಧ್ಯಕ್ಷರು** : *[ಹೌದು, ಅದನ್ನು ಇಲ್ಲಿ ಸೇರಿಸಲಾಗಿದೆ. ಅದನ್ನು ಕಾರ್ಯಸೂಚಿಯಲ್ಲಿ ಸೇರಿಸಲಾಗಿದೆ. ಇದು ಪುನಾರೂಪಿತ ಕರಡಾಗಿರುವುದರಿಂದ ಎಲ್ಲ ತಿದ್ದುಪಡಿಗಳನ್ನೂ ಚರ್ಚೆಗೆ ತೆಗೆದುಕೊಳ್ಳಲಾಗುವುದು.]*

**ಪಂಡಿತ್ ಠಾಕುರ್ ದಾಸ್ ಭಾರ್ಗವ** : *[ಈಗ ನಾನು ಹೇಳಬಯಸುವ ವಿಷಯವು ೩೮–ಎಮ್ ನಿಯಮದಡಿ ಬರುತ್ತದೆ. ಪುನಾರೂಪಿತವಾಗಿರುವ ಸಂವಿಧಾನದ ಕರಡಿನ ಪ್ರತಿಯನ್ನು ನಮಗೆ ಇಂದು ಭೋಜನವಿರಾಮಕ್ಕೆ ಸ್ವಲ್ಪ ಮೊದಲು ನಮಗೆ ನೀಡಲಾಗಿದೆ. ಆದರೆ ಇದನ್ನು ನಮಗೆ ಈ ಮೊದಲೇ ನೀಡಬೇಕಾಗಿತ್ತು. ಎಲ್ಲ ಸದಸ್ಯರಿಗೂ ಪ್ರತಿಗಳು ದೊರೆತಿಲ್ಲವೆಂಬುದು ನನ್ನ ಅನಿಸಿಕೆ. ೩೮–ಎಮ್ ನಿಯಮದ ಅಡಿ, ಇದರ ಪ್ರತಿಗಳು, ಅದರಲ್ಲಿಯೂ ಇದರಲ್ಲಿ ಹಲವು ಹೊಸ ವಿಷಯಗಳ ಬಗ್ಗೆ ವರದಿಗಳು ಇರುವುದರಿಂದ, ಮೂರು ದಿನಗಳ ಹಿಂದೆಯೇ ನಮಗೆ ದೊರಕಬೇಕಿತ್ತು. ಅದನ್ನು ಆಳವಾಗಿ ಓದದೆ, ಅಧ್ಯಯನವನ್ನು ಮಾಡದೆ, ತಿದ್ದುಪಡಿಗಳನ್ನು ಕಳುಹಿಸುವುದಾದರೂ ಹೇಗೆ?]*

**ಮಾನ್ಯ ಸಭಾಧ್ಯಕ್ಷರು** : *[ನೀವು ಯಾವ ಪ್ರತಿಗಳ ಬಗ್ಗೆ ಮಾತನಾಡುತ್ತಿದ್ದೀರಿ? ಡಾ. ಅಂಬೇಡ್ಕರ್ ಅವರು ಮಂಡಿಸಲಿರುವ ಕರಡು ಸಂವಿಧಾನದ ಪ್ರತಿಗಳನ್ನು ಫೆಬ್ರವರಿ ೧೨ನೆಯ ದಿನಾಂಕದಂದೇ ಹಂಚಲಾಗಿತ್ತು. ಅದನ್ನೇ ಅವರು ಇಂದು ಮಂಡಿಸಲಿದ್ದಾರೆ. ಮತ್ತು ಅದರ ಮೇಲೆ ಬಂದಿರುವ ತಿದ್ದುಪಡಿಗಳನ್ನು ಕರಡು ರಚನಾ ಸಮಿತಿಯ ಪರವಾಗಿ ಮಂಡಿಸಲಾಗುವುದು.]*

**ಪಂಡಿತ್ ಠಾಕುರ್ ದಾಸ್ ಭಾರ್ಗವ** : *[ಇನ್ನು ಮೂರನೆಯ ಅಂಶ. ಇದರ ಮೇಲೆ ನಾನು ಸ್ವಲ್ಪ ಹೆಚ್ಚು ಒತ್ತನ್ನು ನೀಡಬಯಸುತ್ತೇನೆ. ಇದು ೩೮–ಒ ನಿಯಮದ ವಿವರಣೆಗೆ ಸಂಬಂಧಿಸಿದುದಾಗಿದೆ. ೩೮–ಒ ನಿಯಮದಲ್ಲಿನ "ಸಂವಿಧಾನವನ್ನು ಪರಿಶೀಲಿಸಬೇಕಾದ 'ದಿನ'ಕ್ಕೆ ಎರಡು ದಿನ ಮೊದಲು" ಎಂಬ ಪದಗಳಲ್ಲಿನ ಪ್ರಕಾರ, ತಿದ್ದುಪಡಿಗಳು ಭಾನುವಾರ ಸಂಜೆ ೫ ಗಂಟೆಯ ಒಳಗೆ ತಲುಪಬೇಕು ಎನ್ನುವುದು ಸರಿಯಲ್ಲ. ಏಕೆಂದರೆ, ಸಂವಿಧಾನವನ್ನು ಪರಿಶೀಲನೆಗೆ ತೆಗೆದುಕೊಳ್ಳುವುದು ನವೆಂಬರ್ ೯ರಂದು ಮಾತ್ರವಲ್ಲ; ಬದಲಿಗೆ, ಅದರ ಖಂಡ–ಉಪಖಂಡಗಳ ಪರಿಶೀಲನೆಯು ದಿನದಿಂದ ದಿನಕ್ಕೆ ಮುಂದುವರಿಯುತ್ತಲೇ ಇರುತ್ತದೆ. ಅದರ ಮುಂದಿನ ದಿನಗಳಲ್ಲಿಯೂ ಕೂಡ ಸಂವಿಧಾನದ ಪರಿಶೀಲನೆಯು ನಡೆಯುತ್ತದೆ. ಪರಿಸ್ಥಿತಿಯು ಹಾಗಿರುವಾಗ, ಪ್ರತಿ ಬಾರಿ ಸಂವಿಧಾನದ ಆಯಾ ಭಾಗವನ್ನು ಕೈಗೆತ್ತಿಕೊಳ್ಳುವ ದಿನಗಳಿಗೆ ಎರಡು ದಿನಗಳ ಮೊದಲು ತಿದ್ದುಪಡಿಯನ್ನು ಕಳುಹಿಸುವ ಹಕ್ಕನ್ನು ಸದಸ್ಯರು ಹೊಂದಿರುತ್ತಾರೆ.]*

**ಮಾನ್ಯ ಸಭಾಧ್ಯಕ್ಷರು** : *[ಈ ವಿಷಯವನ್ನು ಕುರಿತು ಈ ಹಂತದಲ್ಲಿ ಒಂದು ನಿರ್ಣಯವನ್ನು ತೆಗೆದುಕೊಳ್ಳುವುದು ಬೇಡ.]*

**ಪಂಡಿತ್ ಠಾಕುರ್ ದಾಸ್ ಭಾರ್ಗವ** : *[ಚರ್ಚೆಗಾಗಿ ಸದಸ್ಯರಿಗೆ ಸಂಪೂರ್ಣ ಅವಕಾಶವನ್ನು ತಾವು ನೀಡುತ್ತೀರಿ ಹಾಗೂ, ತಿದ್ದುಪಡಿಗೆ ಸೂಚನೆಯನ್ನು ನೀಡುವ ಅವರ ಹಕ್ಕುಗಳು ಅಬಾಧಿತವಾಗಿ ಉಳಿಯುತ್ತವೆ

ಎಂಬುದು ನನಗೆ ತಿಳಿದಿದೆ. ಈ ವಿಷಯದಲ್ಲಿ ತಮ್ಮ ವಿವೇಚನೆಯ ಬಗ್ಗೆ ಎಲ್ಲ ಸದಸ್ಯರಿಗೂ ವಿಶ್ವಾಸವಿದೆ. ಆದರೆ, ನನ್ನ ನಮ್ರ ವಿನಂತಿಯೆಂದರೆ, ವಿವೇಚನೆಯ ಪ್ರಶ್ನೆಯು ಇಲ್ಲಿ ಬರುವುದಿಲ್ಲ. ಏಕೆಂದರೆ, ನಾನು ಅರ್ಥೈಸುವ ಪ್ರಕಾರ, ಪ್ರತಿಯೊಬ್ಬ ಸದಸ್ಯರೂ ತಮಗಿರುವ ಹಕ್ಕಿನ ಪ್ರಕಾರ ತಿದ್ದುಪಡಿಯನ್ನು ಕಳುಹಿಸಬಹುದು. ೩೮–ಪಿ ಮತ್ತು ೩೮–ಕ್ಯೂ ನಿಯಮಗಳ ಉದ್ದೇಶವೂ ಇದೇ. ಭಾನುವಾರ ಸಂಜೆ ಐದು ಗಂಟೆಯ ಒಳಗೆ ತಿದ್ದುಪಡಿಗಳನ್ನು ಕಳುಹಿಸಬೇಕು ಎಂಬ ತಮ್ಮ ಆದೇಶವು ಇದಕ್ಕೆ ವಿರುದ್ಧವಾಗಿದೆ ಮತ್ತು ಅದನ್ನು ತಾವು ಪುನರ್‌ವಿಮರ್ಶಿಸಬೇಕು. ನನ್ನ ನಮ್ರ ಅಭಿಪ್ರಾಯದ ಪ್ರಕಾರ, ತಮ್ಮ ಆದೇಶವನ್ನು ಪುನರ್‌ವಿಮರ್ಶಿಸದೆ, ತಾವು ದಿನಾಂಕವನ್ನು ೭ರಿಂದ ೧೦ಕ್ಕೆ ಮುಂದೂಡಿದರೆ, ಯಾರಿಗೂ ಯಾವ ರೀತಿಯ ಅಸಮಾಧಾನವೂ ಇರುವುದಿಲ್ಲ.]*

**ಶ್ರೀ ಟಿ. ಚೆನ್ನಯ್ಯ** (ಮೈಸೂರು ರಾಜ್ಯ) : ಈ ಹಿಂದೆ ಮಾತನಾಡಿದ ಸದಸ್ಯರಲ್ಲಿ ಬಹುತೇಕರು ಇಂಗ್ಲಿಷ್ ಭಾಷೆಯನ್ನು ಚೆನ್ನಾಗಿ ಬಲ್ಲವರಾಗಿದ್ದಾರೆ. ಆದರೆ ಬೇಕಾದಷ್ಟು ಜನ ಸದಸ್ಯರು, ಅದರಲ್ಲಿಯೂ ಮದ್ರಾಸ್, ಬಂಗಾಳ, ಬಾಂಬೆ, ಅಸ್ಸಾಮ್ ಮತ್ತು ಇತರ ಹಲವು ಪ್ರದೇಶಗಳಿಂದ ಬಂದಿರುವ ಸದಸ್ಯರಿಗೆ ಹಿಂದಿಯಾಗಲೀ, ಅಥವಾ ಹಿಂದೂಸ್ಥಾನಿಯಾಗಲಿ ತಿಳಿಯುವುದಿಲ್ಲ. ನಾವು ಕೇವಲ ಬೊಂಬೆಗಳಂತೆ ಕುಳಿತಿರಬೇಕಾಗುತ್ತದೆ. ಮಾನ್ಯರೆ, ಸದಸ್ಯರ ಹಿತವನ್ನು ಕಾಪಾಡುವುದಕ್ಕಾಗಿ ತಾವು ಇದ್ದೀರಿ. ಆದ್ದರಿಂದ ಇಂಗ್ಲಿಷ್‌ನಲ್ಲಿ ಮಾತನಾಡಬಲ್ಲ ಸದಸ್ಯರಿಗೆ ಇಂಗ್ಲಿಷ್‌ನಲ್ಲಿಯೇ ಮಾತನಾಡಲು ತಾವು ಅವಕಾಶವನ್ನು ಮಾಡಿಕೊಡಬೇಕಾಗಿ ನಾನು ತಮ್ಮನ್ನು ಪ್ರಾರ್ಥಿಸುತ್ತೇನೆ.

### ಕರಡು ಸಂವಿಧಾನದ ಬಗ್ಗೆ ಗೊತ್ತುವಳಿ

**ಮಾನ್ಯ ಸಭಾಧ್ಯಕ್ಷರು** : ನಾವೂ ಈಗ ಚರ್ಚೆಯನ್ನು ಪ್ರಾರಂಭಿಸೋಣ. ನಾನು ಈಗ ಗೌರವಾನ್ವಿತ ಡಾ. ಅಂಬೇಡ್ಕರ್ ಅವರನ್ನು ತಮ್ಮ ಪ್ರಸ್ತಾವವನ್ನು ಮಂಡಿಸಲು ಆಹ್ವಾನಿಸುತ್ತಿದ್ದೇನೆ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** (ಬಾಂಬೆ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಕರಡು ರಚನಾ ಸಮಿತಿಯು ಅಂತಿಮಗೊಳಿಸಿರುವ ಸಂವಿಧಾನದ ಕರಡನ್ನು ಈಗ ಅವಗಾಹನೆಗಾಗಿ ಸದನದ ಮುಂದೆ ಇಡುತ್ತಿದ್ದೇನೆ.

ಈ ಕರಡು ರಚನಾ ಸಮಿತಿಯು ೧೯೪೭ರ ಆಗಸ್ಟ್ ೨೯ರಂದು ಸಂವಿಧಾನ ರಚನಾಸಭೆಯು ಅಂಗೀಕರಿಸಿದ ನಿರ್ಣಯದ ಪ್ರಕಾರ ನೇಮಿಸಲ್ಪಟ್ಟಿತು.

ಸಂವಿಧಾನ ರಚನಾಸಭೆಯು ನೇಮಿಸಿದ್ದ ಕೇಂದ್ರ ಅಧಿಕಾರದ ಸಮಿತಿ, ಕೇಂದ್ರ ಸಂವಿಧಾನ ಸಮಿತಿ, ಪ್ರಾದೇಶಿಕ ಸಂವಿಧಾನ ಸಮಿತಿ, ಹಾಗೂ ಮೂಲಭೂತ ಹಕ್ಕುಗಳು, ಅಲ್ಪಸಂಖ್ಯಾತರು, ಬುಡಕಟ್ಟು ಪ್ರದೇಶಗಳು ಮೊದಲಾದವುಗಳ ಮೇಲಿನ ಸಲಹಾ ಸಮಿತಿ ಇವುಗಳ ವರದಿಯ ಆಧಾರದ ಮೇಲೆ ತೆಗೆದುಕೊಂಡ ನಿರ್ಣಯಗಳ ಹಿನ್ನೆಲೆಯಲ್ಲಿ ಕರಡು ರಚನಾ ಸಮಿತಿಗೆ ಕರಡು ಸಂವಿಧಾನವನ್ನು ತಯಾರಿಸುವ ಹೊಣೆಯನ್ನು ನೀಡಲಾಗಿತ್ತು. ಸಂವಿಧಾನ ರಚನಾಸಭೆಯು ಕರಡು ರಚನಾ ಸಮಿತಿಗೆ ಕೆಲವು ವಿಷಯಗಳ ಸಂಬಂಧದಲ್ಲಿ ೧೯೩೫ರ ಭಾರತ ಸರಕಾರದ ಅಧಿನಿಯಮವನ್ನು ಅನುಸರಿಸಬೇಕೆಂಬ ನಿರ್ದೇಶವನ್ನೂ ನೀಡಿತ್ತು. ಕೆಲವೆಡೆಗಳಲ್ಲಿ ಈ ಸೂಚನೆಗಳ ವ್ಯಾಪ್ತಿಯಿಂದ ಹೊರಗಿನ ಆಧಾರಗಳನ್ನೂ ನಾವು ಪರಿಗಣಿಸಬೇಕಾಗಿತ್ತು. ಅದನ್ನು ನಾನು ೧೯೪೮ರ ಫೆಬ್ರವರಿ ೨೧ರ ನನ್ನ ಪತ್ರದಲ್ಲಿ ವಿವರಿಸಿದ್ದೇನೆ. ಇದರ ಹೊರತಾಗಿ ಕರಡು ರಚನಾ ಸಮಿತಿಯು ಸಂವಿಧಾನ ರಚನಾಸಭೆಯು ವಿಧಿಸಿದ್ದ ನಿಯಮಗಳನ್ನು ಅತ್ಯಂತ ವಿಧೇಯತೆಯಿಂದ ಪಾಲಿಸಿದೆ ಎಂದು ನಾನು ಭಾವಿಸಿದ್ದೇನೆ.

ಕರಡು ರಚನಾ ಸಮಿತಿಯು ಹೊರತಂದಿರುವ ಈ ಕರಡು ಸಂವಿಧಾನವು ಒಂದು ಅಗಾಧವಾದ ಕಡತವಾಗಿದೆ. ಇದರಲ್ಲಿ ೩೧೫ ಅನುಚ್ಛೇದಗಳೂ ೮ ಅನುಸೂಚಿಗಳೂ ಒಳಗೊಂಡಿವೆ. ಯಾವ ದೇಶದ

ಕರಡು ಸಂವಿಧಾನವೂ ಇಷ್ಟು ದೊಡ್ಡ ಗಾತ್ರದ್ದಾಗಿರಲಿಲ್ಲವೆಂಬುದನ್ನು ನಾವು ಒಪ್ಪಿಕೊಳ್ಳಲೇಬೇಕು. ಅದನ್ನು ಅಧ್ಯಯನ ಮಾಡದೆ ಇರುವವರಿಗೆ ಅದರಲ್ಲಿರುವ ವಿಶಿಷ್ಟತೆ ಮತ್ತು ವಿಶೇಷ ಅಂಶಗಳು ಗೊತ್ತಾಗುವುದಿಲ್ಲ.

ಕರಡು ಸಂವಿಧಾನವು ಕಳೆದ ಎಂಟು ತಿಂಗಳುಗಳಿಂದ ಸಾರ್ವಜನಿಕರ ಎದುರಿಗೆ ಇದೆ. ಅದರಲ್ಲಿರುವ ಅನುಚ್ಛೇದ, ಖಂಡಗಳನ್ನು ಕುರಿತು ತಮ್ಮ ಪ್ರತಿಕ್ರಿಯೆಯನ್ನು, ಟೀಕೆಯನ್ನು ವ್ಯಕ್ತಪಡಿಸಲು ನಮ್ಮ ಸ್ನೇಹಿತರಿಗೆ, ವಿಮರ್ಶಕರಿಗೆ ಮತ್ತು ವಿರೋಧಿಗಳಿಗೆ ಈ ಅವಧಿ ಸಾಕಷ್ಟು ದೀರ್ಘವಾಗಿತ್ತು ಎಂದೇ ಹೇಳಬೇಕು. ಅದರೆ ಬಂದಿರುವ ಟೀಕೆಗಳು ಹಾಗೂ ಅಸಮಾಧಾನಗಳು ಅಲ್ಲಿರುವ ವಿಧಿಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಮಾಡಿರುವಂತಹವುಗಳು ಎಂಬುದನ್ನು ನಾನು ಧೈರ್ಯವಾಗಿ ಹೇಳಬಲ್ಲೆ. ಆದರೂ ಟೀಕೆಗಳು ಇವೆ, ಅದಕ್ಕೆ ಉತ್ತರಗಳನ್ನು ಹೇಳಬೇಕಾಗಿದೆ.

ಈ ಕಾರಣಗಳಿಂದಾಗಿ, ಪರಿಶೀಲನೆಗೆ ಇಟ್ಟಿರುವ ಈ ಪ್ರಸ್ತಾವದ ಮೇಲೆ ಮಾತನಾಡುವಾಗ, ನಮ್ಮ ಸಂವಿಧಾನದ ವಿಶೇಷ ಲಕ್ಷಣಗಳು ಮತ್ತು ವಿಶಿಷ್ಟತೆಗಳತ್ತ ನಾನು ತಮ್ಮ ಗಮನವನ್ನು ಸೆಳೆಯಬೇಕು ಮತ್ತು ಅದರ ವಿರುದ್ಧ ಎತ್ತಿರುವ ಟೀಕೆಗಳಿಗೆ, ಪ್ರಶ್ನೆಗಳಿಗೆ ಉತ್ತರವನ್ನು ನೀಡಬೇಕು.

ನಾನು ಅದನ್ನು ಮಾಡುವುದನ್ನು ಪ್ರಾರಂಭಿಸುವ ಮೊದಲು, ನಾನು ಸದನದ ಮುಂದೆ ಸಂವಿಧಾನ ರಚನಾಸಭೆಯು ನೇಮಿಸಿದ್ದ ಮೂರು ಸಮಿತಿಗಳಾದ (೧) ಮುಖ್ಯ ಆಯುಕ್ತರ ಪ್ರಾಂತ್ಯಗಳ ಮೇಲಿನ ಸಮಿತಿ, (೨) ಕೇಂದ್ರ ಹಾಗೂ ರಾಜ್ಯಗಳ ನಡುವಿನ ಹಣಕಾಸಿನ ಸಂಬಂಧಗಳ ಮೇಲಿನ ಸಮಿತಿ, ಮತ್ತು (೩) ಬುಡಕಟ್ಟು ಪ್ರದೇಶಗಳ ಮೇಲಿನ ಸಲಹಾ ಸಮಿತಿ – ಇವುಗಳ ವರದಿಗಳನ್ನು ಮಂಡಿಸಲು ಇಚ್ಛಿಸುತ್ತೇನೆ. ಈ ಮೂರು ವರದಿಗಳು ಬರುವುದರಲ್ಲಿ ಬಹಳ ವಿಳಂಬವಾಗಿದ್ದುದರಿಂದ, ಅವುಗಳನ್ನು ಸಂವಿಧಾನ ರಚನಾಸಭೆಯು ಪರಿಶೀಲಿಸಿಲ್ಲ, ಆದರೆ ಅದರ ಪ್ರತಿಗಳನ್ನು ಮಂಡಲಿಯ ಸದಸ್ಯರಿಗೆ ಒದಗಿಸಲಾಗಿದೆ. ಈ ವರದಿಗಳನ್ನು ಹಾಗೂ ಅವುಗಳಲ್ಲಿ ಮಾಡಿರುವ ಶಿಫಾರಸುಗಳನ್ನು ಕರಡು ರಚನಾಸಭೆಯು ಪರಿಗಣಿಸಿದೆ. ಇವುಗಳನ್ನು ಈಗ ಔಪಚಾರಿಕವಾಗಿ ಸದನಕ್ಕೆ ಒಪ್ಪಿಸಬೇಕಾಗಿದೆ.

---

# ಅನುಬಂಧ ಎ ## ಅನುಬಂಧ ಬಿ ### ಅನುಬಂಧ ಸಿ (೧ರಿಂದ ೩)

---

ಈಗ ಮುಖ್ಯ ಪ್ರಶ್ನೆಯತ್ತ ತಿರುಗೋಣ. ಸಂವಿಧಾನದ ಕಾನೂನಿನ ವಿದ್ಯಾರ್ಥಿಯ ಕೈಯಲ್ಲಿ ಈ ಸಂವಿಧಾನದ ಪ್ರತಿಯೊಂದನ್ನು ಇತ್ತರೆ ಅವನು ಖಂಡಿತವಾಗಿಯು ಈ ಪ್ರಶ್ನೆಗಳನ್ನು ಕೇಳುತ್ತಾನೆ. ಮೊದಲನೆಯದಾಗಿ, ಸಂವಿಧಾನದಲ್ಲಿ ಕಲ್ಪಿಸಲಾಗಿರುವ ಸರಕಾರದ ಸ್ವರೂಪವು ಎಂತಹುದು? ಎರಡನೆಯದಾಗಿ, ಸಂವಿಧಾನದ ಸ್ವರೂಪವು ಎಂತಹುದು? ಯಾವುದೇ ಸಂವಿಧಾನವಾದರೂ ಅದು ಇವೆರಡು ಅಂಶಗಳನ್ನು ಬಹು ಮುಖ್ಯವಾಗಿ ಗಮನದಲ್ಲಿಟ್ಟುಕೊಂಡಿರಬೇಕು. ನಾನು ಇವೆರಡು ಪ್ರಶ್ನೆಗಳಲ್ಲಿ ಮೊದಲನೆಯದರಿಂದ ಪ್ರಾರಂಭಿಸುತ್ತೇನೆ.

ಕರಡು ಸಂವಿಧಾನದಲ್ಲಿ ಭಾರತದ ಗಣರಾಜ್ಯದಲ್ಲಿ ಗಣರಾಜ್ಯದ ರಾಷ್ಟ್ರಪತಿಗಳನ್ನು ಕಾರ್ಯನಿರ್ವಾಹಕ ಅಧಿಕಾರಿಯನ್ನಾಗಿ ಮೇಲೆ ಕೂರಿಸಲಾಗಿದೆ. ಈ ಪದವಿಯ ಹೆಸರನ್ನು ನೋಡಿದರೆ, ಅದು ಅಮೆರಿಕ ಸಂಯುಕ್ತ ಸಂಸ್ಥಾನದ ಅಧ್ಯಕ್ಷರ ಪದವಿಯನ್ನು ನಮ್ಮ ನೆನಪಿಗೆ ತರುತ್ತದೆ. ಇವೆರಡು ಪದವಿಗಳ ಹೆಸರಿನಲ್ಲಿರುವ ಸಾಮ್ಯವನ್ನು ಬಿಟ್ಟರೆ, ಅಮೆರಿಕದಲ್ಲಿರುವ ಸರ್ಕಾರ ಹಾಗೂ ನಮ್ಮ ಸಂವಿಧಾನದ ಕರಡಿನಲ್ಲಿ ಭಾರತಕ್ಕೆಂದು ಉದ್ದೇಶಿಸಿರುವ ಸರ್ಕಾರಗಳ ನಡುವೆ ಸಮಾನವಾದುದು ಯಾವುದೂ ಇಲ್ಲ. ಅಮೆರಿಕ ಸರ್ಕಾರದ ವ್ಯವಸ್ಥೆಯನ್ನು ಅಧ್ಯಕ್ಷೀಯ ಸರ್ಕಾರವೆಂದು ಕರೆಯುತ್ತಾರೆ. ನಮ್ಮ ಕರಡು ಸಂವಿಧಾನವು ಉದ್ದೇಶಿಸಿರುವುದು ಸಂಸದೀಯ ಸರ್ಕಾರದ ವ್ಯವಸ್ಥೆ. ಇವೆರಡೂ ಮೂಲಭೂತವಾಗಿ ಭಿನ್ನವಾಗಿವೆ.

ಅಮೆರಿಕದ ಅಧ್ಯಕ್ಷೀಯ ವ್ಯವಸ್ಥೆಯಲ್ಲಿ ಅಧ್ಯಕ್ಷರು ಸರ್ಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರುತ್ತಾರೆ ಮತ್ತು ಆಡಳಿತದ ಹೊಣೆ ಸಂಪೂರ್ಣವಾಗಿ ಅವರ ಮೇಲೆಯೇ ಇರುತ್ತದೆ. ನಮ್ಮ ಕರಡು ಸಂವಿಧಾನದಲ್ಲಿ ಉದ್ದೇಶಿಸಿರುವ ವ್ಯವಸ್ಥೆಯಲ್ಲಿ ನಮ್ಮ ರಾಷ್ಟ್ರಪತಿಗಳ ಸ್ಥಾನ ಇಂಗ್ಲಿಷ್ ಸಂವಿಧಾನದಲ್ಲಿ ಅಲ್ಲಿನ ರಾಜರಿಗೆ ಇರುವ ಸ್ಥಾನಕ್ಕೆ ಸಮಾನವಾದುದು. ಅವರು ರಾಷ್ಟ್ರದ ಅಧಿಪತಿಯಾದರೂ ಅವರಿಗೆ ಆಡಳಿತದಲ್ಲಿ ಪರಮಾಧಿಕಾರವಿರುವುದಿಲ್ಲ. ಅವರು ರಾಷ್ಟ್ರವನ್ನು ಪ್ರತಿನಿಧಿಸುತ್ತಾರೆಯೇ ಹೊರತು ರಾಷ್ಟ್ರವನ್ನು ಆಳುವುದಿಲ್ಲ. ಅವರು ರಾಷ್ಟ್ರದ ಪ್ರತೀಕ. ರಾಷ್ಟ್ರದ ತೀರ್ಮಾನಗಳು, ಆದೇಶಗಳು ಅವರ ಹೆಸರಿನಲ್ಲಿಯೇ ಪ್ರಕಟವಾಗುತ್ತವೆ, ಆದರೆ ಅವರು ಶಿಷ್ಟಾಚಾರದ ದೃಷ್ಟಿಯಿಂದ ರಾಷ್ಟ್ರದ ರಾಷ್ಟ್ರಪತಿ ಆಗಿರುತ್ತಾರೆ. ಅಮೆರಿಕದ ವ್ಯವಸ್ಥೆಯಲ್ಲಿ ಅಧ್ಯಕ್ಷರ ಕೈಕೆಳಗೆ ವಿವಿಧ ಖಾತೆಗಳ ಉಸ್ತುವಾರಿಯನ್ನು ಅವುಗಳ ಕಾರ್ಯದರ್ಶಿಯವರು ನೋಡಿಕೊಳ್ಳುತ್ತಾರೆ. ಅದೇ ರೀತಿಯಲ್ಲಿ, ಭಾರತದ ವ್ಯವಸ್ಥೆಯಲ್ಲಿ ರಾಷ್ಟ್ರಪತಿಗಳ ಕೈಕೆಳಗೆ ವಿವಿಧ ಇಲಾಖೆಗಳ ಉಸ್ತುವಾರಿಗಾಗಿ ಸಚಿವರು ಇರುತ್ತಾರೆ. ಇಲ್ಲಿಯೂ ಕೂಡ, ಇವೆರಡು ವ್ಯವಸ್ಥೆಗಳ ನಡುವೆ ಮೂಲಭೂತ ವ್ಯತ್ಯಾಸವಿದೆ. ತಮ್ಮ ಕಾರ್ಯದರ್ಶಿಗಳು ನೀಡುವ ಎಲ್ಲ ಸಲಹೆಗಳನ್ನೂ ಅಮೆರಿಕದ ಅಧ್ಯಕ್ಷರು ಒಪ್ಪಿಕೊಳ್ಳಲು ಬದ್ಧರಾಗಿರುವುದಿಲ್ಲ. ಆದರೆ, ಭಾರತದ ರಾಷ್ಟ್ರಪತಿಗಳು ತಮ್ಮ ಸಚಿವ ಸಂಪುಟವು ನೀಡುವ ಎಲ್ಲಾ ಸಲಹೆಗಳಿಗೂ ಬದ್ಧರಾಗಿರಬೇಕು. ಸಚಿವರ ಸಲಹೆಗೆ ವಿರುದ್ಧವಾಗಿ ರಾಷ್ಟ್ರಪತಿಗಳು ಏನನ್ನೂ ಮಾಡುವ ಹಾಗೆ ಇಲ್ಲ ಮತ್ತು ಅವರ ಸಲಹೆಯಿಲ್ಲದೆ ಕೂಡ ಏನನ್ನೂ ಮಾಡಲು ಅವರಿಗೆ ಸಾಧ್ಯವಿಲ್ಲ. ಅಮೆರಿಕದ ಅಧ್ಯಕ್ಷರು ಯಾವಾಗ ಬೇಕಾದರೂ ತಮ್ಮ ಕಾರ್ಯದರ್ಶಿಯನ್ನು ವಜಾಮಾಡಬಹುದು. ಆದರೆ ಭಾರತದಲ್ಲಿನ ಸಚಿವರು ಸಂಸತ್ತಿನಲ್ಲಿ ಬಹುಮತವನ್ನು ಹೊಂದಿರುವವರೆಗೆ, ಇಲ್ಲಿನ ರಾಷ್ಟ್ರಪತಿಗಳು ತಮ್ಮ ಸಚಿವರನ್ನು ಹಾಗೆ ವಜಾಮಾಡಲು ಸಾಧ್ಯವಿಲ್ಲ.

ಅಮೆರಿಕದಲ್ಲಿನ ಅಧ್ಯಕ್ಷೀಯ ವ್ಯವಸ್ಥೆಯು ಕಾರ್ಯಾಂಗ ಮತ್ತು ಶಾಸಕಾಂಗ ಎಂಬ ಎರಡು ಶಾಖೆಗಳ ಆಧಾರದ ಮೇಲೆ ನಡೆಯುತ್ತದೆ. ಅಂದರೆ, ಅಧ್ಯಕ್ಷರು ಮತ್ತು ಅವರ ಕಾರ್ಯದರ್ಶಿಗಳು ಅಲ್ಲಿನ ಕಾಂಗ್ರೆಸ್‌ನ ಸದಸ್ಯರಾಗಿರಬೇಕಾಗಿಲ್ಲ. ನಮ್ಮ ಕರಡು ಸಂವಿಧಾನವು ಆ ತತ್ತ್ವವನ್ನು ಗೌರವಿಸುವುದಿಲ್ಲ. ಭಾರತೀಯ ವ್ಯವಸ್ಥೆಯಲ್ಲಿನ ಸಚಿವರು ಸಂಸತ್ತಿನ ಸದಸ್ಯರಾಗಿರಬೇಕು ಅಂದರೆ, ಭಾರತದಲ್ಲಿ ಸಂಸತ್ತಿನ ಸದಸ್ಯರು ಮಾತ್ರ ಸಚಿವರಾಗಬಹುದು, ಇತರ ಸಂಸತ್ ಸದಸ್ಯರಿಗೆ ಇರುವ ಹಕ್ಕುಗಳನ್ನು ಸಚಿವರೂ ಹೊಂದಿರುತ್ತಾರೆ, ಅವರು ಸಂಸತ್ತಿನಲ್ಲಿ ಕುಳಿತುಕೊಳ್ಳಬಹುದು, ಇತರ ಸದಸ್ಯರಂತೆ ಚರ್ಚೆಗಳಲ್ಲಿ ಪಾಲುಗೊಳ್ಳಬಹುದು ಮತ್ತು ಮತದಾನದಲ್ಲಿ ಕೂಡ ಭಾಗವಹಿಸಬಹುದು. ಎರಡೂ ವ್ಯವಸ್ಥೆಗಳೂ ಪ್ರಜಾತಂತ್ರವನ್ನೇ ಅನುಸರಿಸುತ್ತವೆ ಆದರೆ, ಇವೆರಡರ ನಡುವೆ ಆಯ್ಕೆಯನ್ನು ಮಾಡುವುದು ಅಷ್ಟು ಸುಲಭದ ಕೆಲಸವಲ್ಲ. ಪ್ರಜಾತಂತ್ರದ ಕಾರ್ಯಾಂಗವು ಎರಡು ಮುಖ್ಯ ಲಕ್ಷಣಗಳನ್ನು ಹೊಂದಿರಬೇಕು – (೧) ಅದು ಸ್ಥಿರವಾದ ಕಾರ್ಯಾಂಗವಾಗಿರಬೇಕು, ಮತ್ತು (೨) ಅದು ಜವಾಬ್ದಾರಿಯುತವಾದ ಕಾರ್ಯಾಂಗವಾಗಿರಬೇಕು. ದುರದೃಷ್ಟವಶಾತ್, ಈ ಎರಡೂ ಲಕ್ಷಣಗಳೂ ಸಮಪ್ರಮಾಣದಲ್ಲಿ ಇರುವಂತಹ ವ್ಯವಸ್ಥೆಯನ್ನು ರೂಪಿಸುವುದು ಇಲ್ಲಿಯವರೆಗೂ ಸಾಧ್ಯವಾಗಿಲ್ಲ. ಹೆಚ್ಚು ಸ್ಥಿರತೆಯನ್ನು ನೀವು ಆಯ್ದುಕೊಳ್ಳಬಹುದು, ಆದರೆ ಅದರಲ್ಲಿ ಹೊಣೆಗಾರಿಕೆಯ ಅಂಶ ಕಡಿಮೆಯಾಗಿರುತ್ತದೆ, ಅಥವಾ ಹೆಚ್ಚು ಹೊಣೆಗಾರಿಕೆಯಿರುವ ಕಾರ್ಯಾಂಗವನ್ನು ನೀವು ಆಯ್ದುಕೊಂಡರೆ ಅದರಲ್ಲಿ ಸ್ಥಿರತೆಯ ಕೊರತೆಯು ಕಾಣಿಸಿಕೊಳ್ಳುತ್ತದೆ. ಅಮೆರಿಕನ್ ಮತ್ತು ಸ್ವಿಸ್ ವ್ಯವಸ್ಥೆಗಳು ಹೆಚ್ಚಿನ ಸ್ಥಿರತೆಯನ್ನು ಹೊಂದಿವೆ ಆದರೆ ಅವುಗಳ ಜವಾಬ್ದಾರಿಕೆಯ ಪ್ರಮಾಣ ಕಡಿಮೆಯಾಗಿದೆ. ಅದೇ ಬ್ರಿಟಿಷ್ ವ್ಯವಸ್ಥೆಯಲ್ಲಿ ಕಾರ್ಯಾಂಗದ ಮೇಲೆ ಹೆಚ್ಚಿನ ಹೊಣೆಗಾರಿಕೆಯಿದೆ ಆದರೆ ಅದರಲ್ಲಿ ಸ್ಥಿರತೆಯ ಕೊರತೆ ಎದ್ದುಕಾಣುತ್ತದೆ. ಇದಕ್ಕಿರುವ ಕಾರಣಗಳು ಸ್ಪಷ್ಟ. ಅಮೆರಿಕನ್ ವ್ಯವಸ್ಥೆಯು ಸಂಸದೀಯ ವ್ಯವಸ್ಥೆಯಲ್ಲವಾಗಿರುವುದರಿಂದ ಅಲ್ಲಿನ ಕಾರ್ಯಾಂಗವು ಕಾಂಗ್ರೆಸ್‌ನಲ್ಲಿ ಬಹುಮತವನ್ನು ಅವಲಂಬಿಸಬೇಕಿಲ್ಲ. ಅಂದರೆ ಅದರ ಅಸ್ತಿತ್ವವು ಅಲ್ಲಿನ ಕಾಂಗ್ರೆಸ್‌ನ ಬೆಂಬಲದ

ಮೇಲೆ ನಿಂತಿರುವುದಿಲ್ಲ. ಆದರೆ, ಬ್ರಿಟಿಷ್ ಸಂಸದೀಯ ವ್ಯವಸ್ಥೆಯಲ್ಲಿ ಸಂಸತ್ತಿನಲ್ಲಿ ಇರುವ ಬಹುಮತದ ಆಧಾರದ ಮೇಲೆ ಅಲ್ಲಿನ ಕಾರ್ಯಾಂಗವು ನಿಂತಿರುತ್ತದೆ. ಸಂಸದೀಯ ವ್ಯವಸ್ಥೆಯಲ್ಲದಿರುವುದರಿಂದ ಅಮೆರಿಕದಲ್ಲಿ, ಕಾರ್ಯಾಂಗವನ್ನು ಕಾಂಗ್ರೆಸ್ ವಜಾಮಾಡಲು ಸಾಧ್ಯವಿಲ್ಲ. ಸಂಸದೀಯ ವ್ಯವಸ್ಥೆಯ ಸಂಸತ್ತಿನಲ್ಲಿ ಬಹುಮತವನ್ನು ಕಳೆದುಕೊಂಡ ತತ್‌ಕ್ಷಣ ಕಾರ್ಯಾಂಗವು ರಾಜೀನಾಮೆಯನ್ನು ಸಲ್ಲಿಸಲೇಬೇಕಾಗುತ್ತದೆ. ಜವಾಬ್ದಾರಿಯ ದೃಷ್ಟಿಯಿಂದ ನೋಡಿದರೆ, ಸಂಸದೀಯ ವ್ಯವಸ್ಥೆಯಿಲ್ಲದ ಪಕ್ಷದಲ್ಲಿ ಕಾರ್ಯಾಂಗವು ಶಾಸಕಾಂಗಕ್ಕೆ ಜವಾಬುದಾರಿಯಾಗಿರಬೇಕೆಂಬ ನಿಯಮಕ್ಕೆ ಅಷ್ಟೊಂದು ಅಂಟಿಕೊಂಡಿರುವುದಿಲ್ಲ. ಆದರೆ ಸಂಸದೀಯ ವ್ಯವಸ್ಥೆಯಲ್ಲಿ ಶಾಸಕಾಂಗಕ್ಕೆ ಜವಾಬುದಾರವಾಗಿರುವುದರಿಂದ ಹೆಚ್ಚು ಹೊಣೆಗಾರಿಕೆಯಿಂದ ನಡೆದುಕೊಳ್ಳುತ್ತದೆ. ಈ ಎರಡು ವ್ಯವಸ್ಥೆಗಳಲ್ಲಿ, ಅವುಗಳಿಗೆ ಇರುವ ಜವಾಬ್ದಾರಿಕೆಯ ನಡುವೆ ಅಂತರವಿರುವಂತೆ ಅವುಗಳು 'ಜವಾಬ್ದಾರಿಕೆ'ಯ ವ್ಯಾಖ್ಯಾನಗಳಲ್ಲಿಯೂ ಅಂತರವಿದೆ. ಸಂಸದೀಯ ವ್ಯವಸ್ಥೆಯನ್ನು ಹೊಂದಿರದ ಅಮೆರಿಕದಂತಹ ದೇಶಗಳಲ್ಲಿ ಕಾರ್ಯಾಂಗವು ಎಷ್ಟು ಜವಾಬ್ದಾಧಿಕೆಯಿಂದ ಕೆಲಸವನ್ನು ಮಾಡಿದೆಯೆಂಬುದರ ಮೌಲ್ಯಮಾಪನವನ್ನು ಕಾಲದಿಂದ ಕಾಲಕ್ಕೆ ಮಾಡಲಾಗುತ್ತದೆ. ಅದನ್ನು ಅಲ್ಲಿನ ಮತದಾರ ಸಮುದಾಯವು ಎರಡು ವರ್ಷಗಳಿಗೊಮ್ಮೆ ಮಾಡುತ್ತದೆ. ಸಂಸದೀಯ ವ್ಯವಸ್ಥೆಯಿರುವ ಇಂಗ್ಲೆಂಡಿನಲ್ಲಿ, ಇಂತಹ ಮೌಲ್ಯಮಾಪನವು ಕಾಲದಿಂದ ಕಾಲಕ್ಕೆ ಮತ್ತು ಪ್ರತಿ ದಿನವೂ ನಡೆಯುತ್ತಿರುತ್ತದೆ. ಪ್ರತಿ ದಿನವೂ ನಡೆಯುವ ಮೌಲ್ಯಮಾಪನವನ್ನು ಸಂಸತ್ತಿನ ಸದಸ್ಯರು ಪ್ರಶ್ನೆಗಳನ್ನು ಕೇಳುವ ಮೂಲಕ, ನಿರ್ಣಯಗಳನ್ನು ಮಂಡಿಸುವ ಮೂಲಕ, ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸುವ ಮೂಲಕ, ಸಮಾವೇಶವನ್ನು ಮುಂದೂಡುವ ಮೂಲಕ ಮತ್ತು ಚರ್ಚೆಗಳ ಮೂಲಕ ನಡೆಸುತ್ತಾರೆ. ಕಾಲಿಕವಾದ ಮೌಲ್ಯಮಾಪನವನ್ನು ಮತದಾರರು ಮಾಡುತ್ತಾರೆ, ಇದು ಸಾಮಾನ್ಯವಾಗಿ ಐದು ವರ್ಷಗಳಿಗೊಮ್ಮೆ, ಕೆಲವೊಮ್ಮೆ ಇನ್ನೂ ಮೊದಲೇ, ನಡೆಯುತ್ತದೆ. ಅಮೆರಿಕದಲ್ಲಿ ಜಾರಿಯಲ್ಲಿರುವಂತಹ ಕಾಲಿಕವಾದ ಮೌಲ್ಯಮಾಪನಕ್ಕಿಂತ ಪ್ರತಿ ದಿನ ನಡೆಸುವ ಮೌಲ್ಯಮಾಪನವು ಭಾರತದಂತಹ ದೇಶಕ್ಕೆ ಅತ್ಯಂತ ಅಗತ್ಯವಾಗಿರುತ್ತದೆ. ಕರಡು ರಚನಾ ಸಮಿತಿಯು ಸಂಸದೀಯ ವ್ಯವಸ್ಥೆಗಾಗಿ ಮಾಡಿರುವ ಶಿಫಾರಸಿನಲ್ಲಿ ಕಾರ್ಯಾಂಗದ ಸ್ಥಿರತೆಗಿಂತ ಹೆಚ್ಚಿನ ಮಹತ್ತ್ವವನ್ನು ಅದರ ಜವಾಬುದಾರಿಕೆಗೆ ನೀಡಿದೆ.

ಇಲ್ಲಿಯವರೆಗೆ ನಾನು ಕರಡು ಸಂವಿಧಾನದಲ್ಲಿರುವ ಸರ್ಕಾರದ ಸ್ವರೂಪವನ್ನು ವಿವರಿಸಿದ್ದೇನೆ. ಈಗ ನಾನು ಇನ್ನೊಂದು ವಿಷಯದತ್ತ, ಅಂದರೆ ಸಂವಿಧಾನದ ಸ್ವರೂಪದತ್ತ ತಿರುಗುತ್ತೇನೆ.

ಸಂವಿಧಾನದ ಇತಿಹಾಸದಲ್ಲಿ ಮುಖ್ಯವಾಗಿ ಎರಡು ಪ್ರಕಾರದ ಸಂವಿಧಾನಗಳನ್ನು ನಾವು ಕಾಣುತ್ತೇವೆ – ಒಂದು ಏಕಾತ್ಮಕವಾದುದಾದರೆ, ಇನ್ನೊಂದು ಸಂಯುಕ್ತ ಆಡಳಿತ ವ್ಯವಸ್ಥೆ. ಏಕಾತ್ಮಕ ವ್ಯವಸ್ಥೆಯ ಮುಖ್ಯ ಲಕ್ಷಣವೆಂದರೆ – (೧) ಕೇಂದ್ರ ಆಡಳಿತ ವ್ಯವಸ್ಥೆಗೆ ಇರುವ ಪ್ರಾಮುಖ್ಯ, ಮತ್ತು (೨) ಸರ್ವತಂತ್ರ ಸ್ವತಂತ್ರವಾದ ರಾಜ್ಯಗಳು ಇಲ್ಲದಿರುವುದು. ಇದಕ್ಕೆ ವಿರುದ್ಧವಾದುದು ಸಂಯುಕ್ತ ಆಡಳಿತ ವ್ಯವಸ್ಥೆ. ಇದರ ಲಕ್ಷಣಗಳು – (೧) ಕೇಂದ್ರ ಹಾಗೂ ಸ್ಥಳೀಯ ಆಡಳಿತ ವ್ಯವಸ್ಥೆಗಳು ಜೊತೆಜೊತೆಯಲ್ಲಿಯೇ ಇರುತ್ತವೆ, ಮತ್ತು (೨) ಇವೆರಡೂ ವ್ಯವಸ್ಥೆಗಳು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಬರುವ ಕ್ಷೇತ್ರಗಳಲ್ಲಿ ಸರ್ವತಂತ್ರ ಸ್ವತಂತ್ರವಾಗಿರುತ್ತವೆ. ಅಂದರೆ, ಸಂಯುಕ್ತ ವ್ಯವಸ್ಥೆಯೆಂದರೆ ಅದರಲ್ಲಿ ಎರಡು ವ್ಯವಸ್ಥೆಗಳು ಇರುತ್ತವೆ. ಈ ಕರಡು ಸಂವಿಧಾನವು ಮೇಲೆ ಹೇಳಿದ ಎರಡು ವ್ಯವಸ್ಥೆಗಳನ್ನು ಒಳಗೊಂಡಿರುವ ಸಂಯುಕ್ತ ಆಡಳಿತ ವ್ಯವಸ್ಥೆಯ ಸಂವಿಧಾನವಾಗಿದೆ. ಈ ಸಂವಿಧಾನವು ನೀಡಲು ಉದ್ದೇಶಿಸಿರುವ ವ್ಯವಸ್ಥೆಯಲ್ಲಿ ಕೇಂದ್ರದಲ್ಲಿ ಒಂದು ಆಡಳಿತ ವ್ಯವಸ್ಥೆಯಿದ್ದು, ಅದರ ಜೊತೆಯಲ್ಲಿ, ಅದರ ಅಡಿಯಲ್ಲಿ, ರಾಜ್ಯಗಳ ಆಡಳಿತ ವ್ಯವಸ್ಥೆಯಿರುತ್ತದೆ. ಎರಡೂ ಆಡಳಿತ ವ್ಯವಸ್ಥೆಗಳು ಸಂವಿಧಾನದಿಂದ ದತ್ತವಾಗಿರುವ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸಾರ್ವಭೌಮ ಅಧಿಕಾರವನ್ನು ಹೊಂದಿರುತ್ತವೆ. ಈ ವ್ಯವಸ್ಥೆ ಅಮೆರಿಕದಲ್ಲಿರುವ ವ್ಯವಸ್ಥೆಗೆ ಸುಮಾರಾಗಿ ಹೋಲುತ್ತದೆ. ಅಮೆರಿಕದಲ್ಲಿರುವ ವ್ಯವಸ್ಥೆಯಲ್ಲಿ ಎರಡು ಆಡಳಿತಗಳಿವೆ. ಅವುಗಳು ನಮ್ಮ ಕರಡು ಸಂವಿಧಾನದಲ್ಲಿ ಉದ್ದೇಶಿಸಿರುವ ಕೇಂದ್ರ ಹಾಗೂ ರಾಜ್ಯಗಳ

ಆಡಳಿತಕ್ಕೆ ಸಂವಾದಿಯಾಗುತ್ತವೆ. ಅಮೆರಿಕದ ಸಂವಿಧಾನದಲ್ಲಿ ಕೇಂದ್ರ ಸರ್ಕಾರವು ಎಲ್ಲ ಘಟಕಗಳ ಕೂಟವಾಗಿರುವುದಿಲ್ಲ ಅಥವಾ ಸಂಸ್ಥಾನಗಳು ಕೇಂದ್ರ ಆಡಳಿತದ ಪ್ರಾತಿನಿಧಿಕ ಸಂಸ್ಥೆಯಾಗಿರುವುದೂ ಇಲ್ಲ. ಅದೇ ರೀತಿಯಲ್ಲಿ, ಉದ್ದೇಶಿತ ಸಂವಿಧಾನದಲ್ಲಿ ಭಾರತದಲ್ಲಿನ ವ್ಯವಸ್ಥೆಯು ರಾಜ್ಯಗಳ ಕೂಟವಲ್ಲ ಮತ್ತು ರಾಜ್ಯಗಳು ಕೇಂದ್ರ ಸರಕಾರದ ಪ್ರಾತಿನಿಧಿಕ ಸಂಸ್ಥೆಗಳೂ ಆಗಿರುವುದಿಲ್ಲ. ಆದರೆ, ಇಷ್ಟಕ್ಕೇ ಅಮೆರಿಕ ಮತ್ತು ಭಾರತದ ವ್ಯವಸ್ಥೆಗಳಲ್ಲಿನ ಹೋಲಿಕೆ ಕೊನೆಗೊಳ್ಳುತ್ತದೆ. ಅವುಗಳ ನಡುವಿನ ಹೋಲಿಕೆಗಳಿಗಿಂತ ಅವುಗಳ ನಡುವೆ ಇರುವ ವ್ಯತ್ಯಾಸಗಳು ಕಣ್ಣಿಗೆ ರಾಚುವಷ್ಟು ಸ್ಪಷ್ಟವಾಗಿವೆ.

ಅಮೆರಿಕದ ಸಂಯುಕ್ತ ವ್ಯವಸ್ಥೆಗೂ ಮತ್ತು ಭಾರತೀಯ ಕೇಂದ್ರ ವ್ಯವಸ್ಥೆಗೂ ನಡುವೆ ಎರಡು ಪ್ರಮುಖ ವ್ಯತ್ಯಾಸಗಳಿವೆ. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿರುವ ಈ ಎರಡೂ ವ್ಯವಸ್ಥೆಗಳು ಎರಡು ರೀತಿಯ ಪೌರತ್ವಗಳ ಆಧಾರದ ಮೇಲೆ ನಿಂತಿದೆ. ಅಲ್ಲಿನ ನಾಗರಿಕರಿಗೆ ಅಮೆರಿಕ ಸಂಯುಕ್ತ ಸಂಸ್ಥಾನದ ಪೌರತ್ವದ ಜೊತೆಗೆ ಅವರವರ ಸಂಸ್ಥಾನದ ಪೌರತ್ವವೂ ಇರುತ್ತದೆ. ಇಂತಹ ದ್ವಿಪೌರತ್ವದ ನಿಷ್ಠುರತೆಯನ್ನು ಅಮೆರಿಕ ಸಂಯುಕ್ತ ಸಂಸ್ಥಾನದ ಸಂವಿಧಾನದ ಹದಿನಾಲ್ಕನೆಯ ತಿದ್ದುಪಡಿಯು ಬಹುಮಟ್ಟಿಗೆ ಕಡಿಮೆಗೊಳಿಸಿದೆ. ಈ ತಿದ್ದುಪಡಿಯ ಮೂಲಕ ವಿವಿಧ ಸಂಸ್ಥಾನಗಳು ಅಮೆರಿಕ ಸಂಯುಕ್ತ ಸಂಸ್ಥಾನಗಳ ಪೌರತ್ವವನ್ನು ಹೊಂದಿರುವವರ ಹಕ್ಕುಗಳನ್ನು, ಸವಲತ್ತುಗಳನ್ನು ಹಾಗೂ ವಿನಾಯಿತಿಗಳನ್ನು ಕಿತ್ತುಕೊಳ್ಳುವ ಹಾಗಿಲ್ಲ. ಅದೇ ಸಮಯದಲ್ಲಿ, ವಿಲಿಯಮ್ ಆಂಡರ್‌ಸನ್ ಅವರು ಹೇಳುವಂತೆ, ಕೆಲವು ರಾಜಕೀಯ ವಿಷಯಗಳಲ್ಲಿ, ಉದಾ. ಮತದಾನ ಮಾಡುವ, ಸಾರ್ವಜನಿಕ ಹುದ್ದೆಗಳನ್ನು ಅಲಂಕರಿಸುವ ವಿಷಯಗಳಲ್ಲಿ, ಅಲ್ಲಿನ ಸಂಸ್ಥಾನಗಳು ತಮ್ಮ ಪೌರರ ಪರವಾಗಿ ಒಲವನ್ನು ತೋರಬಹುದು. ಈ ಒಲವಿನ ವ್ಯಾಪ್ತಿ ಹಲವು ವಿಷಯಗಳಲ್ಲಿ ಇನ್ನೂ ವಿಶಾಲವಾಗಬಹುದು. ಒಂದು ಸಂಸ್ಥಾನದಲ್ಲಿ ಉದ್ಯೋಗವನ್ನು ಗಳಿಸಿಕೊಳ್ಳಬೇಕಾದರೆ ಆ ವ್ಯಕ್ತಿ ಅದೇ ಸಂಸ್ಥಾನದ ಸ್ಥಳೀಯ ನಿವಾಸಿಯಾಗಿರಬೇಕು. ಹಾಗೆಯೇ, ಕಾನೂನು, ವೈದ್ಯಕೀಯ ಮೊದಲಾದ ಕ್ಷೇತ್ರಗಳಲ್ಲಿ ಅನುಮತಿಯನ್ನು ಪಡೆಯಬೇಕಾದರೆ ಆ ವ್ಯಕ್ತಿ ಸ್ಥಳೀಯ ನಿವಾಸಿಯಾಗಿರಬೇಕು ಎನ್ನುವುದನ್ನು ಒತ್ತಿ ಹೇಳಲಾಗುತ್ತದೆ. ಅಲ್ಲದೆ ಸಾರ್ವಜನಿಕ ನಿಯಂತ್ರಣವು ಅಗತ್ಯವಾಗಿರುವಂತಹ ಮದ್ಯಗಳ, ಸ್ಟಾಕ್ಸ್ ಮತ್ತು ಬಾಂಡ್‌ಗಳಿಗೆ ಸಂಬಂಧಪಟ್ಟ ವ್ಯವಹಾರಗಳಿಗೆ ಮುಂದಾಗುವ ವ್ಯಕ್ತಿಯು ಸ್ಥಳೀಯ ಪೌರತ್ವವನ್ನು ಪಡೆದಿರಲೇಬೇಕು ಎಂಬ ನಿಯಮವು ಹಲವು ಬಾರಿ ಎತ್ತಿಹಿಡಿಯಲ್ಪಟ್ಟಿದೆ.

ಪ್ರತಿಯೊಂದು ಸಂಸ್ಥಾನಕ್ಕೂ ತನ್ನದೇ ಆದ ಹಕ್ಕುಗಳು ಇರುತ್ತವೆ. ಉದಾಹರಣೆಗೆ ಬೇಟೆಯಾಡುವುದು ಹಾಗೂ ಮೀನು ಹಿಡಿಯುವುದು ರಾಜ್ಯಗಳ ವ್ಯಾಪ್ತಿಗೆ ಬರುತ್ತದೆ. ರಾಜ್ಯಗಳು ಬೇಟೆಯಾಡುವುದಕ್ಕೆ ಅಥವಾ ಮೀನು ಹಿಡಿಯುವುದಕ್ಕೆ ನೀಡುವ ಅನುಮತಿಗೆ ತನ್ನ ನಾಗರಿಕರಿಂದ ವಸೂಲು ಮಾಡುವ ಹಣಕ್ಕಿಂತ ಹೆಚ್ಚಿನ ಹಣವನ್ನು ಬೇರೆ ರಾಜ್ಯಗಳ ನಿವಾಸಿಗಳಿಗೆ ವಿಧಿಸುವುದು ಸಾಮಾನ್ಯವಾಗಿರುತ್ತವೆ. ಇತರ ರಾಜ್ಯಗಳ ವಿದ್ಯಾರ್ಥಿಗಳಿಗೆ ತಮ್ಮ ರಾಜ್ಯದ ವಿದ್ಯಾ ಸಂಸ್ಥೆಗಳಲ್ಲಿ ಹೆಚ್ಚಿನ ಶುಲ್ಕವನ್ನು ವಿಧಿಸುತ್ತಾರೆ, ಮತ್ತು ತುರ್ತು ಸಂದರ್ಭಗಳಲ್ಲಿ ಹೊರತುಪಡಿಸಿ ತಮ್ಮ ರಾಜ್ಯಗಳ ನಾಗರಿಕರಿಗೆ ಮಾತ್ರ ತಮ್ಮ ರಾಜ್ಯಗಳಲ್ಲಿನ ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನು ನೀಡುತ್ತವೆ.

ಒಟ್ಟಿನಲ್ಲಿ ಹೇಳುವುದಾದರೆ, ರಾಜ್ಯಗಳು ಕೆಲವು ಹಕ್ಕುಗಳನ್ನು ತನ್ನ ರಾಜ್ಯದಲ್ಲಿನ ನಾಗರಿಕರಿಗೆ, ನಿವಾಸಿಗಳಿಗೆ ಮಾತ್ರ ನೀಡುತ್ತವೆ ಮತ್ತು ಇತರ ರಾಜ್ಯಗಳ ನಿವಾಸಿಗಳಿಗೆ, ನಾಗರಿಕರಿಗೆ ಅಂತಹ ಹಕ್ಕುಗಳನ್ನು ನೀಡುವುದೇ ಇಲ್ಲ, ಅಥವಾ ನೀಡಿದರೂ, ಅವುಗಳನ್ನು ಪಡೆದುಕೊಳ್ಳುವುದು ಹೊರಗಿನವರಿಗೆ ಅತ್ಯಂತ ಕಷ್ಟಕರವಾಗಿರುತ್ತದೆ. ಇಂತಹ ಸೌಲಭ್ಯಗಳು ಆಯಾ ರಾಜ್ಯದ ನಾಗರಿಕತ್ವದ ವಿಶೇಷ ಅನುಕೂಲಗಳಾಗಿರುತ್ತವೆ. ಅಂದರೆ, ಒಂದು ರಾಜ್ಯದಲ್ಲಿ ಆ ರಾಜ್ಯದ ಪೌರರಿಗೂ ಇತರರಿಗೂ ದೊರೆಯುವ ಹಕ್ಕುಗಳಲ್ಲಿ ಬಹಳಷ್ಟು ವ್ಯತ್ಯಾಸವಿರುತ್ತದೆ. ಅನಿವಾಸಿ ಜನರಿಗೆ, ಹೊರಗಿನಿಂದ ಬಂದವರಿಗೆ ಇಂತಹ ಕಷ್ಟಗಳು ಅಲ್ಲಿನ ಎಲ್ಲ ರಾಜ್ಯಗಳಲ್ಲಿಯೂ ಇರುತ್ತವೆ.

ನಮ್ಮ ಉದ್ದೇಶಿತ ಸಂವಿಧಾನದಲ್ಲಿ ಎರಡು ಹಂತದ ಆಡಳಿತ ವ್ಯವಸ್ಥೆಯಿದ್ದರೂ ಒಂದೇ ಪೌರತ್ವವಿರುತ್ತದೆ.

ಅಂದರೆ ಇಡೀ ಭಾರತದಲ್ಲಿ ಒಂದೇ ಪೌರತ್ವವಿರುತ್ತದೆ. ಅದು ಭಾರತದ ಪೌರತ್ವ. ಬಿಡಿಯಾಗಿ ರಾಜ್ಯಗಳ ಪೌರತ್ವವೆಂಬುದು ಇರುವುದಿಲ್ಲ. ಯಾವುದೇ ರಾಜ್ಯದ ನಿವಾಸಿಯಾದರೂ ಒಂದೇ ರೀತಿಯ ಹಕ್ಕುಗಳು ಭಾರತೀಯ ಪೌರತ್ವವನ್ನು ಹೊಂದಿರುವವನಿಗೆ ದೊರಕುತ್ತದೆ.

ಭಾರತದ ಉದ್ದೇಶಿತ ಎರಡು ಹಂತಗಳ ಆಡಳಿತ ವ್ಯವಸ್ಥೆಯು, ಅಮೆರಿಕದಲ್ಲಿರುವ ಎರಡು ಹಂತಗಳ ಆಡಳಿತ ವ್ಯವಸ್ಥೆಗಿಂತ ಬೇರೊಂದು ರೀತಿಯಲ್ಲಿಯೂ ಭಿನ್ನವಾಗಿರುತ್ತದೆ. ಅಮೆರಿಕದಲ್ಲಿ ಕೇಂದ್ರ ಹಾಗೂ ರಾಜ್ಯಗಳ ಸಂಬಂಧ ಅಷ್ಟು ಬಿಗಿಯಾಗಿರುವುದಿಲ್ಲ. ಈ ಸಂಬಂಧವನ್ನು ವಿವರಿಸುತ್ತಾ ಬ್ರೈಸ್ ಈ ರೀತಿ ಹೇಳಿದ್ದಾರೆ:

"ಕೇಂದ್ರ ಅಥವಾ ರಾಷ್ಟ್ರೀಯ ಸರ್ಕಾರ ಮತ್ತು ರಾಜ್ಯ ಸರ್ಕಾರಗಳನ್ನು ಒಂದೇ ನಿವೇಶನದಲ್ಲಿ ನಿಂತಿರುವ ಒಂದು ದೊಡ್ಡ ಕಟ್ಟಡ ಹಾಗೂ ಹಲವು ಚಿಕ್ಕ ಚಿಕ್ಕ ಕಟ್ಟಡಗಳ ಗುಂಪಿಗೆ ಹೋಲಿಸಬಹುದು. ಅವು ಒಂದೇ ನಿವೇಶನದಲ್ಲಿ ಇದ್ದರೂ ಒಂದಕ್ಕಿಂತ ಇನ್ನೊಂದು ಭಿನ್ನವಾಗಿರುತ್ತವೆ."

ಭಿನ್ನವಾಗಿರುತ್ತವೆ ನಿಜ, ಆದರೆ ರಾಜ್ಯ ಸರಕಾರಗಳು ಕೇಂದ್ರ ಸರಕಾರಕ್ಕಿಂತ ಹೇಗೆ ಭಿನ್ನವಾಗಿರುತ್ತವೆ: ಕೆಳಗಿನ ಅಂಶಗಳಿಂದ ಅದನ್ನು ತಿಳಿದುಕೊಳ್ಳಬಹುದು:

೧. ಕೇಂದ್ರ ಸರ್ಕಾರದ ಸ್ವರೂಪಕ್ಕೆ ಧಕ್ಕೆ ತಾರದಂತೆ, ಪ್ರತಿಯೊಂದು ರಾಜ್ಯವೂ ತನ್ನದೇ ಆದ ಸಂವಿಧಾನವನ್ನು ಹೊಂದಿರಬಹುದು,

೨. ಯಾವುದೇ ರಾಜ್ಯದ ಜನತೆ ಸ್ವತಂತ್ರವಾಗಿ ತಮ್ಮ ಸಂವಿಧಾನವನ್ನು ಬದಲಾಯಿಸಬಹುದು.

ಮತ್ತೆ ಬ್ರೈಸ್ ಅವರ ಮಾತಿನಲ್ಲಿಯೇ ಹೇಳುವುದಾದರೆ –

"ಅಮೆರಿಕದಲ್ಲಿರುವ ಯಾವುದೇ ರಾಜ್ಯವು ಕಾಮನ್‌ವೆಲ್ತ್‌ನಲ್ಲಿ ಒಂದು ಭಾಗದಂತೆ ತನ್ನ ಅಸ್ತಿತ್ವವನ್ನು ತನ್ನ ಸಂವಿಧಾನದಿಂದಾಗಿ ಕಾಪಾಡಿಕೊಂಡು ಹೋಗುತ್ತದೆ, ಮತ್ತು ಆ ರಾಜ್ಯದ ಅಧಿಕಾರದ ಎಲ್ಲ ಪಕ್ಷಗಳು, ಎಂದರೆ ಅದರ ಕಾರ್ಯಾಂಗ, ನ್ಯಾಯಾಂಗ ಮತ್ತು ರಾಜ್ಯಾಂಗಗಳು, ಆ ರಾಜ್ಯದ ಸಂಸತ್ತಿನ ಶಿಶುಗಳಾಗಿರುತ್ತವೆ."

ಇಂತಹ ಪರಿಸ್ಥಿತಿ ನಮ್ಮ ಉದ್ದೇಶಿತ ಸಂವಿಧಾನದಲ್ಲಿ ಸಲ್ಲುವುದಿಲ್ಲ. ಯಾವುದೇ ರಾಜ್ಯವೂ (ಎಂತಹ ಸಂದರ್ಭದಲ್ಲಿಯೂ ಮೊದಲ ಭಾಗದಲ್ಲಿ ಹೇಳಲ್ಪಟ್ಟಿರುವ ರಾಜ್ಯಗಳು) ತನ್ನದೇ ಆದ ಸಂವಿಧಾನವನ್ನು ಹೊಂದಲು ಸಾಧ್ಯವಿಲ್ಲ. ರಾಜ್ಯಗಳ ಮತ್ತು ಕೇಂದ್ರದ ಸಂವಿಧಾನವು ಒಂದೇ ಚೌಕಟ್ಟಿನಲ್ಲಿ ಅಳವಡಿಸಲ್ಪಟ್ಟಿರುತ್ತದೆ ಮತ್ತು ಈ ಚೌಕಟ್ಟಿನಿಂದ ಅದು ಹೊರಗೆ ಹೋಗಲು ಸಾಧ್ಯವೇ ಇರುವುದಿಲ್ಲ ಮತ್ತು ಆ ಚೌಕಟ್ಟಿನಲ್ಲಿಯೇ ಅವು ತಮ್ಮ ಕಾರ್ಯವನ್ನು ನಿರ್ವಹಿಸಬೇಕು.

ಇಲ್ಲಿಯವರೆಗೆ ಅಮೆರಿಕ ಸಂಯುಕ್ತ ಸಂಸ್ಥಾನ ಹಾಗೂ ಭಾರತದ ಉದ್ದೇಶಿತ ವ್ಯವಸ್ಥೆಯಲ್ಲಿರುವ ವ್ಯತ್ಯಾಸಗಳನ್ನು ವಿವರಿಸಿದ್ದೇನೆ. ಇವಲ್ಲದೆ ನಮ್ಮ ಉದ್ದೇಶಿತ ಸಂವಿಧಾನವು ತನ್ನಲ್ಲಿರುವ ಕೆಲವು ಲಕ್ಷಣಗಳಿಂದಾಗಿ ಅಮೆರಿಕ ಸಂಯುಕ್ತ ಸಂಸ್ಥಾನದ ಸಂವಿಧಾನಕ್ಕಿಂತ ಮಾತ್ರವಲ್ಲದೆ, ಇತರ ಯಾವುದೇ ಸಂಯುಕ್ತ ರಾಷ್ಟ್ರದ ಸಂವಿಧಾನಗಳಿಗಿಂತ ವಿಭಿನ್ನವಾಗಿ ಕಾಣುತ್ತದೆ. ಅಮೆರಿಕ ಸಂಯುಕ್ತ ಸಂಸ್ಥಾನವೂ ಸೇರಿದಂತೆ ಎಲ್ಲ ಸಂಯುಕ್ತ ರಾಷ್ಟ್ರಗಳ ವ್ಯವಸ್ಥೆಗಳು ಒಂದು ರೀತಿಯಲ್ಲಿ ಅನಮ್ಯತೆಯಿಂದ ಬಂಧಿಸಲ್ಪಟ್ಟ ಹಾಗೆ ಇರುತ್ತವೆ. ಯಾವುದೇ ಸಂದರ್ಭದಲ್ಲಿಯೂ ಅದರ ಸ್ವರೂಪವನ್ನು ಬದಲಾಯಿಸಲಾಗುವುದಿಲ್ಲ. ಅದರಲ್ಲಿ ಏಕಾತ್ಮಕತೆಯು ಎಂದಿಗೂ ಸಿಗಲಾರದು. ಆದರೆ ನಾವು ಉದ್ದೇಶಿಸಿರುವ ಸಂವಿಧಾನದಲ್ಲಿ ಏಕಾತ್ಮಕತೆ ಹಾಗೂ ಕಾಲ ಮತ್ತು ಸಂದರ್ಭಕ್ಕೆ ಅಗತ್ಯವಾದ ನಮ್ಯತೆ ಎರಡನ್ನೂ ಕಾಣಬಹುದು. ಸಾಮಾನ್ಯ ಪರಿಸ್ಥಿತಿಯಲ್ಲಿ ವ್ಯವಸ್ಥೆಯು ಸಂಯುಕ್ತ ವ್ಯವಸ್ಥೆಯಾಗಿ ನಡೆಯುವಂತೆ ರೂಪಿಸಲಾಗಿದೆ. ಮತ್ತೆ ಅಗತ್ಯವಾದಂತಹ ಕೆಲವು ಸಂದರ್ಭಗಳಲ್ಲಿ, ಅದು ಏಕಾತ್ಮಕವಾಗಿ ಕಾರ್ಯವನ್ನು ನಿರ್ವಹಿಸುತ್ತದೆ. ಒಮ್ಮೆ ರಾಷ್ಟ್ರಪತಿಗಳು ತಮಗೆ ೨೭೫ನೆಯ ವಿಧಿಯು ನೀಡಿರುವ ಅಧಿಕಾರದ ಅಡಿಯಲ್ಲಿ ಒಂದು ಘೋಷಣೆಯನ್ನು ನೀಡಿದರೆ, ಎಲ್ಲ ರಾಜ್ಯಗಳೂ ಒಂದೇ ಆಗಿ, ಏಕಾತ್ಮಕವಾದ ಸ್ವರೂಪವನ್ನು

ಹೊಂದುತ್ತವೆ. ಹಾಗೆ ಘೋಷಣೆಯನ್ನು ನೀಡದಾಗ, ಕೇಂದ್ರ ಸರ್ಕಾರವು, ತನಗೆ ಅಗತ್ಯವೆನಿಸಿದರೆ, (೧) ರಾಜ್ಯಗಳ ಪಟ್ಟಿಗೆ ಸೇರಿರುವ ವಿಷಯಗಳನ್ನು ಕುರಿತಾಗಿ ತಾನೇ ಕಾನೂನನ್ನು ಮಾಡಬಹುದು, (೨) ರಾಜ್ಯಗಳ ವ್ಯಾಪ್ತಿಯಲ್ಲಿ ಬರುವ ವಿಷಯಗಳಲ್ಲಿ ಅವು ಹೇಗೆ ತಮ್ಮ ಅಧಿಕಾರವನ್ನು ಚಲಾಯಿಸಬಹುದು ಎಂಬುದನ್ನು ಕುರಿತು ಸೂಚನೆ, ಆದೇಶಗಳನ್ನು ಸರ್ಕಾರವು ನೀಡಬಹುದು, (೩) ಯಾವುದೇ ಅಧಿಕಾರಿಗೆ ತನಗೆ ಸರಿಯೆಂದು ತೋರಿದ ಯಾವುದೇ ಅಧಿಕಾರವನ್ನು ವಹಿಸಬಹುದು, ಮತ್ತು (೪) ಸಂವಿಧಾನದಲ್ಲಿ ನೀಡಲಾಗುವ ಯಾವುದೇ ಹಣಕಾಸಿನ ಉಪಬಂಧಗಳನ್ನು ಅಮಾನತ್ತಿನಲ್ಲಿಡಬಹುದು. ಹೀಗೆ ಸಂಯುಕ್ತ ವ್ಯವಸ್ಥೆಯನ್ನು ಏಕಾತ್ಮಕ ವ್ಯವಸ್ಥೆಯನ್ನಾಗಿ ಪರಿವರ್ತಿಸುವ ಅವಕಾಶ ಯಾವುದೇ ಸಂಯುಕ್ತ ರಾಷ್ಟ್ರದ ಸಂವಿಧಾನದಲ್ಲಿಯೂ ಇಲ್ಲ. ಇದು ನಾವು ಉದ್ದೇಶಿಸಿರುವ ಸಂಯುಕ್ತ ವ್ಯವಸ್ಥೆಯ ಹಾಗೂ ನಮಗೆ ತಿಳಿದಿರುವ ಇತರ ಯಾವ ಸಂಯುಕ್ತ ವ್ಯವಸ್ಥೆಯ ನಡುವೆ ಇರುವ ಬಹುಮುಖ್ಯ ವ್ಯತ್ಯಾಸ.

ಆದರೆ ಇದಿಷ್ಟೇ ನಮ್ಮ ಹಾಗೂ ಇತರ ಸಂಯುಕ್ತ ವ್ಯವಸ್ಥೆಗಳ ನಡುವೆ ಇರುವ ಭಿನ್ನತೆಯಲ್ಲ. ಸಂಯುಕ್ತ ವ್ಯವಸ್ಥೆಯನ್ನು ನಿರ್ವೀರ್ಯ ವ್ಯವಸ್ಥೆಯೆನ್ನದಿದ್ದರೂ, ಅದನ್ನು ದುರ್ಬಲ ಆಡಳಿತ ವ್ಯವಸ್ಥೆಯೆನ್ನುತ್ತಾರೆ. ಸಂಯುಕ್ತ ವ್ಯವಸ್ಥೆಯಲ್ಲಿ ಸಾಮಾನ್ಯವಾಗಿ ಎರಡು ರೀತಿಯ ದೌರ್ಬಲ್ಯಗಳಿರುತ್ತವೆ. ಒಂದು ಅನಮ್ಯತೆ, ಮತ್ತೊಂದು ಅತಿಯಾದ ಸೂತ್ರನಿಷ್ಠತೆ. ಸಂಯುಕ್ತ ವ್ಯವಸ್ಥೆಯಲ್ಲಿ ಇವೆರಡೂ ಇರುತ್ತವೆ ಎನ್ನುವುದು ನಿರ್ವಿವಾದವಾಗಿರುವ ವಿಷಯ. ಸಂಯುಕ್ತ ವ್ಯವಸ್ಥೆಯ ಸಂವಿಧಾನವು ಲಿಖಿತ ಸಂವಿಧಾನವಾಗದೆ ಬೇರೆ ದಾರಿಯೇ ಇಲ್ಲ ಮತ್ತು ಲಿಖಿತ ಸಂವಿಧಾನವು ಅನಿವಾರ್ಯವಾಗಿ ಅನಮ್ಯವಾಗಿರುತ್ತದೆ. ಸಂಯುಕ್ತ ವ್ಯವಸ್ಥೆಯೆಂದರೆ ಸಂವಿಧಾನವು ಕೊಡಮಾಡುವಷ್ಟರ ಮಟ್ಟಿಗೆ ಕೇಂದ್ರ ಹಾಗೂ ರಾಜ್ಯಗಳ ನಡುವಿನ ಅಧಿಕಾರದ ಹಂಚಿಕೆ. ಅದರಿಂದ ಎರಡು ಆವಶ್ಯಕ ಪರಿಣಾಮಗಳಾಗುತ್ತವೆ: (೧) ಕೇಂದ್ರ ಹಾಗೂ ರಾಜ್ಯಗಳಲ್ಲಿ ಒಂದು ತನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿ ಇನ್ನೊಂದರ ಅಧಿಕಾರವನ್ನು ಆಕ್ರಮಿಸಲು ಪ್ರಯತ್ನಿಸಿದರೆ ಅದು ಸಂವಿಧಾನದ ಉಲ್ಲಂಘನೆಯಾಗುತ್ತದೆ, ಮತ್ತು (೨) ಅಂತಹ ಪ್ರಸಂಗದಲ್ಲಿ, ಉಲ್ಲಂಘನೆಯಾಗಿದೆಯೋ ಇಲ್ಲವೋ ಎಂಬುದನ್ನು ನಿರ್ಧರಿಸಲು ಅಧಿಕಾರವಿರುವುದು ನ್ಯಾಯಾಂಗಕ್ಕೆ ಮಾತ್ರ. ಇದು ಸಂಯುಕ್ತ ವ್ಯವಸ್ಥೆಯ ಲಕ್ಷಣವಾಗಿರುವುದರಿಂದ, ಸಂಯುಕ್ತ ವ್ಯವಸ್ಥೆಯ ಸಂವಿಧಾನವು ಅಮೆರಿಕ ಸಂಯುಕ್ತ ಸಂಸ್ಥಾನದ ಸಂವಿಧಾನದಲ್ಲಿ ವಿಧ್ಯುಕ್ತವಾಗಿ ವಿವರಿಸಲ್ಪಟ್ಟಿದೆ.

ಇತ್ತೀಚಿಗೆ ಸಂಯುಕ್ತ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುವ ರಾಷ್ಟ್ರಗಳು, ಸಂಯುಕ್ತ ವ್ಯವಸ್ಥೆಯಲ್ಲಿರುವ ಅನಮ್ಯತೆ ಹಾಗೂ ಅತಿಯಾದ ಸೂತ್ರನಿಷ್ಠತೆಯಿಂದಾಗುವ ಅನನುಕೂಲಗಳನ್ನು ಕಡಿಮೆ ಮಾಡಿಕೊಳ್ಳಲು ಪ್ರಯತ್ನಿಸಿವೆ. ಈ ಸಂದರ್ಭದಲ್ಲಿ ಆಸ್ಟ್ರೇಲಿಯಾದ ಸಂವಿಧಾನದ ಉದಾಹರಣೆಯು ಉತ್ತಮವಾಗುತ್ತದೆ. ತನ್ನ ಸಂಯುಕ್ತ ವ್ಯವಸ್ಥೆಯಲ್ಲಿ ಅನಮ್ಯತೆಯನ್ನು ಕಡಿಮೆ ಮಾಡಲು ಆಸ್ಟ್ರೇಲಿಯಾ ಸಂವಿಧಾನವು ಕೆಳಗಿನ ವ್ಯವಸ್ಥೆಯನ್ನು ಅಳವಡಿಸಿಕೊಂಡಿದೆ.

(೧) "ಕಾಮನ್‌ವೆಲ್ತ್‌ನ (ಸಂಯುಕ್ತ ವ್ಯವಸ್ಥೆಯ) ಸಂಸತ್ತಿಗೆ ಸಹವರ್ತಿ ಪಟ್ಟಿಯಲ್ಲಿನ ವಿಷಯಗಳಲ್ಲಿ ಹೆಚ್ಚಿಗೆ ಅಧಿಕಾರವನ್ನು ಹಾಗೂ ಪ್ರತ್ಯೇಕವಾದ ಪಟ್ಟಿಯಲ್ಲಿನ ವಿಷಯಗಳಲ್ಲಿ ಕಡಿಮೆ ಅಧಿಕಾರವನ್ನೂ ನೀಡುವುದು;

(೨) ಸಂವಿಧಾನದ ಕೆಲವು ತಾತ್ಕಾಲಿಕ ಅನುಚ್ಛೇದಗಳು 'ಸಂಸತ್ತು ಅವುಗಳನ್ನು ಬದಲಾಯಿಸುವ ವರೆಗೂ' ಜಾರಿಯಲ್ಲಿ ಇರುವಂತೆ ಆ ಅನುಚ್ಛೇದಗಳಿಗೆ ನಿಯಮಿಸಿರುವುದು."

ಅಮೆರಿಕ ಸಂಯುಕ್ತ ಸಂಸ್ಥಾನಗಳ ಕಾಂಗ್ರೆಸ್ ಮಾಡಲಾಗದ ಹಲವಾರು ಕಾರ್ಯಗಳನ್ನು ಆಸ್ಟ್ರೇಲಿಯಾ ಸಂವಿಧಾನವು ಮಾಡಬಲ್ಲುದು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಇಂತಹ ಕಾರ್ಯಗಳನ್ನು ಮಾಡಲು ತನಗೆ ಅಗತ್ಯವಿರುವ ಅಧಿಕಾರವನ್ನು ಪಡೆಯಲು ಅಮೆರಿಕ ಸರ್ಕಾರವು ಅಲ್ಲಿನ ಸರ್ವೋಚ್ಚ ನ್ಯಾಯಾಲಯವನ್ನು

ಸಂಪರ್ಕಿಸಿ, ತಾನು ಹಾಗೆ ಮಾಡುವ ಅಗತ್ಯ, ತನಗೆ ಅದನ್ನು ಮಾಡಲಿರುವ ಸಾಮರ್ಥ್ಯ, ತನ್ನ ಉದ್ದೇಶದ ಹಿಂದಿರುವ ನಿಷ್ಪಾಪಟ್ಯ, ಮತ್ತು ಅದನ್ನು ಸಾಧಿಸಲು ಅಗತ್ಯವಾದ ತತ್ತ್ವವನ್ನು ಹುಡುಕಲು ಇರುವ ತನ್ನ ಇಚ್ಛಾಶಕ್ತಿ ಇವೆಲ್ಲವನ್ನೂ ನ್ಯಾಯಾಲಯಕ್ಕೆ ಮನದಟ್ಟು ಮಾಡಿಕೊಡಬೇಕು.

ಅನಮ್ಯತೆ ಹಾಗೂ ಅತಿ ಸೂತ್ರನಿಷ್ಠತೆಗಳ ಕಾಠಿಣ್ಯವನ್ನು ಕಡಿಮೆ ಮಾಡಲು, ಕರಡು ರಚನಾ ಮಂಡಲಿಯು ಆಸ್ಟ್ರೇಲಿಯಾ ಯೋಜನೆಯನ್ನು, ಆಸ್ಟ್ರೇಲಿಯಾ ಸಂವಿಧಾನದಲ್ಲಿ ಅನುಸರಿಸಿರುವುದಕ್ಕಿಂತ ಹೆಚ್ಚಾಗಿ ಅನುಸರಿಸಿದೆ. ನಮ್ಮ ಸಮಿತಿಯು ಆಸ್ಟ್ರೇಲಿಯಾ ಸಂವಿಧಾನದಲ್ಲಿರುವಂತೆ ಹೆಚ್ಚು ಹೆಚ್ಚು ವಿಷಯಗಳನ್ನು ಸಹವರ್ತಿ ಪಟ್ಟಿಯಲ್ಲಿ ಸೇರಿಸಿದೆ. ಆಸ್ಟ್ರೇಲಿಯಾದ ಸಹವರ್ತಿ ಪಟ್ಟಿಯಲ್ಲಿರುವ ವಿಷಯಗಳ ಸಂಖ್ಯೆ ೩೯, ನಮ್ಮ ಕರಡು ಸಂವಿಧಾನದಲ್ಲಿ ಈ ಪಟ್ಟಿಯಲ್ಲಿ ೩೭ ವಿಷಯಗಳು ಸೇರಿವೆ. ಆಸ್ಟ್ರೇಲಿಯಾ ಸಂವಿಧಾನವನ್ನು ಅನುಸರಿಸಿ, ನಮ್ಮ ಕರಡು ಸಂವಿಧಾನದಲ್ಲಿ ಕೆಲವು ಅನುಚ್ಛೇದಗಳನ್ನು ತಾತ್ಕಾಲಿಕ ಅವಧಿಯವರೆಗೆ ಎಂದು ಆರು ಅನುಚ್ಛೇದಗಳನ್ನು ಸೇರಿಸಲಾಗಿದೆ. ಈ ಆರು ವಿಧಿಗಳನ್ನು ಸಂಸತ್ತು ಯಾವಾಗ ಬೇಕಾದರೂ ಅಂದಿನ ಸಂದರ್ಭಕ್ಕೆ ತಕ್ಕ ಹಾಗೆ ಬದಲಾಯಿಸಬಹುದು. ಆಸ್ಟ್ರೇಲಿಯಾ ಸಂವಿಧಾನಕ್ಕಿಂತಲೂ ನಮ್ಮ ಕರಡು ಸಂವಿಧಾನವು ಒಂದು ಅಂಶದಲ್ಲಿ ಇನ್ನೂ ಮುಂದೆ ಹೋಗಿದೆ. ಅದೇಂದರೆ, ಶಾಸನಗಳನ್ನು ರೂಪಿಸುವ ನಿಟ್ಟಿನಲ್ಲಿ ಸಂಸತ್ತಿಗಷ್ಟೇ ಇರುವ ಪರಮಸ್ವಾತಂತ್ರ್ಯ. ಆಸ್ಟ್ರೇಲಿಯಾದ ಸಂಸತ್ತಿಗೆ ಕೇವಲ ಮೂರು ವಿಷಯಗಳಲ್ಲಿ ಮಾತ್ರ ಈ ಅಧಿಕಾರವಿದ್ದರೆ, ಕರಡು ಸಂವಿಧಾನದಲ್ಲಿ ೯೧ ವಿಷಯಗಳಲ್ಲಿ ಶಾಸನಗಳನ್ನು ರೂಪಿಸುವ ಪ್ರತ್ಯೇಕ ಅಧಿಕಾರ ಭಾರತದ ಉದ್ದೇಶಿತ ಸಂಸತ್ತಿಗೆ ಇರುತ್ತದೆ. ಸಂಯುಕ್ತ ವ್ಯವಸ್ಥೆಯು ಅನಮ್ಯವೆಂದು ಸಾಮಾನ್ಯವಾಗಿ ಭಾವಿಸಿದ್ದರೂ, ಕರಡು ಸಂವಿಧಾನವು ಭಾರತದ ಉದ್ದೇಶಿತ ಸಂಯುಕ್ತ ವ್ಯವಸ್ಥೆಗೆ ಅತಿ ಹೆಚ್ಚಿನ ಚೈತನ್ಯಶೀಲವಾದ ನಮ್ಯತೆಯನ್ನು ನೀಡಿದೆ.

ಕರಡು ಸಂವಿಧಾನವು ಆಸ್ಟ್ರೇಲಿಯಾದ ಸಂವಿಧಾನವನ್ನು ಅನುಸರಿಸಿದೆ ಅಥವಾ ಅತಿಯಾಗಿ ಅದನ್ನು ಅನುಸರಿಸಿದೆ ಎಂದಷ್ಟೇ ಹೇಳಿದರೆ ಸಾಲದು. ಇಲ್ಲಿ ಗಮನಿಸಬೇಕಾದ ಅಂಶವೇಂದರೆ, ಸಂಯುಕ್ತ ಆಡಳಿತ ವ್ಯವಸ್ಥೆಯಲ್ಲಿ ಸಹಜವಾಗಿಯೇ ಇರುವ ಅನಮ್ಯತೆ ಹಾಗೂ ಅತಿ ಸೂತ್ರನಿಷ್ಠತೆಯನ್ನು ಮೀರಲು ನಮ್ಮ ಕರಡು ಸಂವಿಧಾನವು ಹಲವು ಹೊಸ ಮಾರ್ಗಗಳನ್ನು ಅನುಸರಿಸಿದೆ ಮತ್ತು ಈ ಮಾರ್ಗಗಳು ಈ ಸಂವಿಧಾನಕ್ಕೇ ವಿಶಿಷ್ಟವಾದುದಾಗಿವೆ ಮತ್ತು ಇವನ್ನು ನೀವು ಬೇರೆ ಯಾವ ಸಂವಿಧಾನಗಳಲ್ಲಿಯೂ ಕಾಣಲಾರಿರಿ.

ಅವುಗಳಲ್ಲಿ ಮೊದಲನೆಯದೆಂದರೆ, ಪ್ರಾಂತೀಯ ವಿಷಯಗಳಲ್ಲಿ ಶಾಸನಗಳನ್ನು ಮಾಡುವ ಪ್ರತ್ಯೇಕ ಅಧಿಕಾರವನ್ನು ಸಂಸತ್ತಿಗೆ ನೀಡಿರುವುದು. ನಾನಿಲ್ಲಿ ೨೨೬, ೨೨೭ ಮತ್ತು ೨೨೯ನೆಯ ಅನುಚ್ಛೇದಗಳನ್ನು ಕುರಿತು ಮಾತನಾಡುತ್ತಿದ್ದೇನೆ. ಒಂದು ವಿಷಯವು ರಾಜ್ಯಗಳ ಪಟ್ಟಿಯಲ್ಲಿದ್ದರೂ, ಆ ವಿಷಯವು ರಾಷ್ಟ್ರೀಯ ಹಿತಾಸಕ್ತಿಗೆ ಬಾಧಕವಾದಾಗ, ಸೂಕ್ತ ಶಾಸನವನ್ನು ರಚಿಸುವ ಅಧಿಕಾರವನ್ನು ೨೨೬ನೆಯ ಅನುಚ್ಛೇದವು ಸಂಸತ್ತಿಗೆ ನೀಡುತ್ತದೆ. ಆದರೆ ಇದನ್ನು ಮಾಡುವುದಕ್ಕೆ ಸರ್ಕಾರಕ್ಕೆ ಸಂಸತ್ತಿನಲ್ಲಿ ಮೂರನೆಯ ಎರಡು ಭಾಗದಷ್ಟು ಸದಸ್ಯರ ಬಹುಮತವು ಬೇಕಾಗುತ್ತದೆ. ೨೨೭ನೆಯ ಅನುಚ್ಛೇದವು ರಾಷ್ಟ್ರೀಯ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಇಂತಹುದೇ ಅಧಿಕಾರವನ್ನು ಸಂಸತ್ತಿಗೆ ನೀಡುತ್ತದೆ. ರಾಜ್ಯಗಳು ಸಮ್ಮತಿಸಿದರೆ, ಸಂಸತ್ತಿಗೆ ಇಂತಹುದೇ ಅಧಿಕಾರವನ್ನು ತನ್ನ ಕೈಗೆತ್ತಿಕೊಳ್ಳಲು ೨೨೯ನೆಯ ಅನುಚ್ಛೇದವು ಅನುವು ಮಾಡಿಕೊಡುತ್ತದೆ. ಈ ಮೂರು ಅನುಚ್ಛೇದಗಳಲ್ಲಿ ಕೊನೆಯದು ಆಸ್ಟ್ರೇಲಿಯಾದ ಸಂವಿಧಾನದಲ್ಲಿ ಇದ್ದರೂ, ಉಳಿದೆರಡು ವಿಧಿಗಳು ಭಾರತದ ಸಂವಿಧಾನಕ್ಕೇ ವಿಶಿಷ್ಟವಾದವುಗಳಾಗುತ್ತವೆ.

ಅನಮ್ಯತೆ ಹಾಗೂ ಅತಿ ಸೂತ್ರನಿಷ್ಠತೆಯನ್ನು ಮೀರಲು ಅನುಸರಿಸಿರುವ ಎರಡನೆಯ ಮಾರ್ಗವೇಂದರೆ, ಸಂವಿಧಾನದ ಅನುಚ್ಛೇದಗಳನ್ನು ತಿದ್ದುಪಡಿ ಮಾಡಲು ಅಳವಡಿಸಿರುವ ಸೌಲಭ್ಯ. ತಿದ್ದುಪಡಿ ಮಾಡಬಹುದಾದ ವಿಧಿಗಳನ್ನು ಕರಡು ಸಂವಿಧಾನದಲ್ಲಿ ಎರಡು ಪ್ರಕಾರದವುಗಳನ್ನಾಗಿ ಮಾಡಲಾಗಿದೆ. ಮೊದಲನೆಯ

ಗುಂಪಿನಲ್ಲಿರುವ ಅನುಚ್ಛೇದಗಳು (೧) ಶಾಸನ ಮಾಡುವ ಅಧಿಕಾರವನ್ನು ಕೇಂದ್ರ ಹಾಗೂ ರಾಜ್ಯಗಳ ನಡುವೆ ಹಂಚಲ್ಪಟ್ಟಿರುವಂತಹ ವಿಷಯಗಳು, (೨) ಸಂಸತ್ತಿನಲ್ಲಿ ರಾಜ್ಯಗಳಿಗಿರುವ ಪ್ರಾತಿನಿಧ್ಯ, ಮತ್ತು (೩) ನ್ಯಾಯಾಲಯಗಳಿಗಿರುವ ಅಧಿಕಾರ – ಇವನ್ನು ಕುರಿತವಾದವುಗಳಾಗಿರುತ್ತವೆ. ಉಳಿದೆಲ್ಲ ಅನುಚ್ಛೇದಗಳೂ ಎರಡನೆಯ ಗುಂಪಿನಲ್ಲಿ ಸೇರುತ್ತವೆ. ಎರಡನೆಯ ಗುಂಪಿನಲ್ಲಿರುವ ಅನುಚ್ಛೇದಗಳು ಸಂವಿಧಾನದಲ್ಲಿರುವ ಬಹಳಷ್ಟು ಅನುಚ್ಛೇದಗಳನ್ನು ಒಳಗೊಳ್ಳುತ್ತದೆ ಮತ್ತು ಅವುಗಳನ್ನು ತಿದ್ದುಪಡಿ ಮಾಡಲು, ಸಂಸತ್ತಿಗೆ ಎರಡೂ ಸದನಗಳಲ್ಲಿ ಹಾಜರಿರುವ ಒಟ್ಟು ಸದಸ್ಯರಲ್ಲಿ ಮೂರನೆಯ ಎರಡರಷ್ಟು ಸದಸ್ಯರ ಬೆಂಬಲವು ಅಗತ್ಯವಾಗಿರುತ್ತದೆ. ಈ ತಿದ್ದುಪಡಿಗಳಿಗೆ ರಾಜ್ಯಗಳ ಅನುಸಮರ್ಥನೆ ಅಗತ್ಯವಿರುವುದಿಲ್ಲ. ಮೊದಲನೆಯ ಗುಂಪಿನಲ್ಲಿ ಸೇರಿಸಲ್ಪಟ್ಟಿರುವ ಅನುಚ್ಛೇದಗಳನ್ನು ತಿದ್ದುಪಡಿ ಮಾಡಲು ಮಾತ್ರ, ಹೆಚ್ಚುವರಿ ರಕ್ಷಣಾತಂತ್ರವಾಗಿ, ರಾಜ್ಯಗಳ ಅನುಸಮರ್ಥನೆಯನ್ನು ಕಡ್ಡಾಯ ಮಾಡಲಾಗಿದೆ.

ಈ ಕಾರಣಗಳಿಂದಾಗಿ ಭಾರತದ ಸಂಯುಕ್ತ ಆಡಳಿತ ವ್ಯವಸ್ಥೆಯು ಅನಮ್ಯತೆ ಹಾಗೂ ಅತಿಯಾದ ಸೂತ್ರನಿಷ್ಠತೆಯಿಂದ ನರಳುವುದಿಲ್ಲವೆಂದು ಯಾರು ಬೇಕಾದರೂ ಹೇಳಬಹುದು. ನಮ್ಯತೆಯೇ ನಮ್ಮ ಸಂವಿಧಾನದ ವಿಶಿಷ್ಟ ಗುಣವಾಗಲಿದೆ.

ಇತರ ಸಂಯುಕ್ತ ಆಡಳಿತ ವ್ಯವಸ್ಥೆಗಿಂತ ಭಾರತಕ್ಕೆ ರೂಪಿಸಿರುವ ವ್ಯವಸ್ಥೆಯು ಹೇಗೆ ಭಿನ್ನವಾಗಿದೆ ಎಂಬುದನ್ನು ಅದರ ಮತ್ತೊಂದು ವಿಶೇಷ ಲಕ್ಷಣದಿಂದ ಅರಿಯಬಹುದು. ಸಂಯುಕ್ತ ವ್ಯವಸ್ಥೆಯಲ್ಲಿ ಆಡಳಿತದಲ್ಲಿ ಪ್ರತ್ಯೇಕವಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಕ್ಷೇತ್ರಗಳಲ್ಲಿ ಎರಡೂ ಆಡಳಿತ ವ್ಯವಸ್ಥೆಗಳಿಗೆ ಪ್ರತ್ಯೇಕವಾದ ಅಧಿಕಾರವನ್ನು ನೀಡಿರುವುದರಿಂದ ಶಾಸನಗಳಲ್ಲಿ, ಆಡಳಿತದಲ್ಲಿ ಮತ್ತು ನ್ಯಾಯಾಂಗದಿಂದ ದೊರೆಯುವ ರಕ್ಷಣೆಯ ವಿಷಯದಲ್ಲಿ ಇಕ್ಕಟ್ಟಿನ ಪರಿಸ್ಥಿತಿಯು ಉದ್ಭವಿಸಬಹುದು. ಆದರೆ ಈ ವೈವಿಧ್ಯವು ಕೆಲ ಮಟ್ಟಿಗೆ ಬಾಧಕವೇನೂ ಆಗುವುದಿಲ್ಲ. ಸ್ಥಳೀಯ ಅಗತ್ಯ ಹಾಗೂ ಸ್ಥಳೀಯ ಸಂದರ್ಭಗಳಿಗೆ ತಕ್ಕಂತೆ ಆಡಳಿತವನ್ನು ನಡೆಸಲು ಈ ವೈವಿಧ್ಯವು ಸ್ವಾಗತಾರ್ಹವಾಗಬಹುದು. ಆದರೆ ಇದು ಒಂದು ಮಿತಿಯನ್ನು ಮೀರಿದಾಗ ಸಮಸ್ಯೆಗಳಿಗೆ ದಾರಿಯನ್ನು ಮಾಡಿಕೊಡುತ್ತದೆ ಮತ್ತು ಕೆಲವು ಸಂಯುಕ್ತ ವ್ಯವಸ್ಥೆಯಲ್ಲಿ ಹಾಗೆ ಮಾಡಿದೆ ಕೂಡ. ವಿವಾಹ, ಆಸ್ತಿಯ ಉತ್ತರಾಧಿಕಾರತ್ವ, ಕುಟುಂಬದ ಸಂಬಂಧಗಳು, ಒಪ್ಪಂದಗಳು, ಖಾಸಗಿ ತಕ್ಸೀರುಗಳು, ಅಪರಾಧಗಳು, ತೂಕ ಮತ್ತು ಅಳತೆಗೆ ಸಂಬಂಧಿಸಿದ ವಿಷಯಗಳು, ಬಿಲ್ ಮತ್ತು ಚೆಕ್‌ಗಳು, ಬ್ಯಾಂಕಿಂಗ್ ಮತ್ತು ವಾಣಿಜ್ಯ, ನ್ಯಾಯವನ್ನು ಪಡೆಯಲು ಇರುವ ಮಾರ್ಗಗಳು, ಮತ್ತು ಆಡಳಿತದಲ್ಲಿರಬೇಕಾದ ಗುಣಮಟ್ಟ ಹಾಗೂ ವಿಧಾನಗಳು – ಈ ಮೊದಲಾದ ವಿಷಯಗಳಲ್ಲಿ ಮೇಲೆ ಹೇಳಿದ ವೈವಿಧ್ಯವು ಉಂಟುಮಾಡಬಹುದಾದ ಗೊಂದಲಗಳನ್ನು ಊಹಿಸಿಕೊಳ್ಳುವುದೂ ಅಸಾಧ್ಯವಾಗಿರುತ್ತದೆ. ಇಂತಹ ಪರಿಸ್ಥಿತಿಯು ರಾಜ್ಯವನ್ನು ದುರ್ಬಲಗೊಳಿಸುವುದಷ್ಟೇ ಅಲ್ಲದೆ, ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಹೋಗುವ ನಾಗರಿಕನಿಗೆ ಸಹಿಸಲು ಅಸಾಧ್ಯವಾಗಿ ಪರಿಣಮಿಸುತ್ತದೆ. ಒಂದು ರಾಜ್ಯದಲ್ಲಿ ಕಾನೂನಿನ ದೃಷ್ಟಿಯಿಂದ ಸಮ್ಮತವಾಗಿರುವಂತಹ ವಿಷಯಗಳು ಇನ್ನೊಂದು ರಾಜ್ಯದಲ್ಲಿ ಕಾನೂನಿಗೆ ವಿರುದ್ಧವಾಗಿರುತ್ತವೆ. ಕರಡು ಸಂವಿಧಾನವು ಈ ಸಮಸ್ಯೆಗಳನ್ನು ನಿವಾರಿಸಲು ಹಲವು ಮಾರ್ಗೋಪಾಯಗಳನ್ನು ರೂಪಿಸಿದೆ. ಇವುಗಳಿಂದಾಗಿ ಭಾರತವು ಸಂಯುಕ್ತ ಆಡಳಿತ ವ್ಯವಸ್ಥೆಯನ್ನು ಹೊಂದಿರುತ್ತದೆ ಮತ್ತು ಅದೇ ಸಮಯದಲ್ಲಿ ದೇಶದ ಏಕತೆಯನ್ನು ಕಾಪಾಡುವಂತಹ ಕೆಲವು ಮೂಲಭೂತ ವಿಷಯಗಳಲ್ಲಿ ಸಮಾನತೆಯನ್ನು ನೀಡುತ್ತದೆ. ಈ ನಿಟ್ಟಿನಲ್ಲಿ ಕರಡು ಸಂವಿಧಾನವು ಅಳವಡಿಸಿಕೊಂಡಿರುವ ಮಾರ್ಗಗಳು ಮೂರು. ಅವುಗಳು–

(೧) ಏಕಾತ್ಮಕವಾದ ನ್ಯಾಯಾಂಗ,

(೨) ಮೂಲಭೂತ ಕಾನೂನುಗಳಲ್ಲಿ – ಸಿವಿಲ್ ಹಾಗೂ ಅಪರಾಧಿಕ ಕಾನೂನುಗಳಲ್ಲಿ – ಏಕರೂಪತೆ, ಮತ್ತು

(೩) ಪ್ರಮುಖವಾದ ಹುದ್ದೆಗಳಿಗೆ ಅಖಿಲ ಭಾರತ ಮಟ್ಟದಲ್ಲಿ ಒಂದೇ ಸಿವಿಲ್ ಸರ್ವೀಸ್ ವ್ಯವಸ್ಥೆ.

ನಾನು ಹೇಳಿದ ಹಾಗೆ, ನ್ಯಾಯಾಂಗದ ಆಡಳಿತದಲ್ಲಿ, ನ್ಯಾಯಿಕ ಸಂಹಿತೆಗಳಲ್ಲಿ ಮತ್ತು ಸಿವಿಲ್ ಸೇವೆಗಳಲ್ಲಿ ಇಕ್ಕಟ್ಟಿನ ಪರಿಸ್ಥಿತಿಯು – ಇವು ಎರಡು ವ್ಯವಸ್ಥೆಗಳಿರುವ ಸಂಯುಕ್ತ ಆಡಳಿತ ವ್ಯವಸ್ಥೆಯಲ್ಲಿ ಸಹಜವಾಗಿಯೇ ಉದ್ಭವವಾಗುತ್ತದೆ. ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಸಂಯುಕ್ತ ವ್ಯವಸ್ಥೆಯ ನ್ಯಾಯಾಂಗ ಮತ್ತು ರಾಜ್ಯಗಳ ನ್ಯಾಯಾಂಗ ಆಡಳಿತಗಳು ಪ್ರತ್ಯೇಕ ಹಾಗೂ ಸ್ವತಂತ್ರವಾಗಿವೆ. ಭಾರತದ ಉದ್ದೇಶಿತ ಸಂಯುಕ್ತ ವ್ಯವಸ್ಥೆಯಲ್ಲಿ ಎರಡು ಮಟ್ಟದ ಆಡಳಿತ ವ್ಯವಸ್ಥೆಯಿದ್ದರೂ, ನ್ಯಾಯಾಂಗದ ಏಕಾತ್ಮಕತೆಯನ್ನು ಕಾಯ್ದುಕೊಳ್ಳಲಾಗಿದೆ. ರಾಜ್ಯಗಳ ಉಚ್ಚನ್ಯಾಯಾಲಯಗಳು ಮತ್ತು ರಾಷ್ಟ್ರದ ಸರ್ವೋಚ್ಚನ್ಯಾಯಾಲವು ಒಂದೇ ನ್ಯಾಯವ್ಯವಸ್ಥೆಯ ಅಂಗಗಳಾಗಿದ್ದು, ಅವು ಸಾಂವಿಧಾನಿಕ, ಸಿವಿಲ್ ಮತ್ತು ಅಪರಾಧಿಕ ಪ್ರಸಂಗಗಳಲ್ಲಿ ಪರಿಹಾರವನ್ನು ನೀಡುವ ವ್ಯಾಪ್ತಿಯನ್ನು ಹೊಂದಿರುತ್ತವೆ. ಪರಿಹಾರವನ್ನು ನೀಡುವ ದಿಕ್ಕಿನಲ್ಲಿ ಉಂಟಾಗಬಹುದಾದ ಸಮಸ್ಯೆಗಳನ್ನು ತಡೆಯುವ ಉದ್ದೇಶದಿಂದ ಈ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ಈ ದೃಷ್ಟಿಯಿಂದ ನೋಡಿದಾಗ ನಮ್ಮ ಸಂವಿಧಾನಕ್ಕೆ ಹತ್ತಿರಕ್ಕೆ ಬರಬಹುದಾದ ಸಂವಿಧಾನವೆಂದರೆ ಕೆನಡಾ ದೇಶದ ಸಂವಿಧಾನ ಮತ್ತು ಸುಮಾರಾಗಿ ಹೋಲುವ ಸಂವಿಧಾನ ಆಸ್ಟ್ರೇಲಿಯಾ ದೇಶದ್ದು.

ಸಿವಿಲ್ ಮತ್ತು ಕಾರ್ಪೊರೇಟ್ ಕಾನೂನುಗಳಿಂದ ಅವುಗಳಲ್ಲಿರುವ ಭೇದಗಳನ್ನು ದೂರಮಾಡಲು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಸಿವಿಲ್ ಪ್ರಕ್ರಿಯಾ ಸಂಹಿತೆ, ದಂಡ ಸಂಹಿತೆ, ದಂಡಪ್ರಕ್ರಿಯಾ ಸಂಹಿತೆ, ಸಾಕ್ಷ್ಯ ಅಧಿನಿಯಮ, ಆಸ್ತಿ ವರ್ಗಾವಣೆ ಅಧಿನಿಯಮ, ವಿವಾಹ ವಿಚ್ಛೇದನಾ ಅಧಿನಿಯಮ, ಆಸ್ತಿ ಉತ್ತರಾಧಿಕಾರತ್ವ ಅಧಿನಿಯಮ, ಮೊದಲಾದ ಸಂಹಿತೆಗಳು ಮತ್ತು ಅಧಿನಿಯಮಗಳನ್ನು ಸಮವರ್ತಿ ಪಟ್ಟಿಯಲ್ಲಿ ಸೇರಿಸಲಾಗಿದೆ. ಇದರಿಂದ ಅಗತ್ಯವಾದ ಏಕರೂಪತೆಯನ್ನು ಇಡೀ ರಾಷ್ಟ್ರದಲ್ಲಿ, ಅದರ ಸಂಯುಕ್ತ ಆಡಳಿತ ವ್ಯವಸ್ಥೆಗೆ ಧಕ್ಕೆ ಬಾರದ ರೀತಿಯಲ್ಲಿ, ಮುಂದುವರಿಸಿಕೊಂಡು ಹೋಗುವುದು ಸಾಧ್ಯವಾಗುತ್ತದೆ.

ಸಂಯುಕ್ತ ಆಡಳಿತ ವ್ಯವಸ್ಥೆಯಲ್ಲಿರುವ ಎರಡು ಮಟ್ಟದ ಆಡಳಿತ ವ್ಯವಸ್ಥೆಯು ಎಲ್ಲ ಸಂಯುಕ್ತ ವ್ಯವಸ್ಥೆಗಳಲ್ಲಿಯೂ ಇರುತ್ತದೆ. ಎಲ್ಲ ಸಂಯುಕ್ತ ಆಡಳಿತ ವ್ಯವಸ್ಥೆಗಳಲ್ಲಿಯೂ ಸಿವಿಲ್ ಸೇವೆಯು ರಾಜ್ಯ ಹಾಗೂ ಕೇಂದ್ರಗಳ ಸಿವಿಲ್ ಸೇವೆಗಳೆಂಬ ಎರಡು ಪ್ರಕಾರಗಳಲ್ಲಿ ಇರುತ್ತವೆ. ಭಾರತೀಯ ಸಂಯುಕ್ತ ವ್ಯವಸ್ಥೆಯಲ್ಲಿರುವ ಎರಡು ಆಡಳಿತ ವ್ಯವಸ್ಥೆಗಳಿಗಾಗಿ ಎರಡು ಸಿವಿಲ್ ಸೇವೆಗಳು ಇದ್ದರೂ ಇಲ್ಲಿ ಒಂದು ಅಪವಾದವಿದೆ. ಆಡಳಿತದ ಮಟ್ಟವನ್ನು ಕಾಪಾಡಿಕೊಂಡು ಹೋಗುವ ದೃಷ್ಟಿಯಿಂದ ಮುಖ್ಯವಾದವು ಎನ್ನಬಹುದಾದ ಕೆಲವೊಂದು ಸ್ಥಾನಗಳು ಎಲ್ಲ ದೇಶಗಳಲ್ಲಿಯೂ ಇರುತ್ತವೆ ಎಂಬುದನ್ನು ಮಾನ್ಯ ಮಾಡಲಾಗಿದೆ. ಅತಿ ವಿಸ್ತಾರವಾದ ಹಾಗೂ ಸಂಕೀರ್ಣವಾದ ಆಡಳಿತ ವ್ಯವಸ್ಥೆಯಲ್ಲಿ ಅಂತಹ ಅಧಿಕಾರ ಸ್ಥಾನಗಳು ಯಾವುವು ಎಂದು ನಿರ್ದಿಷ್ಟವಾಗಿ ಗುರುತಿಸುವುದು ಸುಲಭವಲ್ಲ. ಆದರೆ ಅಂತಹ ಸ್ಥಾನಗಳಿಗೆ ನೇಮಕವಾದ ಸಿವಿಲ್ ಅಧಿಕಾರಿಗಳ ಸಾಮರ್ಥ್ಯದ ಮೇಲೆ ಆಡಳಿತದ ಗುಣಮಟ್ಟವು ನಿಂತಿರುತ್ತದೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಅದೃಷ್ಟವಶಾತ್, ಹಿಂದೆ ಇಡೀ ದೇಶಕ್ಕೆ ಇದ್ದ ಒಂದೇ ಆಡಳಿತ ವ್ಯವಸ್ಥೆಯು ದತ್ತವಾಗಿ ನಮಗೆ ಬಂದಿದೆ ಮತ್ತು ಯಾವ ಸ್ಥಾನಗಳು ಆಡಳಿತದ ದೃಷ್ಟಿಯಿಂದ ಮುಖ್ಯವಾದವು ಎಂಬುದನ್ನು ನಾವು ಅರಿತಿದ್ದೇವೆ. ಸಂವಿಧಾನವು ರಾಜ್ಯಗಳಿಗೆ ತಮ್ಮ ಆಡಳಿತದ ದೃಷ್ಟಿಯಿಂದ ಸಿವಿಲ್ ಸೇವಾ ಅಧಿಕಾರಿಗಳನ್ನು ನೇಮಿಸಿಕೊಳ್ಳಬಹುದಾದ ಅವಕಾಶಕ್ಕೆ ಅಡಚಣೆಯನ್ನುಂಟುಮಾಡದೆ, ಸಮಾನ ವಿದ್ಯಾರ್ಹತೆ, ಸಮಾನ ವೇತನ ಶ್ರೇಣಿಗಳನ್ನು ಹೊಂದಿರುವ ಸಿವಿಲ್ ಸೇವಾ ಅಧಿಕಾರಿಗಳನ್ನು ಅಖಿಲ ಭಾರತ ಮಟ್ಟದಲ್ಲಿ ನೇಮಿಸುವ ವ್ಯವಸ್ಥೆಗೆ ಅವಕಾಶವನ್ನು ಮಾಡಿಕೊಡುತ್ತದೆ. ಈ ಅಖಿಲ ಭಾರತ ಸಿವಿಲ್ ಸೇವಾ ಅಧಿಕಾರಿಗಳನ್ನು ಮಾತ್ರ ರಾಷ್ಟ್ರದ ಎಲ್ಲ ಸೂಕ್ಷ್ಮ ಹಾಗೂ ಮುಖ್ಯವಾದ ಸ್ಥಾನಗಳಿಗೆ ನೇಮಕ ಮಾಡಬೇಕು.

ಇವು ಉದ್ದೇಶಿತ ಸಂಯುಕ್ತ ಆಡಳಿತ ವ್ಯವಸ್ಥೆಯಲ್ಲಿ ಇರುವ ವೈಶಿಷ್ಟ್ಯಗಳು. ನಾನೀಗ ಈ ಕರಡು ಸಂವಿಧಾನವನ್ನು ಕುರಿತು ಟೀಕಾಕಾರರು ಏನನ್ನು ಹೇಳಿದ್ದಾರೆ ಎಂಬುದನ್ನು ಕುರಿತು ಮಾತನಾಡುತ್ತೇನೆ.

ಈ ಕರಡು ಸಂವಿಧಾನದಲ್ಲಿ ಹೊಸದೇನೂ ಇಲ್ಲ, ಇದರಲ್ಲಿರುವ ಅರ್ಧದಷ್ಟು ಭಾಗವನ್ನು ೧೯೩೫ರ

ಭಾರತ ಸರಕಾರದ ಅಧಿನಿಯಮದಿಂದಲೂ, ಮತ್ತು ಉಳಿದ ಭಾಗವನ್ನು ಇತರ ದೇಶಗಳ ಸಂವಿಧಾನದಿಂದಲೂ ಎರವಲನ್ನು ತೆಗೆದುಕೊಳ್ಳಲಾಗಿದೆ ಎನ್ನಲಾಗಿದೆ. ಆದ್ದರಿಂದ ಇದರಲ್ಲಿ ತನ್ನದು ಎಂದು ಹೇಳಿಕೊಳ್ಳುವಂತಹದೇನೂ ಇಲ್ಲ.

ಈ ಆಪಾದನೆಯನ್ನು ಕುರಿತು ಪ್ರಪಂಚದ ಇತಿಹಾಸದಲ್ಲಿನ ಈ ದಿನಗಳಲ್ಲಿ ರಚಿಸಲಾಗುವ ಸಂವಿಧಾನದಲ್ಲಿ ಏನಾದರೂ ಹೊಸತನ, ಅಸ್ಮಿತೆಯೆಂಬುದು ಇರುವುದು ಸಾಧ್ಯವೇ ಎಂಬ ಪ್ರಶ್ನೆಯನ್ನು ನಾವು ಕೇಳಿಕೊಳ್ಳಬೇಕು. ಪ್ರಪಂಚದಲ್ಲಿ ಪ್ರಪ್ರಥಮವಾದ ಸಂವಿಧಾನವು ಹುಟ್ಟಿ ನೂರು ವರ್ಷಗಳು ಕಳೆದಿವೆ. ಅದನ್ನು ಬರಹಕ್ಕೆ ಇಳಿಸಿ, ಹಲವು ದೇಶಗಳು ತಮ್ಮ ಸಂವಿಧಾನವನ್ನು ರೂಪಿಸಿಕೊಂಡಿವೆ. ಸಂವಿಧಾನವೊಂದು ಹೊಂದಿರಬೇಕಾದ ವ್ಯಾಪ್ತಿಯನ್ನು ಈಗಾಗಲೇ ಇಂತಿಷ್ಟು ಎಂದು ನಿರ್ಧರಿಸಲಾಗಿದೆ. ಸಂವಿಧಾನದ ಮೂಲಭೂತ ಅಂಶಗಳು ಯಾವುವು ಎಂಬುದನ್ನೂ ಈಗಾಗಲೇ ಅಂಗೀಕರಿಸಲಾಗಿದೆ. ವಸ್ತುಸ್ಥಿತಿ ಹೀಗಿರುವಾಗ, ಎಲ್ಲ ಸಂವಿಧಾನಗಳ ಮೂಲಸ್ವರೂಪವೂ ಒಂದೇ ರೀತಿಯಲ್ಲಿ ಇರುತ್ತವೆ. ಇಂದು ಹೊಸದಾಗಿ ಹುಟ್ಟುತ್ತಿರುವ ಸಂವಿಧಾನವೊಂದರಲ್ಲಿ ಇರಬಹುದಾದ ಹೊಸ ಅಂಶಗಳೆಂದರೆ, ಸಾಮಾನ್ಯ ಸಂವಿಧಾನದಲ್ಲಿ ಇರಬಹುದಾದ ಕುಂದುಕೊರತೆಗಳನ್ನು ಸರಿಪಡಿಸುವಂತಹ, ಮತ್ತು ಆ ದೇಶದ ಅಗತ್ಯಗಳನ್ನು ಪೂರೈಸಲು ಬೇಕಾಗಿರುವಂತಹ ಕೆಲವು ಅಂಶಗಳನ್ನು ಸೇರಿಸುವುದು. ಇದನ್ನು ಸಂಪೂರ್ಣವಾಗಿ ಅಧ್ಯಯನ ಮಾಡದಿರುವುದೇ ಈ ಕರಡು ಸಂವಿಧಾನವು ಇತರ ದೇಶಗಳ ಸಂವಿಧಾನದ ನಕಲು ಎಂದು ಹೇಳುವುದಕ್ಕೆ ಕಾರಣವಾಗಿದೆ. ನಾನು ಈಗಾಗಲೇ ಈ ಕರಡು ಸಂವಿಧಾನದಲ್ಲಿರುವ ನಾವೀನ್ಯದ ಬಗ್ಗೆ ಹೇಳಿದ್ದೇನೆ. ಇದನ್ನು ಹಾಗೂ ಇತರ ದೇಶಗಳ ಸಂವಿಧಾನವನ್ನು ವಸ್ತುನಿಷ್ಠವಾಗಿ ಅಧ್ಯಯನ ಮಾಡುವವರು ಈ ಕರಡು ಸಂವಿಧಾನವು, ಟೀಕಾಕಾರರು ಆಪಾದಿಸಿರುವಂತೆ ಇತರ ದೇಶಗಳ ಸಂವಿಧಾನದ ಅಂಧಾನುಕರಣೆಯಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತಾರೆ ಎಂಬ ಭರವಸೆ ನನಗಿದೆ.

ಕರಡು ಸಂವಿಧಾನವು ಬಹಳಷ್ಟು ವಿಧಿಗಳನ್ನು ೧೯೩೫ರ ಭಾರತ ಸರಕಾರದ ಅಧಿನಿಯಮದಿಂದ ತೆಗೆದು ತನ್ನಲ್ಲಿ ಅಳವಡಿಸಿಕೊಂಡಿದೆ ಎಂಬ ಆಪಾದನೆಯ ವಿರುದ್ಧ ನಾನು ನಮ್ಮನ್ನು ಸಮರ್ಥಿಸಿಕೊಳ್ಳುವ ಪ್ರಯತ್ನವನ್ನು ಮಾಡುವುದಿಲ್ಲ. ಬೇರೆಯದರಿಂದ ತೆಗೆದುಕೊಳ್ಳುವುದರಲ್ಲಿ ನಾಚಿಕೆ ಪಟ್ಟುಕೊಳ್ಳಬೇಕಾದುದೇನೂ ಇಲ್ಲ. ಇದರಲ್ಲಿ ಕೃತಿಚೌರ್ಯದ ಪ್ರಶ್ನೆ ಉದ್ಭವಿಸುವುದಿಲ್ಲ. ಸಂವಿಧಾನದ ಮೂಲಾಂಶಗಳನ್ನು ಯಾರೂ ತಮ್ಮ ಏಕಸ್ವಾಮ್ಯವನ್ನಾಗಿ ಮಾಡಿಕೊಂಡಿಲ್ಲ. ನಾವು ಈ ಅಧಿನಿಯಮದಿಂದ ತೆಗೆದುಕೊಂಡಿರುವ ಅಂಶಗಳು ಕೇವಲ ಆಡಳಿತಕ್ಕೆ ಸಂಬಂಧಿಸಿದುದಾಗಿವೆ. ಸಂವಿಧಾನದಲ್ಲಿ ಆಡಳಿತಕ್ಕೆ ಸಂಬಂಧಪಟ್ಟ ಅಂಶಗಳು ಇರಬೇಕಾದ ಆವಶ್ಯಕತೆಯಿಲ್ಲವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದನ್ನು ತನ್ನ ಕರಡು ಸಂವಿಧಾನದಲ್ಲಿ ಸೇರಿಸದೆ ಇರಲು ಸಮಿತಿಯು ಪ್ರಯತ್ನಿಸಬಹುದಿತ್ತು ಎಂಬ ಇಚ್ಛೆ ನನಗೆ ಇತ್ತು. ಆದರೆ, ಹೀಗೆ ಮಾಡುವುದಕ್ಕೆ ಸಮರ್ಥನೆಯಿದೆ. ಗ್ರೀಸ್‌ನ ಇತಿಹಾಸಕಾರ ಗ್ರೋಟ್ ಹೀಗೆ ಹೇಳುತ್ತಾನೆ:

> "ಸಾಂವಿಧಾನಿಕ ನೈತಿಕತೆಯ ಪ್ರಸರಣವು ಕೇವಲ ಬಹುಸಂಖ್ಯಾತರಿಗೆ ಸೀಮಿತಗೊಳ್ಳದೆ ಎಲ್ಲರನ್ನೂ ಒಳಗೊಳ್ಳುವಂತೆ ಮಾಡುವುದು ಸ್ವಾತಂತ್ರ್ಯ ಮತ್ತು ಶಾಂತಿಯನ್ನು ಬಯಸುವ ಸರಕಾರಕ್ಕೆ ಇರುವ ಅನಿವಾರ್ಯ ನಿಯಮ; ಏಕೆಂದರೆ, ತಾವು ಅಧಿಕಾರದ ಬಲವನ್ನು ಪಡೆದುಕೊಳ್ಳುವ ಮಟ್ಟಕ್ಕೆ ಏರದೇ ಇದ್ದರೂ, ತಮ್ಮದೇ ಶಕ್ತಿಯನ್ನು ಹೊಂದಿರುವ, ಛಲವನ್ನು ಮೈಗೂಡಿಸಿಕೊಂಡಿರುವ ಅಲ್ಪಸಂಖ್ಯಾತ ಜನತೆ ಸ್ವತಂತ್ರ ಸಂಸ್ಥೆಗಳ ಕಾರ್ಯನಿರ್ವಹಣೆಯನ್ನು ಕಾರ್ಯಸಾಧ್ಯವಲ್ಲದ ಸ್ಥಿತಿಗೆ ಇಳಿಸಬಹುದು."

ಗ್ರೋಟ್‌ನ ಪ್ರಕಾರ ಸಾಂವಿಧಾನಿಕ ನೈತಿಕತೆಯ ಅರ್ಥವ್ಯಾಪ್ತಿ ಹೀಗಿದೆ: "ಸಂವಿಧಾನದ ಸ್ವರೂಪಕ್ಕೆ ಪರಮ ಗೌರವವನ್ನು ಹೊಂದಿರುವುದು, ವಾಕ್‌ಸ್ವಾತಂತ್ರ್ಯ ಹಾಗೂ ಕೆಲವೊಂದು ನ್ಯಾಯಿಕ ನಿಯಂತ್ರಣಗಳಿಗೆ ಒಳಪಟ್ಟು ಸಂವಿಧಾನದ ಈ ಸ್ವರೂಪಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಕ್ಕೆ ವಿಧೇಯನಾಗಿರುವುದು

ಮತ್ತು ಹಾಗಿದ್ದರೂ, ಅಂತಹ ಅಧಿಕಾರದಲ್ಲಿರುವವರ ಸಾರ್ವಜನಿಕ ನಡವಳಿಕೆಗಳೆಲ್ಲವನ್ನೂ ಟೀಕಿಸುವುದು. ವಿವಿಧ ಪಕ್ಷಗಳ ನಡುವೆ ಅತಿಯಾದ ಕಹಿಭಾವನೆಗಳ ನಡುವೆಯೂ, ಪ್ರತಿಯೊಬ್ಬ ವ್ಯಕ್ತಿಯೂ ಸಂವಿಧಾನದ ಸ್ವರೂಪಗಳ ಬಗ್ಗೆ ತನ್ನ ಎದುರಾಳಿಯು ಹೊಂದಿರುವ ಪವಿತ್ರ ಭಾವನೆಯು ತನ್ನಲ್ಲಿರುವ ಅಂತಹ ಭಾವನೆಗಳಿಗೆ ಯಾವ ರೀತಿಯಲ್ಲಿಯೂ ಕಡಿಮೆಯದಲ್ಲವೆಂಬ ಅಚಲವಾದ ವಿಶ್ವಾಸವನ್ನು ತನ್ನ ಹೃದಯದಲ್ಲಿ ಹೊಂದಿರುವುದು ಆವಶ್ಯಕ.” (*ಕೇಳಿ, ಕೇಳಿ*).

ಪ್ರಜಾತಂತ್ರದ ಸಂವಿಧಾನವು ಶಾಂತಿಯುತವಾಗಿ ತನ್ನ ಕಾರ್ಯವನ್ನು ನಿರ್ವಹಿಸಲು ಸಾಂವಿಧಾನಿಕ ನೈತಿಕತೆಯು ಅಗತ್ಯವೆಂಬುದನ್ನು ಪ್ರತಿಯೊಬ್ಬರೂ ಒಪ್ಪಿಕೊಂಡರೂ, ಇದಕ್ಕೆ ಹಾಸುಹೊಕ್ಕಾಗಿರುವಂತಹ ಎರಡು ವಿಷಯಗಳನ್ನು ಸಾಮಾನ್ಯವಾಗಿ ಗುರುತಿಸಿಲ್ಲ. ಮೊದಲನೆಯದೆಂದರೆ, ಆಡಳಿತ ವ್ಯವಸ್ಥೆಯು ಸಂವಿಧಾನದ ಸ್ವರೂಪದೊಂದಿಗೆ ಬಹಳ ನಿಕಟವಾದ ಸಂಬಂಧವನ್ನು ಹೊಂದಿದೆ. ಆಡಳಿತ ವ್ಯವಸ್ಥೆಯ ಹಾಗೂ ಸಂವಿಧಾನದ ಸ್ವರೂಪಗಳ ನಡುವೆ ಅತ್ಯುತ್ತಮವಾದ ಹೊಂದಾಣಿಕೆಯಿರಬೇಕು. ಎರಡನೆಯದೆಂದರೆ, ಸಂವಿಧಾನದ ಸ್ವರೂಪವನ್ನು ಬದಲಿಸದೆ, ಆಡಳಿತ ವಿಧಾನವನ್ನು ಮಾತ್ರ ಬದಲಿಸಿ ಸುಲಭವಾಗಿ ಸಂವಿಧಾನವನ್ನು ಅಡ್ಡದಾರಿ ಹಿಡಿಯುವಂತೆ ಮಾಡಬಹುದು ಮತ್ತು ತನ್ಮೂಲಕ ಅದರ ಮೂಲ ಆಶಯಕ್ಕೆ ವಿರುದ್ಧವಾಗಿ ವರ್ತಿಸುವಂತೆ ಅದನ್ನು ಮಾಡಬಹುದು. ಇತಿಹಾಸಕಾರ ಗ್ರೋಟೆ ಹೇಳುವ ಸಾಂವಿಧಾನಿಕ ನೈತಿಕತೆಯು ಅತಿಯಾಯಿತು ಎಂದು ಜನತೆ ಭಾವಿಸಿದಾಗ, ಸಂವಿಧಾನದಲ್ಲಿ ಆಡಳಿತಾತ್ಮಕ ವಿಷಯಗಳನ್ನು ಕುರಿತ ಭಾಗವನ್ನು ಕೈಬಿಟ್ಟು, ಅದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುವ ಅವಕಾಶವನ್ನು ಶಾಸಕಾಂಗಕ್ಕೆ ಬಿಡುವ ಅಪಾಯದ ನಿರ್ಣಯವನ್ನು ತೆಗೆದುಕೊಳ್ಳಬಹುದು. ಸಾಂವಿಧಾನಿಕ ನೈತಿಕತೆಯ ಪ್ರಸರಣವನ್ನು ಹಾಗೆ ಭಾವಿಸಿಕೊಳ್ಳಲು ಸಾಧ್ಯವೇ ಎಂಬುದು ಇಲ್ಲಿರುವ ಪ್ರಶ್ನೆ. ಸಾಂವಿಧಾನಿಕ ನೈತಿಕತೆಯೆಂಬುದು ಸಹಜವಾದ ಮನೋಭಾವವಲ್ಲ. ಅದನ್ನು ರೂಢಿಸಿಕೊಳ್ಳಬೇಕು. ನಮ್ಮ ಜನರು ಅದನ್ನು ಇನ್ನೂ ಕಲಿಯಬೇಕಾಗಿದೆ ಎಂಬುದನ್ನು ನಾವು ಅರಿತುಕೊಳ್ಳಬೇಕು. ಭಾರತದ ಮಣ್ಣಿನಲ್ಲಿ ಪ್ರಜಾಪ್ರಭುತ್ವವು ಇನ್ನೂ ಆಳವಾಗಿ ತನ್ನ ಬೇರುಗಳನ್ನು ಬಿಟ್ಟಿಲ್ಲ, ಪ್ರಜಾಪ್ರಭುತ್ವವು ಈಗ ಈ ಮಣ್ಣಿನ ಮೇಲ್ಮೈಯಲ್ಲಿ ಮೊಳಕೆಯೊಡೆಯುತ್ತಿದೆ.

ಇಂತಹ ಪರಿಸ್ಥಿತಿಯಲ್ಲಿ ಆಡಳಿತದ ಸ್ವರೂಪವನ್ನು ನಿರ್ಣಯಿಸುವ ಹೊಣೆಯನ್ನು ಶಾಸಕಾಂಗಕ್ಕೆ ವಿಶ್ವಾಸದಿಂದ ಬಿಡುವುದು ವಿವೇಕದ ನಡೆಯಾಗುವುದಿಲ್ಲ. ಈ ಅಭಿಪ್ರಾಯವು ಸಂವಿಧಾನದಲ್ಲಿ ಆಡಳಿತಕ್ಕೆ ಸಂಬಂಧಪಟ್ಟ ಅಂಶಗಳನ್ನು ಸೇರಿಸುವುದಕ್ಕೆ ಇರುವ ಸಮರ್ಥನೆ.

ಕರಡು ಸಂವಿಧಾನದ ವಿರುದ್ಧ ಕೇಳಿಬಂದಿರುವ ಮತ್ತೊಂದು ಆಪಾದನೆಯೆಂದರೆ, ಅದರಲ್ಲಿ ಯಾವ ಭಾಗವೂ ಭಾರತದ ಪ್ರಾಚೀನ ಆಡಳಿತ ಪದ್ಧತಿಯನ್ನು ಬಿಂಬಿಸುವುದಿಲ್ಲ ಎಂಬುದು. ಹೊಸ ಸಂವಿಧಾನವನ್ನು ರಚಿಸಬೇಕಾದರೆ ಪ್ರಾಚೀನ ಹಿಂದೂ ಸರಕಾರಗಳ ಪದ್ಧತಿಯನ್ನು ಗಮನದಲ್ಲಿಟ್ಟುಕೊಂಡಿರಬೇಕಿತ್ತು; ಸಂವಿಧಾನವನ್ನು ರಚಿಸುವಾಗ ಪಾಶ್ಚಿಮಾತ್ಯರ ದೃಷ್ಟಿಯನ್ನು ಇಟ್ಟುಕೊಳ್ಳುವುದರ ಬದಲು ಗ್ರಾಮ ಹಾಗೂ ಜಿಲ್ಲಾ ಪಂಚಾಯತಿಗಳ ಅಡಿಪಾಯದ ಮೇಲೆ ಕಟ್ಟಬೇಕಾಗಿತ್ತು ಎಂಬುದು ಈ ಆಪಾದನೆಗಳ ಸಾರಾಂಶ. ಮತ್ತೆ ಕೆಲವರು ಇನ್ನೂ ಅತಿಯೆನ್ನಿಸಬಹುದಾದ ದೃಷ್ಟಿಕೋನವನ್ನು ಹೊಂದಿದ್ದಾರೆ. ಅವರಿಗೆ ಕೇಂದ್ರ ಸರ್ಕಾರವಾಗಲೀ, ಪ್ರಾಂತೀಯ ಸರ್ಕಾರವಾಗಲಿ ಇರುವುದು ಬೇಕಿಲ್ಲ. ಭಾರತದಲ್ಲಿ ಎಷ್ಟು ಹಳ್ಳಿಗಳಿವೆಯೋ ಅಷ್ಟು ಸರ್ಕಾರಗಳು ಹಳ್ಳಿಗಳ ಮಟ್ಟದಲ್ಲಿ ಇರಬೇಕು ಎಂಬುದು ಅವರ ಅಭಿಪ್ರಾಯ. ಹಳ್ಳಿಯ ಜನತೆಯ ಬಗ್ಗೆ ಭಾರತೀಯ ಶಿಕ್ಷಿತರ ಒಲವು ಕರುಣಾಜನಕವಲ್ಲದಿದ್ದರೂ, ಅಗಾಧವಾದುದು. (ನಗು). ಇದಕ್ಕೆ ಕಾರಣವೆಂದರೆ ‘ಗ್ರಾಮ ಪಂಚಾಯತಿಗಳು ಸ್ವಯಂ ಸಂಪೂರ್ಣವಾಗಿದ್ದು, ಅವು ಸಣ್ಣ ಸಣ್ಣ ಗಣರಾಜ್ಯವಾಗಿವೆ, ಅವುಗಳಿಗೆ ಹೊರಗಿನವರ ಸಹಾಯದ ಅಗತ್ಯವೇ ಇಲ್ಲದೆ ಅವು ತಮ್ಮ ಕಾಲಮೇಲೆ ತಾವು ಸ್ವತಂತ್ರವಾಗಿ ನಿಂತಿವೆ’ ಎಂದು ಈ ವ್ಯವಸ್ಥೆಯನ್ನು ಆಕಾಶಕ್ಕೆ ಏರಿಸಿದ ಮೆಟ್‌ಕಾಫ್ಲೆಯ ಪ್ರಶಂಸೆ. ಪ್ರತಿಯೊಂದೂ ತನ್ನದೇ ಆದ

ಸ್ವತಂತ್ರ ರಾಜ್ಯವೆಂಬಂತೆ ಕಾಣುವ ಈ ಗ್ರಾಮ ಸಮುದಾಯಗಳ ಅಸ್ತಿತ್ವವು, ಮೆಟ್‌ಕಾಫ್ಲೆಯ ಪ್ರಕಾರ, ನೂರಾರು ವರ್ಷಗಳಲ್ಲಿ ನಡೆದ ಕ್ರಾಂತಿಗಳ ನಡುವೆಯೂ, ನೂರಾರು ವರ್ಷಗಳಲ್ಲಿ ಆದ ಬದಲಾವಣೆಗಳ ನಡುವೆಯೂ ಭಾರತವನ್ನು ಉಳಿಸಿಕೊಂಡು ಬಂದಿದೆ ಮತ್ತು ಜನತೆಯ ಸಂತೋಷಕ್ಕೆ ಹಾಗೂ ಸಂಪೂರ್ಣ ಸ್ವಾತಂತ್ರ್ಯಕ್ಕೆ ಅತಿ ಹೆಚ್ಚಿನ ಕಾಣಿಕೆಯನ್ನು ನೀಡಿದೆ. ಬೇರೆ ಯಾವ ಸಂಸ್ಥೆಗಳೂ ಬದುಕಿ ಬಾಳದಷ್ಟು ದೀರ್ಘ ಅವಧಿಯನ್ನು ಈ ಗ್ರಾಮಪಂಚಾಯತಿ ವ್ಯವಸ್ಥೆಯು ಕಂಡಿದೆ ಎಂಬುದು ದಿಟವೇ. ಆದರೆ ಗ್ರಾಮ ಸಮುದಾಯಗಳ ಬಗ್ಗೆ ಅತಿಯಾಗಿ ಹೆಮ್ಮೆ ಪಡುವಂತಹವರು, ಈ ದೇಶದ ಭವಿಷ್ಯವನ್ನು ರೂಪಿಸುವಲ್ಲಿ ಅವುಗಳ ಪಾತ್ರವೇನು ಎಂಬುದನ್ನು ಕುರಿತು ಯೋಚಿಸುವುದಿಲ್ಲ. ಏಕೆ? ದೇಶದ ಭವಿಷ್ಯವನ್ನು ರೂಪಿಸುವಲ್ಲಿನ ಅವುಗಳ ಪಾತ್ರವನ್ನು ಮೆಟ್‌ಕಾಫ್ಲೆ ತಾನೇ ಹೀಗೆ ವರ್ಣಿಸಿದ್ದಾನೆ.

"ರಾಜವಂಶಗಳು ಒಂದಾದ ಅನಂತರ ಒಂದು ಉರುಳಿಹೋದವು. ಒಂದು ಕ್ರಾಂತಿಯ ಹಿಂದೆ ಮತ್ತೊಂದು ಕ್ರಾಂತಿಯು ಹುಟ್ಟಿಕೊಂಡಿತು. ಹಿಂದೂಗಳು,, ಪಠಾಣರು, ಮೊಗಲರು, ಮರಾಠರು, ಸಿಖ್ಖರು, ಇಂಗ್ಲಿಷರು ಎಲ್ಲರೂ ಇಲ್ಲಿ ರಾಜ್ಯವನ್ನಾಳಿದರು, ಆದರೂ ಗ್ರಾಮ ಸಮುದಾಯಗಳು ಮಾತ್ರ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳದೆ ಮುಂದುವರಿದುಕೊಂಡು ಬಂದವು. ಸಂಕಷ್ಟದ ಸಮಯದಲ್ಲಿ ಅವು ಆಯುಧಗಳನ್ನು ಕೈಗೆತ್ತಿಕೊಂಡು ತಮ್ಮ ರಕ್ಷಣೆಯನ್ನು ತಾವು ಮಾಡಿಕೊಂಡವು. ಶತ್ರುಗಳ ಸೈನ್ಯ ಹಳ್ಳಿಗಳ ಮೂಲಕ ಹಾದು ಹೋಗುತ್ತಿದ್ದವು. ಈ ಗ್ರಾಮ ಸಮುದಾಯಗಳು ತಮ್ಮ ಬಳಿ ಇದ್ದ ಅಲ್ಪ ಸ್ವಲ್ಪ ದನಕರುಗಳನ್ನು ತಮ್ಮ ಕೊಟ್ಟಿಗೆಗಳಲ್ಲಿ ಕೂಡಿಹಾಕಿ ಶತ್ರುಗಳ ಸೈನ್ಯವನ್ನು ಪ್ರಚೋದಿಸದೆ ಹಾದುಹೋಗಲು ಬಿಡುತ್ತಿದ್ದವು."

ಇದು ನಮ್ಮ ದೇಶದ ಇತಿಹಾಸದಲ್ಲಿ ಗ್ರಾಮ ಸಮುದಾಯಗಳು ವಹಿಸಿರುವ ಪಾತ್ರ. ಇದನ್ನು ಅರಿತವರು ಅವುಗಳ ಬಗ್ಗೆ ಯಾವ ರೀತಿಯ ಹೆಮ್ಮೆಯನ್ನು ಹೊಂದಿರಬಹುದು? ಬದಲಾವಣೆಗಳ ಗಾಳಿಯ ಹೊಡೆತಕ್ಕೆ ಸಿಕ್ಕಿಯೂ ಅವುಗಳು ಉಳಿದುಕೊಂಡು ಬಂದವು ಎಂಬುದು ವಾಸ್ತವ ಸಂಗತಿ. ಕೇವಲ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿರುವಂತಹುದೇ ಒಂದು ಮೌಲ್ಯವಲ್ಲ. ಅವುಗಳ ಸ್ಥಿತಿ ಯಾವ ಮಟ್ಟದಲ್ಲಿ ಉಳಿದುಕೊಂಡು ಬಂದಿವೆ ಎಂಬುದು ಪ್ರಶ್ನೆ. ಅದು ಖಂಡಿತವಾಗಿಯೂ ತೀರ ಕೆಳಮಟ್ಟದಲ್ಲಿತ್ತು ಮತ್ತು ಸ್ವಕೇಂದ್ರಿತವಾಗಿತ್ತು ಮತ್ತು ಗ್ರಾಮ ಗಣರಾಜ್ಯಗಳಿಂದಲೇ ಭಾರತವು ಹಾಳಾಯಿತು ಎಂದೇ ನಾನು ಹೇಳುತ್ತೇನೆ. ಪ್ರಾದೇಶಿಕತೆಯನ್ನು ಮತ್ತು ಕೋಮುವಾದವನ್ನು ಬೆಂಬಲಿಸಿದವರು ಇಂತಹ ಗ್ರಾಮ/ಹಳ್ಳಿಗಳ ಪರವಾಗಿ ಹೋರಾಡುವ ವೀರರಾಗಿ ಮುಂದೆ ಬರುತ್ತಿರುವುದನ್ನು ನೋಡಿ ನನಗೆ ಆಶ್ಚರ್ಯವಾಗುತ್ತದೆ. ಹಳ್ಳಿಗಳು ಎಂದರೆ ಸ್ಥಳೀಯತೆಯ ಗುಂಡಿ, ಅಜ್ಞಾನದ ಹೊಂಡ, ಸಂಕುಚಿತ ಮನೋಭಾವ ಹಾಗೂ ಕೋಮುವಾದಗಳನ್ನು ಮೈಗೂಡಿಸಿಕೊಂಡ ಸಮುದಾಯವಲ್ಲದೆ ಬೇರೆಯಲ್ಲ. ಕರಡು ಸಂವಿಧಾನವು ಗ್ರಾಮ/ಹಳ್ಳಿಗಳನ್ನು ಕೈಬಿಟ್ಟು, ವ್ಯಕ್ತಿಯನ್ನು ಕೇಂದ್ರಬಿಂದುವಾಗಿ ಇಟ್ಟುಕೊಂಡುದಕ್ಕಾಗಿ ನಾನು ಸಂತೋಷಪಡುತ್ತೇನೆ.

ಕರಡು ಸಂವಿಧಾನವು ಅಲ್ಪಸಂಖ್ಯಾತರಿಗೆ ರಕ್ಷಣೆಯನ್ನು ಒದಗಿಸುವ ಕಾರಣಕ್ಕಾಗಿಯೂ ಅದನ್ನು ಟೀಕಿಸುತ್ತಾರೆ. ಆದರೆ ಇದರಲ್ಲಿ ಕರಡು ರಚನಾ ಸಮಿತಿಯ ಪಾತ್ರವೇನೂ ಇಲ್ಲ. ಅದು ಸಂವಿಧಾನ ರಚನಾಸಭೆಯ ತೀರ್ಮಾನಗಳ ಪ್ರಕಾರ ನಡೆದುಕೊಂಡಿದೆ. ಸಂವಿಧಾನ ರಚನಾಸಮಿತಿಯು ಅಲ್ಪಸಂಖ್ಯಾತರಿಗೆ ರಕ್ಷಣೆಯನ್ನು ಕಲ್ಪಿಸಿರುವುದರಲ್ಲಿ, ವಿವೇಕಯುತವಾಗಿ ನಡೆದುಕೊಂಡಿದೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಈ ದೇಶದಲ್ಲಿ ಅಲ್ಪಸಂಖ್ಯಾತರು ಮತ್ತು ಬಹುಸಂಖ್ಯಾತರು – ಎರಡೂ ವರ್ಗಗಳವರು ತಪ್ಪು ದಾರಿಯನ್ನು ತುಳಿದಿದ್ದಾರೆ. ಅಲ್ಪಸಂಖ್ಯಾತರಿಗೆ ಅಸ್ತಿತ್ವವೇ ಇಲ್ಲವೆಂಬಂತೆ ಅವರನ್ನು ನಡೆಸಿಕೊಳ್ಳುವುದು ಬಹುಸಂಖ್ಯಾತರು ಮಾಡುತ್ತಿರುವ ತಪ್ಪು. ಅಂತಹ ಸ್ಥಿತಿಯಲ್ಲಿಯೇ ಮುಂದುವರಿಯುವುದನ್ನು ಒಪ್ಪಿಕೊಂಡಿರುವಂತೆ ಬಾಳುತ್ತಿರುವುದು ಅಲ್ಪಸಂಖ್ಯಾತರು ಮಾಡುತ್ತಿರುವ ತಪ್ಪು. ಎರಡು ಉದ್ದೇಶಗಳನ್ನು ಸಾಧಿಸುವಂತಹ ಪರಿಹಾರವನ್ನು ಕಂಡುಹಿಡಿದುಕೊಳ್ಳಬೇಕು. ಮೊದಲನೆಯದಾಗಿ ಅಲ್ಪಸಂಖ್ಯಾತರ ಅಸ್ತಿತ್ವವನ್ನು

ಒಪ್ಪಿಕೊಳ್ಳಬೇಕು. ಅದು ಇಂದಲ್ಲ ನಾಳೆ ಬಹುಸಂಖ್ಯಾತರು ಮತ್ತು ಅಲ್ಪಸಂಖ್ಯಾತರು ಒಂದಾಗುವುದಕ್ಕೆ ಅನುಕೂಲವಾಗುವಂತಹ ಪರಿಹಾರವೂ ಆಗಿರಬೇಕು. ಸಂವಿಧಾನ ರಚನಾಸಭೆಯು ಉದ್ದೇಶಿಸಿರುವ ಪರಿಹಾರವು ಈ ಎರಡೂ ಉದ್ದೇಶಗಳನ್ನು ಸಾಧಿಸುವುದರಿಂದ ಅದನ್ನು ನಾವು ಸ್ವಾಗತಿಸಬೇಕು. ಅಲ್ಪಸಂಖ್ಯಾತರ ವಿರುದ್ಧ ಅಂಧದ್ವೇಷವನ್ನು ಬೆಳೆಸಿಕೊಂಡಿರುವಂತಹವರಿಗೆ ನಾನು ಎರಡು ವಿಷಯಗಳನ್ನು ಹೇಳಬಯಸುತ್ತೇನೆ. ಮೊದಲನೆಯದು, ಅಲ್ಪಸಂಖ್ಯಾತರು ಸ್ಫೋಟಕವಸ್ತುವಿದ್ದ ಹಾಗೆ, ಅವರು ಒಮ್ಮೆ ಸ್ಫೋಟಿಸಿದರೆ ಆಡಳಿತದ ಪ್ರತಿ ಎಳೆಗಳೂ ಚೂರುಚೂರಾಗುತ್ತವೆ. ಯೂರೋಪಿನ ಇತಿಹಾಸವು ಇದಕ್ಕೆ ಸಮೃದ್ಧ ಹಾಗೂ ದಿಗ್ಭ್ರಮೆಯನ್ನು ಹುಟ್ಟಿಸುವಷ್ಟು ಉದಾಹರಣೆಗಳನ್ನು ಒದಗಿಸುತ್ತದೆ. ಎರಡನೆಯದೆಂದರೆ, ಭಾರತದಲ್ಲಿನ ಅಲ್ಪಸಂಖ್ಯಾತರು ತಮ್ಮ ಅಸ್ತಿತ್ವವನ್ನು ಬಹುಸಂಖ್ಯಾತರ ಕೈಯಲ್ಲಿ ಇಡಲು ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಐರ್ಲೆಂಡ್ ಭಾಗವಾಗುವುದನ್ನು ತಪ್ಪಿಸಲು ನಡೆದ ಪ್ರಯತ್ನದ ಸಂದರ್ಭದ ಇತಿಹಾಸದಲ್ಲಿ ಕ್ಯಾರ್ಸನ್ ಅವರಿಗೆ ರೆಡ್‌ಮಂಡ್ ಹೀಗೆ ಹೇಳುತ್ತಾರೆ: 'ಪ್ರಾಟೆಸ್ಟಂಟ್ ಅಲ್ಪಸಂಖ್ಯಾತರ ರಕ್ಷಣೆಗಾಗಿ ನೀವು ಏನನ್ನು ಬೇಕಾದರೂ ಕೇಳಿ, ಆದರೆ, ನಾವು ಐರ್ಲೆಂಡ್‌ನ್ನು ವಿಭಜಿಸದೆ ಏಕರಾಷ್ಟ್ರವನ್ನಾಗಿರಿಸಿಕೊಳ್ಳೋಣ'. ಅದಕ್ಕೆ ಕ್ಯಾರ್ಸನ್ ಅವರ ಉತ್ತರ ಹೀಗಿತ್ತು: 'ನಿಮ್ಮ ರಕ್ಷಣೆ ಯಾರಿಗೆ ಬೇಕು? ನಾವು ನಿಮ್ಮಿಂದ ಆಳಲ್ಪಡುವುದನ್ನು ಬಯಸುವುದಿಲ್ಲ'. ಭಾರತದಲ್ಲಿನ ಯಾವ ಅಲ್ಪಸಂಖ್ಯಾತರೂ ಈ ನಿಲುವನ್ನು ತೆಗೆದುಕೊಳ್ಳಲಿಲ್ಲ. ಅವರು ನಿಷ್ಠರಾಗಿ ಬಹುಮತದ ಆಳ್ವಿಕೆಯನ್ನು ಒಪ್ಪಿಕೊಂಡರು, ಅದೂ ಈ ಬಹುಮತವೆಂತಹುದು, ಅದು ರಾಜಕೀಯ ಬಹುಮತವಲ್ಲ, ಬದಲಿಗೆ ಅದು ಕೋಮುಗಳ ಬಹುಮತ. ಈಗ ಅಲ್ಪಸಂಖ್ಯಾತರ ವಿರುದ್ಧ ತಾರತಮ್ಯವನ್ನು ತೋರಿಸದೆ, ತಮ್ಮ ಹೊಣೆಗಾರಿಕೆಯನ್ನು ಪ್ರದರ್ಶಿಸುವುದು ಬಹುಸಂಖ್ಯಾತರ ಕರ್ತವ್ಯವಾಗಿದೆ. ಅಲ್ಪಸಂಖ್ಯಾತರ ವಿರುದ್ಧ ತಾರತಮ್ಯವನ್ನು ಬಹುಸಂಖ್ಯಾತರು ತೋರಿಸಲು ಪ್ರಾರಂಭಿಸಿದರೆ, ಅಲ್ಪಸಂಖ್ಯಾತರ ಅಸ್ತಿತ್ವಕ್ಕೆ ನೆಲೆಯೇ ಇಲ್ಲದಂತಾಗುತ್ತದೆ, ಮತ್ತು ಅವರೇ ಇಲ್ಲವಾಗುತ್ತಾರೆ.

ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ ಭಾಗವು ಅತಿ ಹೆಚ್ಚಿನ ಟೀಕೆಗೆ ಒಳಗಾಗಿದೆ. ಸಂವಿಧಾನದ ೧೩ನೆಯ ಅನುಚ್ಛೇದಕ್ಕೆ ಎಷ್ಟು ವಿನಾಯಿತಿಗಳನ್ನು ನೀಡಲಾಗಿದೆಯೆಂದರೆ, ಈ ವಿನಾಯಿತಿಗಳು ಈ ವಿಧಿಯ ಅಡಿಯಲ್ಲಿ ನೀಡಿರುವ ಮೂಲಭೂತ ಹಕ್ಕುಗಳನ್ನು ಸಂಪೂರ್ಣವಾಗಿ ನುಂಗಿಹಾಕಿವೆ ಎಂದು ಹೇಳುತ್ತಾರೆ. ಅದನ್ನು ಒಂದು ಬಗೆಯ ಮೋಸವೆಂದು ಟೀಕಿಸುತ್ತಾರೆ. ಯಾವುದರಿಂದಲಾದರೂ ಬಾಧಿತವಾಗಿದ್ದರೆ ಮೂಲಭೂತ ಹಕ್ಕುಗಳು ಮೂಲಭೂತ ಹಕ್ಕುಗಳಾಗಿಯೇ ಉಳಿದಿರುವುದಿಲ್ಲವೆಂದು ಅವರು ಹೇಳುತ್ತಾರೆ. ಈ ಟೀಕಾಕಾರರು ತಮ್ಮ ವಾದದ ಸಮರ್ಥನೆಗೆ ಅಮೆರಿಕ ಸಂಯುಕ್ತ ಸಂಸ್ಥಾನದ ಸಂವಿಧಾನವನ್ನು ಮತ್ತು ಅದಕ್ಕೆ ಮಾಡಿದ ಮೊದಲ ಹತ್ತು ತಿದ್ದುಪಡಿಗಳನ್ನು ಒಳಗೊಂಡಿರುವ ಬಿಲ್ ಆಫ್ ರೈಟ್ಸ್‌ನ್ನು ಬಳಸಿಕೊಳ್ಳುತ್ತಾರೆ. ಅವರ ಪ್ರಕಾರ ಅಮೆರಿಕನ್ ಬಿಲ್ ಆಫ್ ರೈಟ್ಸ್‌ನಲ್ಲಿ ನೀಡಿರುವ ಹಕ್ಕುಗಳು ಬೇರೆ ಯಾವ ವಿಧಿಗಳಿಂದಲೂ ಸೀಮಿತಗೊಳಿಸಲ್ಪಟ್ಟಿಲ್ಲ.

ಮೂಲಭೂತ ಹಕ್ಕುಗಳ ವಿಷಯದಲ್ಲಿ ಮಾಡಿರುವ ಎಲ್ಲ ಟೀಕೆಗಳೂ ಕರಡು ಸಂವಿಧಾನವನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲದಿರುವುದರಿಂದ ಹುಟ್ಟಿಕೊಂಡಂತಹವುಗಳಾಗಿವೆ ಎಂದು ನಾನು ಹೇಳುತ್ತೇನೆ. ಮೊದಲನೆಯದಾಗಿ, ಮೂಲಭೂತ ಹಕ್ಕುಗಳಿಗೂ ಮತ್ತು ಉಳಿದ ಹಕ್ಕುಗಳಿಗೂ ಇದೆಯೆಂದು ಅವರು ಭಾವಿಸಿರುವ ವ್ಯತ್ಯಾಸಗಳೇ ದುರ್ಬಲವಾದ ನೆಲೆಗಟ್ಟಿನ ಮೇಲೆ ನಿಂತಿವೆ. ಮೂಲಭೂತ ಹಕ್ಕುಗಳು ಅಬಾಧಿತವೆಂದೂ, ಉಳಿದ ಹಕ್ಕುಗಳು ಬಾಧಿವಾಗಬಹುದೆಂದೂ ಹೇಳುವುದೇ ತಪ್ಪು. ಇವೆರಡರ ನಡುವೆ ಇರುವ ನಿಜವಾದ ವ್ಯತ್ಯಾಸವೆಂದರೆ, ಮೂಲಭೂತವಲ್ಲದ ಹಕ್ಕುಗಳು ಅವುಗಳಿಗೆ ಸಂಬಂಧಿಸಿದ ಪಕ್ಷಗಳಿಗೆ ಸಾಪೇಕ್ಷವಾಗಿದ್ದರೆ, ಮೂಲಭೂತ ಹಕ್ಕುಗಳು ಕಾನೂನು ನೀಡಿರುವಂತಹವುಗಳು. ಮೂಲಭೂತ ಹಕ್ಕುಗಳು ಸರ್ಕಾರದಿಂದ ನೀಡಲ್ಪಟ್ಟವುಗಳಾಗಿದ್ದರೂ, ಅವುಗಳನ್ನು ಸರ್ಕಾರವು ಮುಟ್ಟುವ ಹಾಗಿಲ್ಲ ಎನ್ನುವಂತೆ ಇಲ್ಲ.

ಅಲ್ಲದೆ, ಅಮೆರಿಕಾದಲ್ಲಿ ಮೂಲಭೂತ ಹಕ್ಕುಗಳು ಅಬಾಧಿತವಾದವು ಎನ್ನುವುದು ತಪ್ಪು. ಅಮೆರಿಕದ ಸಂವಿಧಾನ ಹಾಗೂ ನಮ್ಮ ಕರಡು ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳ ನಡುವೆ ಇರುವ ವ್ಯತ್ಯಾಸವು ಸ್ವರೂಪದಲ್ಲಿದೆಯೇ ಹೊರತು ಅವುಗಳ ಹುರುಳಿನಲ್ಲಿ ಅಲ್ಲ. ಅಮೆರಿಕದಲ್ಲಿ ಮೂಲಭೂತ ಹಕ್ಕುಗಳು ಅಬಾಧಿತವಲ್ಲವೆಂಬುದು ವಿವಾದಾತೀತವಾಗಿದೆ. ಕರಡು ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳಿಗೆ ನೀಡಿರುವ ಪ್ರತಿಯೊಂದು ವಿನಾಯಿತಿಗೂ, ಕನಿಷ್ಠ ಪಕ್ಷ ಅಮೆರಿಕ ಸಂಯುಕ್ತ ಸಂಸ್ಥಾನದ ಸರ್ವೋಚ್ಚನ್ಯಾಯಾಲಯವು ಈ ಹಕ್ಕುಗಳ ಬಗ್ಗೆ ನೀಡಿರುವ ಒಂದು ತೀರ್ಪನ್ನಾದರೂ ಉಲ್ಲೇಖಿಸಿರುವುದನ್ನು ಯಾರಾದರೂ ಕಾಣಬಹುದು. ನಮ್ಮ ಕರಡು ಸಂವಿಧಾನದ ೧೩ನೆಯ ಅನುಚ್ಛೇದದನ್ವಯ ನೀಡಿರುವ ವಾಕ್‌ಸ್ವಾತಂತ್ರ್ಯಕ್ಕೆ ಮಿತಿಯನ್ನು ವಿಧಿಸಿರುವ ಸಂಬಂಧದಲ್ಲಿ, ಅಮೆರಿಕ ಸಂಯುಕ್ತ ಸಂಸ್ಥಾನದ ಸರ್ವೋಚ್ಚನ್ಯಾಯಾಲಯದ ಒಂದು ತೀರ್ಪನ್ನು ಇಲ್ಲಿ ಉಲ್ಲೇಖಿಸಿದರೆ ಸಾಕು ಎಂದೆನಿಸುತ್ತದೆ. ಗಿಟ್ಲೋ ಮತ್ತು ನ್ಯೂಯಾರ್ಕ್ ನಡುವಿನ ಪ್ರಕರಣದಲ್ಲಿ ನ್ಯೂಯಾರ್ಕಿನ ಒಂದು 'ಅಪರಾಧಿಕ ಅರಾಜಕತೆ'ಯ ಕಾನೂನು ಹಿಂಸಾತ್ಮಕ ಬದಲಾವಣೆಯನ್ನು ಉಂಟುಮಾಡುವುದೆಂದು ಹೇಳಲಾದ ಹೇಳಿಕೆಗಾಗಿ ಶಿಕ್ಷೆಯನ್ನು ವಿಧಿಸುವ ಸಂದರ್ಭದಲ್ಲಿ ಆ ಕಾನೂನಿನ ಸಾಂವಿಧಾನಿಕತೆಯನ್ನು ಕುರಿತು ಸರ್ವೋಚ್ಚನ್ಯಾಯಾಲಯವು ಹೀಗೆ ಹೇಳಿದೆ:

> "ಬಹಳ ಕಾಲದಿಂದ ನಡೆದುಕೊಂಡು ಬಂದಿರುವ, ಸಂವಿಧಾನದ ರಕ್ಷಣೆಯನ್ನು ಪಡೆದಿರುವ ವಾಕ್ಸ್ವಾತಂತ್ರ್ಯ ಹಾಗೂ ಪತ್ರಿಕಾ ಸ್ವಾತಂತ್ರ್ಯಗಳು ಜವಾಬ್ದಾರಿಯಿಲ್ಲದೆ ಏನನ್ನು ಬೇಕಾದರೂ ಮಾತನಾಡುವ, ಯಾವುದೇ ಪ್ರಕಟಿಸುವ ಹಕ್ಕನ್ನು ನೀಡುವುದಿಲ್ಲ ಮತ್ತು ಅನಿರ್ಬಂಧಿತವಾದ ಅನುಮತಿಯನ್ನಾಗಲೀ, ಆಗಬಹುದಾದ ಶಿಕ್ಷೆಗಳಿಂದ ವಿನಾಯಿತಿಯನ್ನಾಗಲೀ ನೀಡುವುದಿಲ್ಲ."

ಆದ್ದರಿಂದ, ಅಮೆರಿಕದಲ್ಲಿ ಮೂಲಭೂತ ಹಕ್ಕುಗಳು ಅಬಾಧಿತವಾಗಿವೆ ಮತ್ತು ಕರಡು ಸಂವಿಧಾನದಲ್ಲಿ ಅವು ಹಾಗಿಲ್ಲ ಎಂದು ಹೇಳುವುದು ತಪ್ಪಾಗುತ್ತದೆ.

ಮೂಲಭೂತ ಹಕ್ಕುಗಳಿಗೆ ಕೆಲವು ಷರತ್ತುಗಳನ್ನು ವಿಧಿಸಬೇಕೆಂದರೆ ಅದನ್ನು ಅಮೆರಿಕ ಸಂವಿಧಾನದಲ್ಲಿ ಮಾಡಿರುವಂತೆ ಸಂವಿಧಾನವೇ ಮಾಡಬೇಕು ಮತ್ತು ಹಾಗೆ ಮಾಡಿರದೇ ಇದ್ದರೆ ಎಲ್ಲ ವಿಚಾರಗಳನ್ನೂ ಗಮನಕ್ಕೆ ತಂದುಕೊಂಡು ಅದನ್ನು ನ್ಯಾಯಾಂಗವು ಮಾಡಬೇಕು ಎಂದು ವಾದ ಮಾಡಲಾಗುತ್ತಿದೆ. ಇಂತಹ ವಾದಗಳ ವಿಚಾರದಲ್ಲಿ ಅವು ಅಮೆರಿಕದ ಸಂವಿಧಾನವನ್ನು ಅಪಾರ್ಥ ಮಾಡಿಕೊಂಡಿದ್ದರಿಂದ ಹುಟ್ಟಿವೆಯೆಂದು ಹೇಳದಿದ್ದರೂ, ಆ ಸಂವಿಧಾನದ ಸಂಪೂರ್ಣ ಮಿಥ್ಯಾ ನಿರೂಪಣೆಯಾಗಿದೆ ಎಂದೇ ಅವುಗಳನ್ನು ಪರಿಗಣಿಸಬೇಕು ಎಂದು ಹೇಳುವುದಕ್ಕೆ ನನಗೆ ವಿಷಾದವಾಗುತ್ತದೆ. ಅಮೆರಿಕದ ಸಂವಿಧಾನವು ಅಂತಹುದೇನನ್ನೂ ಮಾಡುವುದಿಲ್ಲ. ಒಂದೇ ಒಂದು ಹಕ್ಕನ್ನು – ಸಭೆ ಸೇರುವ ಹಕ್ಕನ್ನು – ಬಿಟ್ಟು ಉಳಿದ ಅಮೆರಿಕದ ಪೌರರಿಗೆ ಯಾವ ಮೂಲಭೂತ ಹಕ್ಕಿನ ಮೇಲೂ ಯಾವುದೇ ರೀತಿಯ ನಿರ್ಬಂಧವನ್ನೂ ಹೇರುವುದಿಲ್ಲ. ಅಥವಾ ಅಮೆರಿಕದ ಸಂವಿಧಾನವು ಮೂಲಭೂತ ಹಕ್ಕುಗಳ ಮೇಲೆ ನಿರ್ಬಂಧವನ್ನು ಹೇರುವ ಹೊಣೆಯನ್ನು ನ್ಯಾಯಾಂಗಕ್ಕೆ ಬಿಟ್ಟಿದೆ ಎಂದು ಹೇಳುವುದೂ ಸರಿಯಲ್ಲ. ಈ ಹೊಣೆಯು ಅಲ್ಲಿನ ಕಾಂಗ್ರೆಸ್‌ಗೆ ಸೇರಿದುದಾಗಿದೆ. ವಾಸ್ತವ ಸಂಗತಿಯು ಟೀಕಾಕಾರರು ಎಂದುಕೊಂಡಿರುವುದಕ್ಕಿಂತಲೂ ಭಿನ್ನವಾಗಿದೆ. ಅಮೆರಿಕದ ಸಂವಿಧಾನದಲ್ಲಿ ನೀಡಿರುವ ಮೂಲಭೂತ ಹಕ್ಕುಗಳು ಅಬಾಧಿತವೆಂಬುದರಲ್ಲಿ ಅನುಮಾನವೇ ಇಲ್ಲ. ಆದರೆ, ಈ ಹಕ್ಕುಗಳಿಗೆ ನಿರ್ಬಂಧವನ್ನು ವಿಧಿಸುವುದು ಅತ್ಯಂತ ಅಗತ್ಯವೆಂಬುದನ್ನು ಅಲ್ಲಿನ ಕಾಂಗ್ರೆಸ್ ಕಂಡುಕೊಂಡಿತು. ಈ ನಿರ್ಬಂಧಗಳ ಸಾಂವಿಧಾನಿಕತೆಯನ್ನು ಸರ್ವೋಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿ ಸಂವಿಧಾನವು ಕಾಂಗ್ರೆಸ್‌ಗೆ ನಿರ್ಬಂಧವನ್ನು ವಿಧಿಸುವ ಅಧಿಕಾರವನ್ನು ನೀಡಿಲ್ಲ ಎಂದು ವಾದಿಸಿದಾಗ, ಸರ್ವೋಚ್ಚನ್ಯಾಯಾಲಯವು ಪೋಲೀಸ್ ಬಲ ಎಂಬ ಹೊಸ ತಂತ್ರವೊಂದನ್ನು ಆವಿಷ್ಕರಿಸಿ ಅನಿರ್ಬಂಧಿತ ಹಕ್ಕುಗಳ ಪ್ರತಿಪಾದಕರ ವಾದವನ್ನು ತಿರಸ್ಕರಿಸುತ್ತಾ, ಪ್ರತಿಯೊಂದು ಸರ್ಕಾರಕ್ಕೂ ಸಹಜವಾಗಿಯೇ ಕೆಲವೊಂದು ಅಧಿಕಾರವಿರುತ್ತವೆ,

ಅದನ್ನು ಸಂವಿಧಾನವು ಸ್ಪಷ್ಟವಾಗಿ ಹೇಳಬೇಕಾಗಿಲ್ಲ ಎಂದು ಹೇಳಿತು. ನಾನು ಈ ಹಿಂದೆ ಉಲ್ಲೇಖಿಸಿದ ಪ್ರಕರಣವನ್ನೇ ಮತ್ತೆ ಪರಿಶೀಲನೆಗೆ ಕೈಗೆತ್ತಿಕೊಂಡರೆ, ಅಮೆರಿಕದ ಸರ್ವೋಚ್ಚನ್ಯಾಯಾಲಯವು ಹೀಗೆ ಹೇಳಿದೆ:

"ಸರಕಾರವು ತನ್ನ ಅಧಿಕಾರವನ್ನು ಬಳಸಿಕೊಂಡು, ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿ ಮಾತನಾಡುವುದಕ್ಕೆ, ಸಾರ್ವಜನಿಕ ನೈತಿಕತೆಯನ್ನು ಕೆಡಿಸುವುದಕ್ಕೆ, ಅಪರಾಧವನ್ನು ಮಾಡುವಂತೆ ಪ್ರೇರೇಪಿಸುವುದಕ್ಕೆ ಅಥವಾ ಸಾರ್ವಜನಿಕ ಶಾಂತಿಯನ್ನು ಹಾಳುಮಾಡುವುದಕ್ಕೆ ಈ ಸ್ವಾತಂತ್ರ್ಯವನ್ನು ದುರುಪಯೋಗ ಪಡಿಸಿಕೊಳ್ಳುವವರನ್ನು ಶಿಕ್ಷಿಸಬಹುದು. ಅದನ್ನು ಪ್ರಶ್ನಿಸುವ ಹಾಗಿಲ್ಲ....."

ಕರಡು ಸಂವಿಧಾನವು ಈ ವಿಷಯದಲ್ಲಿ ಮಾಡಿರುವುದೇನೆಂದರೆ, ಮೂಲಭೂತ ಹಕ್ಕುಗಳನ್ನು ಅಬಾಧಿತವಾಗಿರುವಂತೆ ಮಾಡಿ ಅದನ್ನು ವಿವಾದಗಳ ಸಂದರ್ಭದಲ್ಲಿ ಸರ್ವೋಚ್ಚನ್ಯಾಯಾಲಯವು ಪೊಲೀಸ್ ಬಲದ ತತ್ತ್ವವನ್ನು ಇಟ್ಟುಕೊಂಡು ಸಂಸತ್ತಿನ ರಕ್ಷಣೆಗೆ ಧಾವಿಸಿ ಬರಬೇಕಾದಂತೆ ಮಾಡದೆ, ಅದು ಮೂಲಭೂತ ಹಕ್ಕುಗಳ ಮೇಲೆ ಸೂಕ್ತ ಮಿತಿಗಳನ್ನು ಹೇರುವ ಅಧಿಕಾರವನ್ನು ಸರ್ಕಾರಕ್ಕೆ ನೀಡುತ್ತದೆ. ಪರಿಣಾಮದಲ್ಲಿ ಯಾವ ವ್ಯತ್ಯಾಸವೂ ಇರುವುದಿಲ್ಲ. ಒಂದು ಕಡೆ ನೇರವಾಗಿ ಮಾಡುವಂತಹುದನ್ನು ಇನ್ನೊಂದೆಡೆ ಅಪ್ರತ್ಯಕ್ಷವಾಗಿ ಮಾಡಲಾಗುತ್ತದೆ ಅಷ್ಟೆ. ಎರಡೂ ಸಂದರ್ಭಗಳಲ್ಲಿ ಮೂಲಭೂತ ಹಕ್ಕುಗಳ ಮೇಲೆ ಕೆಲವು ನಿರ್ಬಂಧಗಳು ಇವೆ.

ಕರಡು ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳ ಜೊತೆಯಲ್ಲಿಯೇ ನಿರ್ದೇಶಕ ತತ್ತ್ವಗಳೂ ಕೂಡ ಬರುತ್ತವೆ. ಸಂಸದೀಯ ವ್ಯವಸ್ಥೆಯ ಸಂವಿಧಾನದಲ್ಲಿ ಇದೊಂದು ನವೀನ ಪ್ರಯೋಗ. ಹೆಚ್ಚು ಕಡಿಮೆ ಇಂತಹ ತತ್ತ್ವಗಳನ್ನು ಒಳಗೊಂಡಿರುವ ಮತ್ತೊಂದು ಸಂಸದೀಯ ವ್ಯವಸ್ಥೆಯ ಸಂವಿಧಾನವೆಂದರೆ ಅದು ಐರ್ಲೆಂಡಿನ ಸಂವಿಧಾನ. ಈ ನಿರ್ದೇಶಕ ತತ್ತ್ವಗಳೂ ಟೀಕೆಗೆ ಒಳಗಾಗಿವೆ. ಇವನ್ನು ಕೇವಲ ಸೋಗಿನ ಘೋಷಣೆಗಳು ಎಂದು ಟೀಕಿಸಲಾಗಿದೆ. ಅವುಗಳಿಗೆ ಬದ್ಧತೆಯನ್ನುಂಟುಮಾಡುವ ಅಧಿಕಾರವಿಲ್ಲ. ಆದರೆ ಈ ಟೀಕೆಯು ಕೇವಲ ಮೇಲುಮೇಲಿನ ಟೀಕೆಯಾಗಿದೆ. ಇದನ್ನು ಸಂವಿಧಾನವೇ ವಿವರವಾಗಿ ತಿಳಿಸುತ್ತದೆ.

ನಿರ್ದೇಶಕ ತತ್ತ್ವಗಳಿಗೆ ಕಾನೂನಿನ ಬಲವಿಲ್ಲವೆಂದು ಹೇಳಿದರೆ, ನಾನು ಅದನ್ನು ಒಪ್ಪಿಕೊಳ್ಳಲು ಸಿದ್ಧವಿದ್ದೇನೆ. ಆದರೆ, ಅವುಗಳಿಗೆ ಬದ್ಧವಾಗಿಸುವಂತಹ ಅಧಿಕಾರವಿಲ್ಲವೆಂದು ಹೇಳುವುದನ್ನು ಒಪ್ಪಿಕೊಳ್ಳಲು ನಾನು ತಯಾರಿಲ್ಲ. ಅವುಗಳಿಗೆ ಕಾನೂನಿನ ಬಲವಿಲ್ಲವೆಂಬ ಕಾರಣದಿಂದ ಅವು ನಿಷ್ಪ್ರಯೋಜಕವೆನ್ನುವುದನ್ನೂ ನಾನು ಒಪ್ಪಿಕೊಳ್ಳುವುದಿಲ್ಲ.

ನಿರ್ದೇಶಕ ತತ್ತ್ವಗಳು ಬ್ರಿಟಿಷ್ ಸರಕಾರವು ೧೯೩೫ರ ಭಾರತ ಸರ್ಕಾರದ ಅಧಿನಿಯಮದ ಪ್ರಕಾರ ಗವರ್ನರ್ ಜನರಲ್ ಮತ್ತು ಕಾಲೊನಿಗಳ ಗವರ್ನರುಗಳಿಗೆ ನೀಡುತ್ತಿದ್ದ ನಿರ್ದೇಶನಗಳ ರೀತಿಯಲ್ಲಿಯೇ ಇವೆ. ಕರಡು ಸಂವಿಧಾನದಲ್ಲಿ ಈ ನಿರ್ದೇಶಕ ತತ್ತ್ವಗಳನ್ನು ರಾಷ್ಟ್ರಪತಿಯವರಿಗೆ ಮತ್ತು ರಾಜ್ಯಪಾಲರಿಗೆ ನೀಡಲು ಉದ್ದೇಶಿಸಲಾಗಿದೆ. ಈ ತತ್ತ್ವಗಳನ್ನು ಸಂವಿಧಾನದ ೪ನೆಯ ಅನುಸೂಚಿಯಲ್ಲಿ ನೋಡಬಹುದಾಗಿದೆ. ಬ್ರಿಟಿಷರು ನೀಡುತ್ತಿದ್ದ ನಿರ್ದೇಶನಗಳನ್ನೇ ಈಗ ಸಂವಿಧಾನದಲ್ಲಿ ನಿರ್ದೇಶಕ ತತ್ತ್ವಗಳು ಎಂಬ ಹೆಸರಿನಲ್ಲಿ ಕರೆಯಲಾಗಿದೆ. ಇರುವ ವ್ಯತ್ಯಾಸವೆಂದರೆ, ಇವು ಶಾಸಕಾಂಗ ಮತ್ತು ಕಾರ್ಯಾಂಗಕ್ಕೆ ನೀಡುವ ಸೂಚನೆಗಳಾಗಿವೆ ಅಷ್ಟೆ. ನನ್ನ ಪ್ರಕಾರ ಇದನ್ನು ಸ್ವಾಗತಿಸಬೇಕು ಶಾಂತಿ, ಸುವ್ಯವಸ್ಥೆ ಮತ್ತು ಒಳ್ಳೆಯ ಆಡಳಿತಕ್ಕಾಗಿ ಅಧಿಕಾರವನ್ನು ನೀಡಿರುವ ಎಡೆಗಳಲ್ಲೆಲ್ಲ, ಆ ಅಧಿಕಾರವನ್ನು ನಿಯಂತ್ರಣದಲ್ಲಿ ಇಡಲು ಈ ಸೂಚನೆಗಳು ಆವಶ್ಯಕಗಳಾಗಿರುತ್ತವೆ.

ಈ ಕಾರಣದಿಂದಾಗಿ ಅಂತಹ ಸೂಚನೆಗಳನ್ನು ಕರಡು ಸಂವಿಧಾನದಲ್ಲಿ ಅಳವಡಿಸಿರುವುದು ಸಮರ್ಥನೀಯವಾಗಿದೆ. ಈಗ ರೂಪುಗೊಂಡಿರುವ ಕರಡು ಸಂವಿಧಾನವು ದೇಶದಲ್ಲಿನ ಸರಕಾರಕ್ಕೆ ಒಂದು ಆಡಳಿತ ವ್ಯವಸ್ಥೆಯ ಸಾಧನವಾಗಿದೆಯೇ ಹೊರತು ಅದು ಕೆಲವು ದೇಶಗಳಲ್ಲಿರುವಂತೆ ಯಾವುದಾದರೂ ಒಂದು ಪಕ್ಷವನ್ನು ಅಧಿಕಾರದಲ್ಲಿ ನಿಲ್ಲಿಸಲು ಸಹಾಯಕವಾಗುವಂತಹ ಸಂಚು ಅಲ್ಲ. ಪ್ರಜಾಪ್ರಭುತ್ವದ ವ್ಯವಸ್ಥೆಯು

ಕಾಲದ ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕಾದರೆ, ಆ ವ್ಯವಸ್ಥೆಯಲ್ಲಿ ಯಾರು ತಮ್ಮನ್ನು ಆಳಬೇಕು ಎಂಬುದನ್ನು ಜನರು ತೀರ್ಮಾನ ಮಾಡಬೇಕು. ಆದರೆ ಅಧಿಕಾರಕ್ಕೆ ಬಂದವರು ತಮಗೆ ಸರಿಯೆಂದು ತೋಚಿದುದನ್ನೆಲ್ಲಾ ಮಾಡುವ ಸ್ವಾತಂತ್ರ್ಯವನ್ನು ಹೊಂದಿರಬಾರದು. ತಮ್ಮ ಅಧಿಕಾರವನ್ನು ಚಲಾಯಿಸುವಾಗ ಅಧಿಕಾರದಲ್ಲಿರುವವರು ಈ ನಿರ್ದೇಶಕ ತತ್ತ್ವಗಳಿಗೆ ಮನ್ನಣೆಯನ್ನು ಕೊಡಬೇಕು. ಅವರು ಅದನ್ನು ಕಡೆಗಣಿಸುವ ಹಾಗಿಲ್ಲ. ಅವುಗಳನ್ನು ಉಲ್ಲಂಘಿಸಿದರೆ, ಅವರು ನ್ಯಾಯಾಲಯಗಳಲ್ಲಿ ತಮ್ಮ ಉಲ್ಲಂಘನೆಗೆ ಉತ್ತರವನ್ನು ನೀಡಬೇಕಾಗಿಲ್ಲ. ಆದರೆ, ಮುಂದಿನ ಚುನಾವಣೆಯ ಸಮಯದಲ್ಲಿ ಅವರು ತಮ್ಮ ಮತದಾರರಿಗೆ ಉತ್ತರಿಸಬೇಕಾಗಿರುತ್ತದೆ. ಅಧಿಕಾರವನ್ನು ಹಿಡಿಯಲು ನಡೆಸುವ ತಂತ್ರಗಳ ಸಂದರ್ಭದಲ್ಲಿ ಈ ನಿರ್ದೇಶಕ ತತ್ತ್ವಗಳು ಹೊಂದಿರುವ ಪ್ರಾಮುಖ್ಯವನ್ನು ಅರಿಯಬಹುದು.

ಅವುಗಳಿಗೆ ಕಾನೂನಿನ ಬಲವಿಲ್ಲವೆಂಬ ಕಾರಣದಿಂದ ಅವುಗಳನ್ನು ಸಂವಿಧಾನದಲ್ಲಿ ಅಳವಡಿಸಿರುವುದರ ವಿರುದ್ಧ ವಾದ ಮಾಡುವುದು ಸರಿಯಾದುದಲ್ಲ. ಅವುಗಳಿಗೆ ಸಂವಿಧಾನದಲ್ಲಿ ಇರಬೇಕಾದ ಸ್ಥಾನದ ಬಗ್ಗೆ ಭಿನ್ನಾಭಿಪ್ರಾಯವಿರಬಹುದು. ನಿರ್ದಿಷ್ಟ ವಿಧ್ಯಾತ್ಮಕವಾಗಿರುವಂತಹವುಗಳ ಮಧ್ಯದಲ್ಲಿ ವಿಧ್ಯಾತ್ಮಕವಾಗಿಲ್ಲದಿರುವಂತಹ ಈ ತತ್ತ್ವಗಳನ್ನು ಅಳವಡಿಸಿರುವುದು ಸ್ವಲ್ಪ ವಿಚಿತ್ರವಾಗಿ ಕಾಣಿಸುತ್ತದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ನನ್ನ ಪ್ರಕಾರ ಅವುಗಳ ಸ್ಥಾನವು, ರಾಷ್ಟ್ರಪತಿಗಳಿಗೆ ಮತ್ತು ರಾಜ್ಯಪಾಲರುಗಳಿಗೆ ಸೂಚನೆಯನ್ನು ನೀಡುವ ಅವಕಾಶಗಳನ್ನು ಒಳಗೊಂಡಿರುವ ೩ಎ ಮತ್ತು ನಾಲ್ಕನೆಯ ಅನುಸೂಚಿಯಲ್ಲಿ ಇರಬೇಕು. ನಾನು ಹೇಳಿದಂತೆ, ತಮ್ಮ ಅಧಿಕಾರವನ್ನು ಹೇಗೆ ಬಳಸಬೇಕು ಎಂಬ ಸೂಚನೆಗಳನ್ನು ಶಾಸಕಾಂಗ ಮತ್ತು ಕಾರ್ಯಾಂಗಕ್ಕೆ ಈ ನಿರ್ದೇಶಕ ತತ್ತ್ವಗಳು ಮಾಡುತ್ತವೆ. ಇದು ಕೇವಲ ಅದನ್ನು ಎಲ್ಲಿ ಸೇರಿಸಿರಬೇಕೆಂಬುದನ್ನು ಕುರಿತ ಪ್ರಶ್ನೆ ಅಷ್ಟೆ.

ಕೆಲವರು ಕೇಂದ್ರವು ಅಗತ್ಯಕ್ಕಿಂತ ಹೆಚ್ಚು ಅಧಿಕಾರಗಳನ್ನು ಹೊಂದಿದೆ ಎಂದು ಟೀಕಿಸುತ್ತಾರೆ. ಮತ್ತೆ ಕೆಲವರು ಅದಕ್ಕೆ ಇನ್ನೂ ಹೆಚ್ಚಿನ ಅಧಿಕಾರದ ಅಗತ್ಯವಿದೆಯೆಂದು ಹೇಳುತ್ತಾರೆ. ಕರಡು ಸಂವಿಧಾನವು ಇವೆರಡರ ನಡುವೆ ಸಮತೋಲನವನ್ನು ಸಾಧಿಸಿದೆ. ಕೇಂದ್ರಕ್ಕೆ ಕಡಿಮೆ ಅಧಿಕಾರವನ್ನು ಕೊಟ್ಟಷ್ಟೂ, ಅದು ಹೆಚ್ಚು ಹೆಚ್ಚು ಬಲಯುತವಾಗುವುದನ್ನು ತಡೆಯುವುದು ಕಷ್ಟವಾಗುತ್ತದೆ. ಆಧುನಿಕ ಪ್ರಪಂಚದಲ್ಲಿ ಅಧಿಕಾರದ ಕೇಂದ್ರೀಕರಣವು ಅನಿವಾರ್ಯವಾಗಿದೆ. ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿನ ಸಂಯುಕ್ತ ವ್ಯವಸ್ಥೆಯನ್ನು ಈ ನಿಟ್ಟಿನಲ್ಲಿ ಗಮನಿಸಬೇಕು. ಅಮೆರಿಕದ ಸಂವಿಧಾನವು ತನಗೆ ಅಲ್ಪ ಅಧಿಕಾರವನ್ನು ನೀಡಿದ್ದರೂ ಅಲ್ಲಿನ ಸಂಯುಕ್ತ ವ್ಯವಸ್ಥೆಯು ಎಲ್ಲವನ್ನೂ ಮೆಟ್ಟಿ ನಿಂತು, ತಾನು ಹಿಂದೆ ಇದ್ದುದಕ್ಕಿಂತ ಹಲವು ಪಟ್ಟು ಬಲಯುತವಾಗಿ ಬೆಳೆದು, ರಾಜ್ಯಗಳಿಗೆ ಗ್ರಹಣವನ್ನು ಹಿಡಿಸಿದೆ. ಇದಕ್ಕೆ ಕಾರಣ ಆಧುನಿಕ ಪರಿಸ್ಥಿತಿಗಳು. ಭಾರತದ ಕೇಂದ್ರವೂ ಇದೇ ರೀತಿಯ ಬೆಳವಣಿಗೆಯನ್ನು ಕಾಣುತ್ತದೆ, ಹಾಗೆ ಅದು ಬಲವಾಗುತ್ತಾ ಸಾಗುವುದನ್ನು ಯಾರೂ ತಡೆಯಲಾಗುವುದಿಲ್ಲ. ಆದರೆ ಅದು ಅತಿಯಾದ ಅಧಿಕಾರದ ಬಲವನ್ನು ತನ್ನಲ್ಲಿ ಕೇಂದ್ರೀಕರಿಸಿಕೊಳ್ಳುವುದನ್ನು ಆದಷ್ಟು ತಡೆಯಬೇಕು. ಅದು ತಾನು ನಿರ್ವಹಿಸಲಾಗದಷ್ಟು ಅಧಿಕಾರವನ್ನು ಹೊಂದಿರಬಾರದು. ಅದರ ಧಾರಕ ಸಾಮರ್ಥ್ಯ ಹಾಗೂ ಅದಕ್ಕೆ ಇರುವ ಅಧಿಕಾರದ ಬಲಗಳ ನಡುವೆ ಸಮತೋಲನವಿರಬೇಕು. ಅದು ತನ್ನ ಭಾರದಿಂದ ತಾನೇ ಕುಸಿಯುವಷ್ಟು ಅಧಿಕಾರವನ್ನು ಅದಕ್ಕೆ ನೀಡುವುದು ಪ್ರಮಾದವಾಗುತ್ತದೆ.

ಕೇಂದ್ರ ಮತ್ತು ಪ್ರಾಂತ್ಯಗಳ ನಡುವೆ ಹಾಗೂ ಕೇಂದ್ರ ಮತ್ತು ಭಾರತೀಯ ರಾಜ್ಯಗಳ ನಡುವೆ ಇರುವ ಸಂಬಂಧವು ಬೇರೆ ಬೇರೆಯ ರೀತಿಯದ್ದಾಗಿವೆ ಎಂಬ ಟೀಕೆಯೂ ಕೇಳಿಬರುತ್ತಿದೆ. ಭಾರತೀಯ ರಾಜ್ಯಗಳು ರಕ್ಷಣೆ, ವಿದೇಶಾಂಗ ವ್ಯವಹಾರ ಮತ್ತು ಸಂಪರ್ಕಗಳನ್ನು ಬಿಟ್ಟು ಕೇಂದ್ರದ ಪಟ್ಟಿಯಲ್ಲಿರುವ ಉಳಿದ ವಿಷಯಗಳನ್ನು ಒಪ್ಪಿಕೊಳ್ಳಲೇಬೇಕೆಂಬ ಅನಿವಾರ್ಯತೆಯಿಲ್ಲ. ಅವುಗಳು ಸಮವರ್ತಿ ಪಟ್ಟಿಯಲ್ಲಿರುವ ವಿಷಯಗಳನ್ನೂ ಒಪ್ಪಿಕೊಳ್ಳಲು ಬದ್ಧವಾಗಿರಬೇಕಿಲ್ಲ. ಕರಡು ಸಂವಿಧಾನದಲ್ಲಿರುವ ರಾಜ್ಯಗಳ ಪಟ್ಟಿಯಲ್ಲಿನ ವಿಷಯಗಳನ್ನೂ

ಅವು ಒಪ್ಪಿಕೊಳ್ಳಬೇಕಾಗಿಲ್ಲ. ಅವು ತಮ್ಮದೇ ಆದ ಸಂವಿಧಾನ ರಚನಾಸಭೆಯನ್ನು ರಚಿಸಿಕೊಳ್ಳಲು ಮತ್ತು ತಮ್ಮದೇ ಆದ ಕರಡು ಸಂವಿಧಾನವನ್ನು ರೂಪಿಸಿಕೊಳ್ಳಲು ಸ್ವತಂತ್ರವಾಗಿರುತ್ತವೆ. ಆದರೆ, ನನ್ನ ಪ್ರಕಾರ ಇವೆಲ್ಲವೂ ಅನರ್ಥಕಾರಿ ಅಂಶಗಳು ಮತ್ತು ಅಸಮರ್ಥನೀಯವಾಗಿರುತ್ತವೆ. ಇವು ಆಯಾ ರಾಜ್ಯಗಳಿಗೆ ಮಾರಕವಾಗಬಹುದು. ರಾಜ್ಯರಾಜ್ಯಗಳ ನಡುವಿನ ವ್ಯತ್ಯಾಸಗಳು ಅವುಗಳ ಕಾರ್ಯನಿರ್ವಹಣಾ ಸಾಮರ್ಥ್ಯವನ್ನು ಕುಂಠಿತಗೊಳಿಸುತ್ತದೆ. ಎಲ್ಲ ಸಂದರ್ಭಗಳಲ್ಲಿಯೂ, ಮತ್ತು ಎಲ್ಲ ಪ್ರದೇಶಗಳಲ್ಲಿಯೂ ಬಳಸಲಾಗದ ಅಧಿಕಾರವು ಅಧಿಕಾರವೇ ಅಲ್ಲ. ಉದಾಹರಣೆಗೆ ಯುದ್ಧವು ಸೃಷ್ಟಿಸಬಹುದಾದ ಸಂದರ್ಭದಲ್ಲಿ ಇಂತಹ ರಾಜ್ಯದ ಅಧಿಕಾರವನ್ನು ಕೆಲವು ಪ್ರದೇಶಗಳಲ್ಲಿ ಸೀಮಿತಗೊಳಿಸಿದರೆ, ಅದು ಇಡೀ ರಾಜ್ಯವನ್ನು ಅಪಾಯಕ್ಕೆ ದೂಡಬಹುದು. ಕರಡು ಸಂವಿಧಾನದಲ್ಲಿನ ಅತ್ಯಂತ ಅಪಾಯಕಾರಿ ಅನುಚ್ಛೇದವೆಂದರೆ, ಅದು ರಾಜ್ಯಗಳಿಗೆ ತಮ್ಮದೇ ಆದ ಸೈನ್ಯವನ್ನು ಇಟ್ಟುಕೊಳ್ಳುವ ಅಧಿಕಾರವನ್ನು ನೀಡಿರುವುದು. ಈ ಅನುಚ್ಛೇದವು ಪ್ರಗತಿವಿರೋಧಿಯಾಗಿದೆ ಮತ್ತು ಇದು ದೇಶದ ಐಕ್ಯಕ್ಕೆ ಭಂಗವನ್ನು ತಂದು ಕೇಂದ್ರ ಸರಕಾರವನ್ನೇ ಕಿತ್ತೊಗೆಯಬಲ್ಲುದು. ನಾನು ಕರಡು ರಚನಾ ಸಮಿತಿಯ ಅಭಿಪ್ರಾಯವನ್ನು ತಪ್ಪಾಗಿ ಗ್ರಹಿಸದೆ ಇರುವೆನೆಂದಾದರೆ, ಅದು ಈ ವಿಧಿಯನ್ನು ಅಳವಡಿಸುವುದಕ್ಕೆ ವಿರೋಧವನ್ನು ಹೊಂದಿತ್ತು. ಪ್ರಾಂತ್ಯಗಳು ಹಾಗೂ ಭಾರತೀಯ ರಾಜ್ಯಗಳ ನಡುವೆ ಮತ್ತು ಅವು ಕೇಂದ್ರದೊಡನೆ ಹೊಂದಿರುವ ಸಾಂವಿಧಾನಿಕ ಸಂಬಂಧಗಳಲ್ಲಿ ಏಕರೂಪತೆಯಿರಬೇಕೆಂದು ಸಮಿತಿಯು ಬಯಸಿತ್ತು. ಆದರೆ, ದುರದೃಷ್ಟವಶಾತ್ ಅದು ಈ ವಿಷಯದಲ್ಲಿ ಇನ್ನೂ ಉತ್ತಮವಾಗಿ ವರ್ತಿಸಲಾಗಲಿಲ್ಲ. ಅದು ಸಂವಿಧಾನ ರಚನಾಸಭೆಯ ನಿರ್ಣಯಗಳಿಗೆ ಬದ್ಧವಾಗಿರಬೇಕಾಗಿತ್ತು ಮತ್ತು ಸಂವಿಧಾನ ರಚನಾಸಭೆಯು ಎರಡು ಸಂಧಾನ ಸಮಿತಿಗಳ ನಡುವೆ ಆದ ಒಪ್ಪಂದಕ್ಕೆ ಬದ್ಧವಾಗಿರಬೇಕಾಗಿತ್ತು.

ಆದರೆ ನಾವು ಜರ್ಮನಿಯಲ್ಲಿ ನಡೆದ ಘಟನೆಗಳಿಂದ ಧೈರ್ಯವನ್ನು ಹೊಂದಬಹುದು. ೧೮೭೦ರಲ್ಲಿ ಬಿಸ್ಮಾರ್ಕ್ ಸಂಘಟಿಸಿದ ಜರ್ಮನ್ ಸಂಯುಕ್ತ ರಾಷ್ಟ್ರವು ೨೫ ಘಟಕಗಳನ್ನು ಹೊಂದಿತ್ತು. ಈ ೨೫ ರಾಜ್ಯಗಳಲ್ಲಿ ೨೨ ರಾಜ್ಯಗಳು ರಾಜಪ್ರಭುತ್ವವನ್ನು ಮತ್ತು ಮೂರು ನಗರಗಳು ಗಣರಾಜ್ಯ ವ್ಯವಸ್ಥೆಯನ್ನು ಹೊಂದಿದ್ದವು. ಈ ಭೇದವು ಕಾಲಕ್ರಮದಲ್ಲಿ ಅಳಿಸಿಹೋಗಿ, ಜರ್ಮನಿಯು ಒಂದೇ ರಾಷ್ಟ್ರವಾಗಿದೆ, ಜರ್ಮನರೆಲ್ಲ ಒಂದೇ ರಾಷ್ಟ್ರಕರಾಗಿದ್ದು, ಒಂದೇ ಸಂವಿಧಾನದ ಅಡಿಯಲ್ಲಿ ಬಾಳುತ್ತಿದ್ದಾರೆ. ಜರ್ಮನಿಯಲ್ಲಿನ ರಾಜ್ಯಗಳು ಒಗ್ಗೂಡುವಿಕೆಗಿಂತ ಶೀಘ್ರವಾಗಿ ಭಾರತದ ರಾಜ್ಯಗಳ ಮತ್ತು ಪ್ರಾಂತ್ಯಗಳ ಒಗ್ಗೂಡುವಿಕೆಯು ಸಾಧ್ಯವಾಗುತ್ತದೆ. ೧೯೪೭ರ ಆಗಸ್ಟ್ ೧೫ರಂದು ಭಾರತದಲ್ಲಿ ೬೦೦ ಭಾರತೀಯ ರಾಜ್ಯಗಳು ಇದ್ದವು. ರಾಜ್ಯಗಳೊಂದಿಗೆ ಪ್ರಾಂತ್ಯಗಳ ಏಕೀಕರಣ ಅಥವಾ ಒಗ್ಗೂಡುವಿಕೆ ಅಥವಾ ಕೇಂದ್ರವು ಕೆಲವು ಪ್ರಾಂತ್ಯಗಳನ್ನು ಕೇಂದ್ರಾಡಳಿತ ಪ್ರದೇಶಗಳನ್ನಾಗಿ ಮಾಡಿರುವುದರಿಂದ ಇಂದು ೨೦-೩೦ ರಾಜ್ಯಗಳು ಇವೆ. ಈ ಪ್ರಕ್ರಿಯೆಯು ವೇಗವಾಗಿ ನಡೆದು ಅದ್ಭುತವಾದ ಪ್ರಗತಿಯು ಸಾಧಿಸಲ್ಪಟ್ಟಿದೆ. ಇನ್ನೂ ಈ ಏಕೀಕರಣಕ್ಕೆ ಒಳಗಾಗದೆ ಇರುವ ರಾಜ್ಯಗಳು ಆದಷ್ಟು ಶೀಘ್ರವಾಗಿ ಉಳಿದ ರಾಜ್ಯಗಳು ಒಪ್ಪಿಕೊಂಡಿರುವ ಷರತ್ತುಗಳಿಗೆ ಅನುಸಾರವಾಗಿ ತಾವೂ ಭಾರತದ ಆಡಳಿತ ವ್ಯವಸ್ಥೆಗೆ ಸೇರಿಕೊಳ್ಳಬೇಕೆಂದು ನಾನು ಅವುಗಳಿಗೆ ವಿನಂತಿಸಿಕೊಳ್ಳುತ್ತೇನೆ. ತನ್ಮೂಲಕ ಅವು ಭಾರತದ ಸಂಯುಕ್ತ ವ್ಯವಸ್ಥೆಗೆ ಅಗತ್ಯವಾದ ಬಲವನ್ನು ತಂದುಕೊಡಬಲ್ಲವು. ಇದರಿಂದ ಅವು ತಮ್ಮದೇ ಆದ ಸಂವಿಧಾನ ರಚನಾಸಭೆಯನ್ನು ನೇಮಿಸಿಕೊಂಡು ತಮ್ಮ ಸಂವಿಧಾನವನ್ನು ರೂಪಿಸಿಕೊಳ್ಳುವ ಜಂಜಡವನ್ನು ತಪ್ಪಿಸಿಕೊಳ್ಳಬಹುದು. ಹೀಗೆ ಮಾಡುವುದರಲ್ಲಿ ಅವರು ಕಳೆದುಕೊಳ್ಳುವುದು ಏನೂ ಇಲ್ಲ. ನನ್ನ ಈ ವಿನಂತಿಯು ನಿರರ್ಥಕವಾಗುವುದಿಲ್ಲವೆಂಬ, ಸಂವಿಧಾನವು ಜಾರಿಗೆ ಬರುವುದಕ್ಕೆ ಮೊದಲೇ ನಾವು ಪ್ರಾಂತ್ಯಗಳು ಮತ್ತು ಭಾರತೀಯ ರಾಜ್ಯಗಳ ನಡುವೆ ಇರುವ ವ್ಯತ್ಯಾಸಗಳನ್ನು ತೊಡೆದುಹಾಕುತ್ತೇವೆಂಬ ಆಶಾಭಾವನೆ ನನಗಿದೆ.

ಕರಡು ಸಂವಿಧಾನದ ಒಂದನೆಯ ಅನುಚ್ಛೇದದಲ್ಲಿ ಭಾರತವನ್ನು ರಾಜ್ಯಗಳ ಕೂಟ ಎಂದು ಕರೆದಿರುವುದಕ್ಕೆ ಕೆಲವು ಟೀಕಾಕಾರರು ಆಕ್ಷೇಪಿಸಿದ್ದಾರೆ. ಅವರ ಪ್ರಕಾರ ರಾಜ್ಯಗಳ ಸಂಯುಕ್ತ ವ್ಯವಸ್ಥೆ ಎಂಬ ಪದಗುಚ್ಛವನ್ನು

ಬಳಸಬೇಕಾಗಿತ್ತು. ಏಕಾತ್ಮಕ ಆಡಳಿತ ವ್ಯವಸ್ಥೆಯಿರುವ ದಕ್ಷಿಣ ಆಫ್ರಿಕಾವನ್ನು ಕೂಟವೆಂದು ಕರೆದಿದ್ದಾರೆಂಬುದು ನಿಜ. ಆದರೆ, ಸಂಯುಕ್ತರಾಷ್ಟ್ರವಾಗಿರುವ ಕೆನಡಾವನ್ನೂ ಕೂಟವೆಂದು ಕರೆಯುತ್ತಾರೆ. ಆದ್ದರಿಂದ ಭಾರತದ ಸಂವಿಧಾನವು ಸಂಯುಕ್ತ ರಾಜ್ಯಗಳ ಸಂವಿಧಾನವೇ ಆಗಿದ್ದರೂ, ಅದನ್ನು ರಾಜ್ಯಗಳ ಕೂಟವೆಂದು ಕರೆದಿರುವುದರಿಂದ ಸಾಮಾನ್ಯ ಪದ್ಧತಿಯ ಉಲ್ಲಂಘನೆಯೇನೂ ಆಗದು. ಆದರೆ ಉದ್ದೇಶಪೂರ್ವಕವಾಗಿಯೇ ರಾಜ್ಯಗಳ ಕೂಟ ಎಂದು ಭಾರತವನ್ನು ಕರೆಯಲಾಗಿದೆ. ಕೆನಡಾದ ಸಂವಿಧಾನದಲ್ಲಿ ಆ ರಾಷ್ಟ್ರವನ್ನು 'ಕೂಟ' ಎಂದು ಏಕೆ ಕರೆದಿದ್ದಾರೆಂಬುದು ನನಗೆ ತಿಳಿದಿಲ್ಲ. ಆದರೆ ನಮ್ಮ ಕರಡು ರಚನಾ ಸಮಿತಿಯು ಆ ಪದವನ್ನು ಏಕೆ ಉಪಯೋಗಿಸಿದೆ ಎಂಬುದನ್ನು ನಾನು ಹೇಳಬಲ್ಲೆ. ಭಾರತವು ಸಂಯುಕ್ತ ರಾಜ್ಯ ವ್ಯವಸ್ಥೆಯಾಗಬೇಕೆಂಬುದನ್ನು ಕರಡು ರಚನಾ ಸಮಿತಿಯ ಬಯಕೆಯಂತೆಯೇ ಇದ್ದರೂ, ಈ ಸಂಯುಕ್ತ ವ್ಯವಸ್ಥೆಯು ರಾಜ್ಯಗಳು ಕೇಂದ್ರದೊಡನೆ ಈ ವ್ಯವಸ್ಥೆಗೆ ಸೇರಬಯಸಲು ಮಾಡಿಕೊಂಡಿರುವ ಒಪ್ಪಂದದ ಪ್ರಕಾರ ರೂಪಿಸಲ್ಪಟ್ಟಿಲ್ಲ, ಯಾವುದೇ ರಾಜ್ಯವು ಈ ವ್ಯವಸ್ಥೆಯಿಂದ ಹೊರಕ್ಕೆ ಹೋಗುವ ತನ್ನ ಹಕ್ಕನ್ನು ಉಳಿಸ್ಸಿಕೊಂಡಿದೆ ಎಂದು ಮಾಡಿಕೊಂಡಿರುವ ಒಪ್ಪಂದವೂ ಅಲ್ಲ. ಈ ಸಂಯುಕ್ತ ವ್ಯವಸ್ಥೆಯು ಒಡೆಯಲಾರದಂತಹ ಕೂಟವಾಗಿದೆ. ಜನತೆಯು ಆಡಳಿತದ ದೃಷ್ಟಿಯಿಂದ ಒಂದು ರಾಜ್ಯದಿಂದ ಮತ್ತೊಂದು ರಾಜ್ಯದ ಪಾಲಾಗಬಹುದಾದರೂ, ಒಟ್ಟಾರೆಯಾಗಿ ರಾಷ್ಟ್ರವು ಒಂದೇ ಆಗಿರುತ್ತದೆ, ಅದರ ಒಟ್ಟಾರೆ ಜನತೆಯು ತನ್ನ ಪರಮಾಧಿಕಾರವನ್ನು ಒಂದೇ ಮೂಲದಿಂದ ಪಡೆದುಕೊಂಡ ರಾಷ್ಟ್ರದ ಜನತೆಯಾಗಿರುತ್ತದೆ. ಅಮೆರಿಕನ್ ರಾಜ್ಯಗಳು ಸಂಯುಕ್ತ ರಾಷ್ಟ್ರ ವ್ಯವಸ್ಥೆಯಿಂದ ಬೇರೆಯಾಗುವ ಹಕ್ಕನ್ನು ಹೊಂದಿಲ್ಲವೆಂಬುದನ್ನು ಹಾಗೂ ತಮ್ಮ ಸಂಯುಕ್ತ ರಾಷ್ಟ್ರ ವ್ಯವಸ್ಥೆಯು ಅಖಂಡವಾಗಿರಲೇಬೇಕೆಂಬುದನ್ನು ಸ್ಥಾಪಿಸಲು, ಅಲ್ಲಿ ಆಂತರಿಕ ಯುದ್ಧವಾಗಬೇಕಾಯಿತು. ಮುಂದಿನ ದಿನಗಳಲ್ಲಿ ಅದರ ಬಗ್ಗೆ ವಿವಿಧ ಊಹೆಗಳಿಗಾಗಲೀ, ವಿವಾದಕ್ಕಾಗಲೀ ಎಡೆ ಮಾಡಿಕೊಡದಂತೆ ಈ ವಿಷಯವನ್ನು ಸ್ಫುಟಗೊಳಿಸುವುದು ಉತ್ತಮವೆಂದು ನಮ್ಮ ಕರಡು ರಚನಾ ಸಮಿತಿಯು ನಿರ್ಧರಿಸಿತ್ತು.

ಸಂವಿಧಾನವನ್ನು ತಿದ್ದುಪಡಿ ಮಾಡಲು ಅವಕಾಶವನ್ನು ನೀಡಿರುವ ಉಪಬಂಧ ಟೀಕಾಕಾರರ ತೀವ್ರ ಟೀಕೆಗೆ ಒಳಗಾಗಿವೆ. ಕರಡು ಸಂವಿಧಾನದಲ್ಲಿ ಸೂಚಿಸಿರುವ ಉಪಬಂಧಗಳು ಸಂವಿಧಾನವನ್ನು ಎನ್ನಲಾಗಿದೆ. ತಿದ್ದುಪಡಿ ಮಾಡುವುದನ್ನು ಬಹಳ ಕಷ್ಟತರವನ್ನಾಗಿ ಮಾಡಿವೆ. ಸಂವಿಧಾನವನ್ನು ಕನಿಷ್ಠಪಕ್ಷ ಮೊದಮೊದಲ ವರ್ಷಗಳಲ್ಲಿ ಸರಳ ಬಹುಮತದಿಂದ ತಿದ್ದುಪಡಿ ಮಾಡಬಹುದಾದ ಅವಕಾಶವನ್ನು ಕಲ್ಪಿಸಬೇಕಾಗಿತ್ತು ಎಂಬ ವಾದವು ಕೂಡ ಬಂದಿದೆ. ಇಲ್ಲಿನ ವಾದವು ಸೂಕ್ಷ್ಮವಾಗಿದೆ ಮತ್ತು ಚಾತುರ್ಯದಿಂದ ಕೂಡಿದೆ. ಈ ವಾದದ ಪ್ರಕಾರ, ಸಂವಿಧಾನ ರಚನಾಸಭೆಯು ವಯಸ್ಕ ಮತದಾನದ ಆಧಾರದ ಮೇಲೆ ಚುನಾಯಿತವಾಗಿಲ್ಲವಾದರೂ, ಸರಳ ಬಹುಮತದಿಂದ ಕರಡು ಬಹುಮತವನ್ನು ಅಂಗೀಕರಿಸಿದೆ, ಆದರೆ ಅದು ವಯಸ್ಕ ಮತದಾನದ ಆಧಾರದ ಮೇಲೆ ಚುನಾಯಿತವಾಗುವ ಸಂಸತ್ತಿಗೆ ಸರಳ ಬಹುಮತದ ಮೇಲೆ ಸಂವಿಧಾನಕ್ಕೆ ತಿದ್ದುಪಡಿಯನ್ನು ಮಾಡುವ ಹಕ್ಕನ್ನು ಕೊಟ್ಟಿಲ್ಲ. ಇದನ್ನು ಕರಡು ಸಂವಿಧಾನದಲ್ಲಿರುವ ಒಂದು ಅಸಂಬದ್ಧತೆಯೆಂದು ಮೆರೆಸಲಾಗುತ್ತಿದೆ. ಈ ವಾದವು ಯಾವ ನೆಲೆಗಟ್ಟಿನ ಮೇಲೂ ನಿಂತಿಲ್ಲದಿರುವುದರಿಂದ ಅದನ್ನು ನಾನು ಸಂಪೂರ್ಣವಾಗಿ ಖಂಡಿಸುತ್ತೇನೆ. ಕರಡು ಸಂವಿಧಾನದಲ್ಲಿ ಸಂವಿಧಾನದ ತಿದ್ದುಪಡಿಯನ್ನು ಮಾಡಲು ಅಳವಡಿಸಿರುವ ಅವಕಾಶಗಳು ಎಷ್ಟು ಸರಳವಾಗಿವೆಯೆಂದು ತಿಳಿಯಲು ಅಮೆರಿಕ ಮತ್ತು ಆಸ್ಟ್ರೇಲಿಯಾದ ಸಂವಿಧಾನಗಳನ್ನು ಅಭ್ಯಾಸ ಮಾಡಬೇಕು. ಅವುಗಳಿಗೆ ಹೋಲಿಸಿದರೆ ನಮ್ಮ ಕರಡು ಸಂವಿಧಾನದಲ್ಲಿ ಇರುವ ವಿಧಿಗಳು ಬಹಳ ಸರಳವಾಗಿವೆಯೆಂಬುದು ತಿಳಿಯುತ್ತದೆ. ಕರಡು ಸಂವಿಧಾನವು, ಸಂವಿಧಾನವನ್ನು ತಿದ್ದುಪಡಿ ಮಾಡಲು ಇರುವ ಜನಮತಗಣನೆಯಂತಹ ತೊಡಕಾದ ಕ್ರಮಗಳನ್ನು ತೆಗೆದುಹಾಕಿದೆ. ತಿದ್ದುಪಡಿಗಳನ್ನು ಮಾಡುವ ಅಧಿಕಾರವನ್ನು ಕೇಂದ್ರ ಸಂಸತ್ತಿಗೆ ಮತ್ತು ರಾಜ್ಯಗಳ ಶಾಸನಸಭೆಗಳಿಗೆ ನೀಡಲಾಗಿದೆ. ಕೆಲವು ಸೀಮಿತ ವಿಷಯಗಳ ತಿದ್ದುಪಡಿಗಳಿಗೆ ಮಾತ್ರ, ಸಂಸತ್ತಿಗೆ ರಾಜ್ಯ ಶಾಸಕಾಂಗದ ಅನುಸಮರ್ಥನೆ

ಅಗತ್ಯವಾಗಿರುತ್ತದೆ. ಸಂವಿಧಾನದ ಉಳಿದೆಲ್ಲ ವಿಧಿಗಳನ್ನು ಸಂಸತ್ತು ತಾನೇ ತಿದ್ದುಪಡಿ ಮಾಡಬಹುದು. ಇಲ್ಲಿ ವಿಧಿಸಿರುವ ಒಂದೇ ಒಂದು ಮಿತಿಯೆಂದರೆ, ಹಾಗೆ ಮಾಡಲು ಪ್ರತಿ ಸದನದಲ್ಲಿ ಹಾಜರಿರುವ ಸದಸ್ಯರಲ್ಲಿ ಮೂರನೆಯ ಎರಡು ಭಾಗದಷ್ಟು ಸದಸ್ಯರ ಮತ್ತು ಪ್ರತಿ ಸದನದ ಸದಸ್ಯರ ಸಂಖ್ಯೆಯಲ್ಲಿ ಹೆಚ್ಚಿನ ಸದಸ್ಯರ ಸಮ್ಮತಿಯನ್ನು ಹೊಂದಿರುವುದು ಅವಶ್ಯ. ಇದಕ್ಕಿಂತ ಇನ್ನೂ ಸರಳವಾದ ಕ್ರಮವನ್ನು ಕಲ್ಪಿಸಿಕೊಳ್ಳುವುದೂ ಕಷ್ಟ.

ಅಸಂಬದ್ಧತೆಯೆಂದು ಇಲ್ಲಿ ಟೀಕಿಸುತ್ತಿರುವವರ ವಾದಕ್ಕೆ ಸಂವಿಧಾನ ರಚನಾಸಭೆ ಹಾಗೂ ಸಂವಿಧಾನದ ಪ್ರಕಾರ ಮುಂದೆ ಆಯ್ಕೆಯಾಗಿ ಬರಲಿರುವ ಸಂಸತ್ತಿನ ಸ್ಥಾನಮಾನಗಳ ಬಗ್ಗೆ ಗೊಂದಲವನ್ನು ಉಂಟುಮಾಡಿಕೊಂಡಿರುವುದು ಅಡಿಗಲ್ಲಾಗಿದೆ. ಸಂವಿಧಾನವನ್ನು ರೂಪಿಸುತ್ತಿರುವ ಸಂವಿಧಾನ ರಚನಾಸಭೆಯು ಯಾವುದೇ ವಿಧವಾದ ಪಕ್ಷಪಾತಪೀಡಿತ ಮನೋಭಾವವನ್ನು ಹೊಂದಿಲ್ಲ. ಕಾರ್ಯಸಾಧುವಾದ ಮತ್ತು ಉತ್ತಮವಾದ ಸಂವಿಧಾನವನ್ನು ರಚಿಸುವ ಉದ್ದೇಶವಲ್ಲದೇ ಯಾವುದೇ ಸ್ವಾರ್ಥಸಾಧಕ ಉದ್ದೇಶವೂ ಅದರಲ್ಲಿಲ್ಲ. ಸಂವಿಧಾನದ ಅನುಚ್ಛೇದಗಳನ್ನು ಪರಿಣಿಸುವಾಗ ಅದು ಯಾವ ಕಾನೂನು, ಕಟ್ಟಳೆಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡಿರಲಿಲ್ಲ. ಮುಂದಿನ ಸಂಸತ್ತು ಸಂವಿಧಾನ ರಚನಾಸಭೆಯ ಕೆಲಸವನ್ನು ಮಾಡಲು ಕುಳಿತಾಗ, ಅದರ ಸದಸ್ಯರು ಸಂವಿಧಾನದ ಕೆಲವು ಅನುಚ್ಛೇದದ ಕಾರಣ ಸಂಸತ್ತಿನ ಮೂಲಕ ಮಾಡಿಸಿಕೊಳ್ಳಲಾಗದ ತಮ್ಮ ಕೆಲಸವನ್ನು ಸ್ವಾರ್ಥ ಸಾಧನೆಯ ಯೋಚನೆಯನ್ನು ಮಾಡಬಹುದೇ ಹೊರತು, ಈಗಿನ ಸಂವಿಧಾನ ರಚನಾಸಭೆಯ ದೃಷ್ಟಿಯಲ್ಲಿ ಯಾವುದೇ ಸ್ವಾರ್ಥವೂ ಇಲ್ಲ. ಇದು ಸಂವಿಧಾನ ರಚನಾಸಭೆ ಹಾಗೂ ಮುಂದೆ ಬರುವ ಸಂಸತ್ತಿನ ನಡುವೆ ಇರುವ ವ್ಯತ್ಯಾಸ. ಸೀಮಿತವಾದ ಮತದಾರರ ಸಮುದಾಯದಿಂದ ಆಯ್ಕೆಯಾಗಿದ್ದರೂ ಸಂವಿಧಾನ ರಚನಾಸಭೆಯು ಸರಳ ಬಹುಮತದ ಮೇಲೆ ತನ್ನ ಗೊತ್ತುವಳಿಗಳನ್ನು ಅಂಗೀಕರಿಸಿದರೂ, ಅದರ ಮೇಲೆ ಏಕೆ ನಂಬಿಕೆ, ವಿಶ್ವಾಸವನ್ನು ಇಡಬಹುದು ಮತ್ತು ವಯಸ್ಕ ಮತದಾನದ ಆಧಾರದ ಮೇಲೆ ಚುನಾಯಿತವಾಗಿ, ಸಂವಿಧಾನವು ತನಗೆ ನೀಡಿರುವ ಅಧಿಕಾರದ ಬಲದಿಂದ ಸಂವಿಧಾನವನ್ನೇ ತಿದ್ದುಪಡಿ ಮಾಡಬಲ್ಲಂತಹ ಸಂಸತ್ತಿನ ಮೇಲೆ ಏಕೆ ವಿಶ್ವಾಸವನ್ನು ಇಡುವುದು ಕಷ್ಟವಾಗುತ್ತದೆ ಎಂಬುದನ್ನು ಇದು ವಿವರಿಸುತ್ತದೆ.

ಸಂವಿಧಾನಕ್ಕೆ ವಿರೋಧವಾಗಿ ಬಂದಿರುವ ಎಲ್ಲ ಟೀಕೆಗಳಿಗೂ ನಾನು ಉತ್ತರಿಸಿದ್ದೇನೆ. ಕಳೆದ ಎಂಟು ತಿಂಗಳಿನಿಂದ ಸಾರ್ವಜನಿಕರ ಮುಂದೆ ಇದ್ದ ಕರಡು ಸಂವಿಧಾನದ ಮೇಲೆ ಬಂದಿರುವ ಮುಖ್ಯ ಟೀಕೆ, ಆರೋಪಗಳಲ್ಲಿ ಯಾವುದಕ್ಕಾದರೂ ಉತ್ತರಿಸದೆ ಬಿಟ್ಟಿರುವೆನೆಂದು ನನಗೆ ಎನಿಸುತ್ತಿಲ್ಲ. ಈಗ ಕರಡು ರಚನಾ ಸಮಿತಿಯು ರಚಿಸಿರುವ ಹಾಗೆ ಕರಡು ಸಂವಿಧಾನವನ್ನು ಅಂಗೀಕರಿಸುವುದು ಅಥವಾ ಅಂಗೀಕರಿಸುವ ಮೊದಲು ಅದರಲ್ಲಿ ಬದಲಾವಣೆಗಳನ್ನು ಮಾಡುವುದು ಸಂವಿಧಾನ ರಚನಾಸಭೆಗೆ ಬಿಟ್ಟದ್ದು.

ಆದರೆ ನಾನು ಹೇಳಬೇಕೆಂದಿರುವುದು ಇದು. ಸಂವಿಧಾನವನ್ನು ಕೆಲವು ತಾತ್ಕಾಲಿಕ ಶಾಸನಸಭೆಗಳಲ್ಲಿ ಚರ್ಚಿಸಲಾಗಿದೆ. ಅದನ್ನು ಬಾಂಬೆ, ಮಧ್ಯಪ್ರಾಂತ್ಯ, ಪಶ್ಚಿಮ ಬಂಗಾಳ, ಬಿಹಾರ, ಮದ್ರಾಸ್ ಮತ್ತು ಪೂರ್ವ ಪಂಜಾಬ್‌ಗಳಲ್ಲಿ ಚರ್ಚಿಸಲಾಗಿದೆ. ಕೆಲವು ಶಾಸನಸಭೆಗಳಲ್ಲಿ ಸಂವಿಧಾನದಲ್ಲಿ ಯೋಜಿಸಿರುವ ಹಣಕಾಸಿನ ಉಪಬಂಧಗಳನ್ನು ಕುರಿತು ತೀವ್ರವಾದ ಆಕ್ಷೇಪಣೆಗಳನ್ನು ಮಾಡಿದ್ದಾರೆ ಮತ್ತು ಮದ್ರಾಸ್ ಶಾಸನಸಭೆಯು ೨೨೬ನೆಯ ಅನುಚ್ಛೇದದ ಬಗ್ಗೆ ಆಕ್ಷೇಪಣೆ ಮಾಡಿದೆ. ಇದನ್ನು ಹೊರತು ಪಡಿಸಿದರೆ, ಬೇರೆ ಯಾವ ಶಾಸನಸಭೆಯೂ ತೀವ್ರತರವಾದ ಆಕ್ಷೇಪಣೆಯನ್ನು ಕರಡು ಸಂವಿಧಾನದ ಮೇಲೆ ಮಾಡಿಲ್ಲ. ಯಾವ ಸಂವಿಧಾನವೂ ಪರಿಪೂರ್ಣವಲ್ಲ, ಅಲ್ಲದೆ, ಕರಡು ರಚನಾ ಸಮಿತಿಯೇ ಕರಡು ಸಂವಿಧಾನವನ್ನು ಉತ್ತಮ ಪಡಿಸಲು ಕೆಲವು ತಿದ್ದುಪಡಿಗಳನ್ನು ಸೂಚಿಸಿದೆ. ಆದರೆ, ಕರಡು ಸಂವಿಧಾನ ರಚನಾ ಸಮಿತಿಯ ಸಭೆಗಳಲ್ಲಿ ನಡೆದ ಚರ್ಚೆಗಳ ಆಧಾರದ ಮೇಲೆ, ಈ ದೇಶವು ಸ್ವತಂತ್ರವಾಗಿ ತನ್ನ ಮೊದಲ ಹೆಜ್ಜೆಗಳನ್ನು ಇಡಲು ಈ

ಸಮಿತಿಯು ರೂಪಿಸಿರುವ ಸಂವಿಧಾನವು ಸಾಕಷ್ಟು ಅನುಕೂಲಕರವಾಗಿದೆ ಎಂದು ನಾನು ಧೈರ್ಯವಾಗಿ ಹೇಳಬಲ್ಲೆ. ಈ ಸಂವಿಧಾನವು ಕಾರ್ಯಸಾಧುವೂ, ನಮ್ಯವೂ ಆಗಿದೆ ಮತ್ತು ಶಾಂತಿ ಹಾಗೂ ಯುದ್ಧದ ಸಮಯಗಳಲ್ಲಿ ದೇಶದ ಏಕತೆಯನ್ನು ಕಾಪಾಡುವುದಕ್ಕೆ ಸಮರ್ಥವೂ ಆಗಿದೆಯೆಂದು ನಾನು ಭಾವಿಸಿದ್ದೇನೆ. ನಾನು ಹೀಗೆ ಹೇಳಬಹುದಾದರೆ, ಮುಂದೆ ಆಡಳಿತದಲ್ಲಿ ವ್ಯವಸ್ಥೆಯು ಕೆಟ್ಟುಹೋದ ಪಕ್ಷದಲ್ಲಿ, ಅದು ನಾವು ಒಂದು ಕೆಟ್ಟ ಸಂವಿಧಾನವನ್ನು ಹೊಂದಿದ್ದೇವೆ ಎಂಬುದನ್ನು ತೋರಿಸುವುದಿಲ್ಲ, ಆದರೆ, ಮಾನವ ಮೂಲತಃ ಕುತಂತ್ರಿ ಎಂದಷ್ಟೆ ಹೇಳಬಹುದು. ಮಾನ್ಯರೆ, ನಾನು ಈಗ ಕರಡು ಸಂವಿಧಾನವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಮಾನ್ಯ ಸಭಾಧ್ಯಕ್ಷರು** : ಮೌಲಾನ ಹಸ್ರತ್ ಮೋಹಾನಿಯವರು ತಿದ್ದುಪಡಿಯೊಂದಕ್ಕೆ ಸೂಚನೆಯನ್ನು ನೀಡಿದ್ದಾರೆ. ಅದನ್ನು ಇಂದು ಬೆಳಗ್ಗೆ ಹನ್ನೊಂದೂವರೆಗೆ ನೀಡಲಾಗಿತ್ತು. ಅದಕ್ಕೆ ನಾನು ಅನುಮತಿಯನ್ನು ನೀಡಿದ್ದೇನೆ. ಏಕೆಂದರೆ, ಹಾಗೆ ಮಾಡದಿದ್ದರೆ ಇನ್ನೊಂದು ತಿದ್ದುಪಡಿಯ ದಾರಿಯನ್ನು ನಾನು ಮುಚ್ಚಿದಂತೆ ಆಗುತ್ತದೆ, ಮೌಲಾನಾ ಸಾಹಿಬ್, ನೀವು ನಿಮ್ಮ ತಿದ್ದುಪಡಿಯನ್ನು ಮಂಡಿಸುವಿರಾ?

**ಮೌಲಾನಾ ಹಸ್ರತ್ ಮೋಹಾನಿ** : *[ಮಾನ್ಯರೆ, ನಾನು ಸೂಚನೆಯನ್ನು ನೀಡಿರುವ ತಿದ್ದುಪಡಿಯ ವಿಷಯ ಈ ಸಂವಿಧಾನ ರಚನಾಸಭೆಯು ಕ್ರಮಬದ್ಧವಾದುದಲ್ಲ ಮತ್ತು ನಾನು ಹೀಗೆ ಹೇಳುವುದಕ್ಕೆ ನನಗೆ ಮೂರು ಕಾರಣಗಳಿವೆ. ಮೊದಲನೆಯ ಹಾಗೂ ಬಹುಮುಖ್ಯವಾದ ಕಾರಣವೆಂದರೆ.....]*

**ಶ್ರೀ ಬಿ. ದಾಸ್** (ಒರಿಸ್ಸಾ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಮೌಲಾನಾ ಸಾಹಿಬ್ ಅವರು ದಯವಿಟ್ಟು ಮೊದಲು ತಮ್ಮ ತಿದ್ದುಪಡಿಯನ್ನು ಓದುತ್ತಾರೆಯೇ?

**ಮಾನ್ಯ ಸಭಾಧ್ಯಕ್ಷರು** : ಅವರ ತಿದ್ದುಪಡಿಯನ್ನು ನಾನು ಓದುತ್ತೇನೆ. ಅದು ಹೀಗಿದೆ:

"ಒಂದು ಹೊಸ ಹಾಗೂ ಸಮರ್ಥ ಸಂವಿಧಾನ ರಚನಾಸಭೆಯನ್ನು ಕೋಮುವಾದಿ ಪಕ್ಷಗಳನ್ನು ಬಿಟ್ಟು, ರಾಜಕೀಯ ಪಕ್ಷಗಳ ಸಹಾಯದಿಂದ ಜಂಟಿ ಮತದಾರ ಸಮುದಾಯದಿಂದ ಆಯ್ಕೆ ಮಾಡುವಂತೆ ಮಾಡುವವರೆಗೆ, ಭಾರತದ ಸಂವಿಧಾನದ ಕರಡನ್ನು ಪರಿಶೀಲಿಸುವ ಕಾರ್ಯವನ್ನು ಮುಂದೂಡಬೇಕು."

ಇದು ಅವರು ಸೂಚಿಸಿರುವ ತಿದ್ದುಪಡಿ.

**ಶ್ರೀ ಬಿ. ದಾಸ್** : ಮಾನ್ಯರೆ, ನಾನಿಲ್ಲಿ ಕ್ರಿಯಾಲೋಪ ಎತ್ತಬಹುದೆ? ನನ್ನ ಪ್ರಕಾರ, ಮೌಲಾನಾ ಸಾಹಿಬ್ ಅವರು ನಿಷೇಧಾತ್ಮಕವಾದ ತಿದ್ದುಪಡಿಯನ್ನು ಇಲ್ಲಿ ಮಂಡಿಸಬಾರದು......

**ಮಾನ್ಯ ಸಭಾಧ್ಯಕ್ಷರು** : ನೀವು ಅವರಿಗೆ ಅವರ ತಿದ್ದುಪಡಿಯನ್ನು ಮಂಡಿಸಲು ಅವಕಾಶವನ್ನು ಕೊಡುವುದಿಲ್ಲವೇ?

**ಶ್ರೀ ಬಿ. ದಾಸ್** : ಅವರು ಹಿಂದೂಸ್ತಾನಿಯಲ್ಲಿ ಮಾತನಾಡಿದರು, ಅದರಿಂದ ಹೊಮ್ಮಿದ ಅರ್ಥವೆಂದರೆ ಅವರು ಈಗಾಗಲೇ ತಿದ್ದುಪಡಿಯನ್ನು ಮಂಡಿಸಿದ್ದಾರೆ. ಇದು ಸದನದ ಕಾರ್ಯವು ನಡೆಯುವ ರೀತಿಗೆ ವಿರುದ್ಧವಾಗಿದೆ. ಆದ್ದರಿಂದ ಇಲ್ಲಿ ಕ್ರಿಯಾಲೋಪವಾಗಿದೆ ಮತ್ತು ಇದಕ್ಕೆ ಅನುಮತಿಯನ್ನು ನೀಡಬಾರದು.

**ಮಾನ್ಯ ಸಭಾಧ್ಯಕ್ಷರು** : ಮೊದಲು ಮೌಲಾನಾ ಸಾಹಿಬ್ ಅವರಿಗೆ ಅವರ ತಿದ್ದುಪಡಿಯನ್ನು ಮಂಡಿಸಲು ಅವಕಾಶವನ್ನು ಕೊಡುವುದು ಉತ್ತಮವೆಂದು ನಾನು ಭಾವಿಸಿದ್ದೇನೆ. ಅನಂತರ ನೀವು ನಿಮ್ಮ ಕ್ರಿಯಾಲೋಪವನ್ನು ಎತ್ತಬಹುದು.

**ಮೌಲಾನಾ ಹಸ್ರತ್ ಮೋಹಾನಿ** : *[ಈ ಸಂವಿಧಾನ ರಚನಾಸಭೆಯನ್ನು ನಾನು ಕ್ರಮಬದ್ಧವಾದ ಸಭೆಯಲ್ಲ ಎಂದು ಹೇಳುವುದಕ್ಕೆ ಇದ್ದ ಕಾರಣವನ್ನು ವಿವರಿಸುತ್ತಿದ್ದೆ. ಮೊದಲನೆಯದಾಗಿ, ಜಗತ್ತಿನಲ್ಲಿ ಯಾವ ಭಾಗದಲ್ಲಿಯೆ ಆಗಲಿ ಮೊತ್ತಮೊದಲ ಬಾರಿಗೆ ಸಂವಿಧಾನ ರಚನಾಸಭೆಯನ್ನು ನೇಮಿಸಿದ್ದು ಕ್ರಾಂತಿಯ ಪರಿಣಾಮವಾಗಿ. ಕ್ರಾಂತಿಯೆಂದರೆ ಅದು ರಕ್ತಪಾತವನ್ನು ಒಳಗೊಂಡ ಕ್ರಾಂತಿಯೇ ಆಗಿರಬೇಕು ಎಂದೇನಿಲ್ಲ.

ಕ್ರಾಂತಿಯ ಅರ್ಥವೆಂದರೆ, ಸದ್ಯದಲ್ಲಿ ಇರುವ ಸರಕಾರವು ತನ್ನ ಅಂತಿಮ ದಿನವನ್ನು ತಲುಪಿದೆ, ಹೊಸ ಸರಕಾರವು ಇನ್ನೂ ಹುಟ್ಟಿಲ್ಲ, ಆದ್ದರಿಂದ ಹೊಸ ಸಂದರ್ಭಕ್ಕೆ ಅನುಗುಣವಾಗಿರುವ ಹೊಸ ಸಂವಿಧಾನವನ್ನು ರಚಿಸಲು ಒಂದು ಸಂವಿಧಾನ ರಚನಾಸಭೆಯನ್ನು ಅನಿವಾರ್ಯವಾಗಿ ರಚಿಸಬೇಕಾಗುತ್ತದೆ. ಹಿಂದೆ ಇದ್ದ ಸರಕಾರವೇ ಮುಂದುವರಿಯಬಹುದಿದ್ದರೆ, ಹೊಸ ಸಂವಿಧಾನದ ಅಗತ್ಯವೇ ಇರುತ್ತಿರಲಿಲ್ಲ. ಡಾ. ಅಂಬೇಡ್ಕರ್ ಅವರು ರಚಿಸಿರುವ ನಮ್ಮ ಸಂವಿಧಾನದ ಕರಡನ್ನು ನೋಡಿ. ಅದರಲ್ಲಿ ಹೊಸದೇನೂ ಇಲ್ಲ. ಅವರೇ ಒಪ್ಪಿಕೊಂಡ ಹಾಗೆ, ೧೯೩೫ರ ಭಾರತ ಸರ್ಕಾರದ ಅಧಿನಿಯಮದಿಂದ ಹೆಚ್ಚಿನ ಭಾಗವನ್ನು ತೆಗೆದುಕೊಂಡಿದ್ದಾರೆ, ಉಳಿದಂತೆ ಇತರ ದೇಶಗಳ ಸಂವಿಧಾನದಿಂದ ತೆಗೆದುಕೊಂಡಿದ್ದಾರೆ. ಕೆಲವಂಶಗಳು ಇಲ್ಲಿಂದ, ಮತ್ತೆ ಕೆಲವಂಶಗಳು ಅಲ್ಲಿಂದ. ಒಟ್ಟಿನಲ್ಲಿ ಅದು ಗೊಂದಲದ ಗೂಡಾಗಿದೆ. ಇದು ನಮ್ಮ ಮಿತ್ರ ಡಾ. ಅಂಬೇಡ್ಕರ್ ಅವರ ಕೊಡುಗೆ. ಇದರ ಬಗ್ಗೆ ಇರುವ ನನ್ನ ದೊಡ್ಡ ಆಪಾದನೆಯೆಂದರೆ, ಈ ಕರಡನ್ನು ತಯಾರಿಸಲು ಅವರು ಇತರ ದೇಶಗಳ ಸಂವಿಧಾನದಿಂದ ಗರಿಷ್ಠ ಅಂಶಗಳನ್ನು ತೆಗೆದುಕೊಳ್ಳಬಹುದಾದರೆ, ಅವರು ಉತ್ತಮವಾದ ಸಂವಿಧಾನಗಳಿಂದ, ಇತ್ತೀಚಿನ ಅಂಶಗಳನ್ನು ಏಕೆ ತೆಗೆದುಕೊಳ್ಳಲಾಗಲಿಲ್ಲ? ಅವರ ದೃಷ್ಟಿಯಿದ್ದುದೆಲ್ಲಾ ಆಸ್ಟ್ರೇಲಿಯಾ, ಕೆನಡಾ, ಅಮೆರಿಕ ಮತ್ತು ಇಂಗ್ಲೆಂಡ್ ದೇಶಗಳ ಸಂವಿಧಾನದತ್ತ. ಅವರು ಸೋವಿಯತ್ ರಷ್ಯಾದ ಸಂವಿಧಾನವನ್ನು ಏಕೆ ನೋಡಲಿಲ್ಲ. ಅವರು ತಮ್ಮ ಭಾಷಣದಲ್ಲಿ ಹೇಳಿದ ಅಂಶಗಳನ್ನೆಲ್ಲ ನಾನು ಗುರುತು ಹಾಕಿಕೊಂಡಿದ್ದೇನೆ. ಅವುಗಳಿಗೆ ಉತ್ತರಿಸಲು ಇದು ಸರಿಯಾದ ಸಮಯವಲ್ಲ. ಅವರು ತಾವು ಕೈಯಿಟ್ಟ ಕಡೆಯಲ್ಲಿ ಇದ್ದ ಎಲ್ಲ ಕೆಟ್ಟ ಅಂಶಗಳನ್ನೂ ಇಲ್ಲಿಗೆ ತಂದು ಇರಿಸಿದ್ದಾರೆ. ಸಂವಿಧಾನದಲ್ಲಿ ಅನಮ್ಯತೆ ಮತ್ತು ಅತಿ ಸೂತ್ರನಿಷ್ಠತೆ ಇರಬಾರದು ಎಂಬುದನ್ನು ಅವರು ಗುರುತಿಸುತ್ತಾರೆ. ಆದರೂ ಅವರು ಹೇಳುವ ಪ್ರಕಾರ ಏಕಾತ್ಮಕ ವ್ಯಸ್ಥೆಯನ್ನುಳ್ಳ ಆಡಳಿತ ವ್ಯವಸ್ಥೆಯು ಸ್ಥಾಪನೆಯಾಗಲಿದೆ. ಗ್ರಾಮ ಪಂಚಾಯತಿಗಳಿಗೆ ಅವಕಾಶವಿಲ್ಲವೆಂದು ಒಂದೆಡೆ ಅವರು ಹೇಳಿದ್ದಾರೆ. ಅವರು ಸೋವಿಯತ್ ರಷ್ಯಾದ ಸಂವಿಧಾನವನ್ನು ಪರಿಗಣಿಸಿದ್ದಿದ್ದರೆ, ಅವರ ಹಾದಿ ಸುಗಮವಾಗಿರುತ್ತಿತ್ತು. ನಾನು ಇದರ ಪರವಾಗಿ ವಾದಿಸುತ್ತೇನೆ ಮತ್ತು ಅವರಿಗೆ ಈ ವಿಷಯದಲ್ಲಿ ಸವಾಲನ್ನು ಹಾಕುತ್ತೇನೆ. ಉದಾಹರಣೆಗೆ, ಏಕಾತ್ಮಕವಾದ ಹಾಗೂ ಪ್ರಬಲವಾದ ಕೇಂದ್ರವಿಲ್ಲದಿದ್ದರೆ, ಏನನ್ನೂ ಸಾಧಿಸಲಾಗುವುದಿಲ್ಲವೆಂದು ಅವರೇ ಹೇಳುತ್ತಾರೆ. ಅಂತಹ ಮಾತುಗಳು ಇಲ್ಲಿ ಅಸಂಗತವಾಗಿರುತ್ತವೆ. ಆದರೆ ಈ ವಿಷಯಗಳು ಸೋವಿಯತ್ ರಷ್ಯಾ ಸಂವಿಧಾನದಲ್ಲಿವೆ ಎಂಬುದು ಅವರಿಗೆ ತಿಳಿದಿಲ್ಲ. ಅವರು ಮಾಡಿರುವುದೆಂದರೆ, ಕೆಲವು ವಿಷಯಗಳನ್ನು ಪ್ರಾಂತ್ಯಗಳಿಗೆ ನೀಡಿದ್ದಾರೆ, ಕೆಲವನ್ನು ಕೇಂದ್ರಕ್ಕೆ ನೀಡಿದ್ದಾರೆ ಮತ್ತೆ ಉಳಿದವುಗಳನ್ನು ಸಮವರ್ತಿ ಪಟ್ಟಿಯಲ್ಲಿ ಇರಿಸಿದ್ದಾರೆ. ಸೋವಿಯತ್ ರಷ್ಯಾದಲ್ಲಿ ಪ್ರತಿಯೊಂದು ರಾಜ್ಯವೂ ಖಾಯಂ ಆದ ಗಣರಾಜ್ಯವಾಗಿದೆ. ಅವುಗಳ ವಿಶ್ವಾಸವನ್ನು ಗಳಿಸಿಕೊಳ್ಳುವುದಕ್ಕೋಸ್ಕರ, ಅವುಗಳಿಗೆ ರಕ್ಷಣೆ, ವಿದೇಶಾಂಗ ಮತ್ತು ಸಂಪರ್ಕ ಖಾತೆಗಳ ಜವಾಬ್ದಾರಿಯನ್ನು ನೀಡಲಾಗಿದೆ. ಅದರಿಂದಾಗಿರುವ ಪರಿಣಾಮವೇನು? ಡಾ. ಅಂಬೇಡ್ಕರ್ ಅವರ ಪ್ರಕಾರ ಇದರಿಂದ ಪ್ರಗತಿಗೆ ಅಡಚಣೆಯಾಗುತ್ತದೆ. ಆದರೆ, ಸೋವಿಯತ್ ರಷ್ಯಾ ತನ್ನ ಅಂಗ ರಾಜ್ಯಗಳ ವಿಶ್ವಾಸವನ್ನು ಗಳಿಸಿಕೊಂಡಿದೆ. ಈ ವಿಶ್ವಾಸದಿಂದಾಗಿ, ಕಳೆದ ಯುದ್ಧದಲ್ಲಿ ಸೋವಿಯತ್ ದೇಶದ ಎಲ್ಲ ಭಾಗಗಳಿಂದಲೂ – ಅವುಗಳಲ್ಲಿರುವ ಜನತೆಯ ದೃಷ್ಟಿಯಿಂದ ನೋಡಿದರೆ ಅವೆಲ್ಲವೂ ಮುಸ್ಲಿಮ್ ಗಣರಾಜ್ಯಗಳು, ಅಂತಹ ಎಲ್ಲ ರಾಜ್ಯಗಳಿಂದಲೂ – ಸೋವಿಯತ್ ಒಕ್ಕೂಟಕ್ಕೆ ಸಹಾಯವು ದೊರೆತಿದೆ. ಕಕೇಸಿಯಾದ ಜನತೆ ಹಾಗೂ ಯುದ್ಧದ ಅನಾಹುತಕ್ಕೆ ಒಳಗಾಗಿರುವ ಎಲ್ಲ ರಾಜ್ಯಗಳ ಜನತೆ ಸೋವಿಯತ್ ಒಕ್ಕೂಟಕ್ಕೆ ತಮ್ಮ ಹೃದಯಪೂರ್ವಕ ಬೆಂಬಲವನ್ನು ನೀಡಿದ್ದಾರೆ. ಅಂತಹ ಬೆಂಬಲವನ್ನು ನೀಡಿದ ಕೊಸಾಕ್ ಮತ್ತು ಇತರರೆಲ್ಲರೂ ಸೋವಿಯತ್ ಒಕ್ಕೂಟಕ್ಕೆ ಸೇರಿದವರೇ. ಆದ್ದರಿಂದ ಡಾ. ಅಂಬೇಡ್ಕರ್ ಅವರ ವಾದವು ಸರಿಯಿಲ್ಲ. ಅವರು ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದಿಲ್ಲ, ಆದರೆ ಎಲ್ಲರೂ ಒಗ್ಗೂಡಬೇಕು ಎಂದು ಹೇಳುತ್ತಾರೆ.]*

**ಪಂಡಿತ್ ಬಾಲಕೃಷ್ಣ ಶರ್ಮ** : ನಾನು ಇಲ್ಲಿ ಕ್ರಿಯಾಲೋಪವನ್ನು ಎತ್ತಬಹುದೇ? ಗೌರವಾನ್ವಿತ ಮೌಲಾನಾ

ಸಾಹಿಬ್ ಅವರು ಸಂವಿಧಾನದ ಮಹತ್ತ್ವದ ಬಗ್ಗೆ ಹೇಳುತ್ತಿದ್ದಾರೆ, ಆದರೆ ಅವರು ಮಂಡಿಸಿರುವ ತಿದ್ದುಪಡಿಯ ಪ್ರಕಾರ ನಾವು ಈ ಸಂವಿಧಾನವನ್ನು ಪರಿಗಣಿಸಬಾರದು. ನಾವು ಸಂವಿಧಾನವನ್ನು ಕುರಿತ ಚರ್ಚೆಯನ್ನು ಮುಂದೂಡುವ ಬಗೆಗೆ ಮಾತನಾಡುತ್ತಿರುವಾಗ, ಆ ಸಂವಿಧಾನವನ್ನು ಪ್ರಶಂಸಿಸುವುದು ತರವಲ್ಲ.

**ಮಾನ್ಯ ಸಭಾಧ್ಯಕ್ಷರು** : ನೀವು ಅವರನ್ನು ಮಾತನಾಡಲು ಬಿಟ್ಟರೆ ಸ್ವಲ್ಪ ಸಮಯವು ಉಳಿಯುತ್ತದೆ ಎಂದು ನನ್ನ ಎಣಿಕೆ.

**ಮೌಲಾನಾ ಹಸ್ರತ್ ಮೋಹಾನಿ** : *[ನಾನು ಈಗಾಗಲೇ ಹೇಳಿರುವುದನ್ನು ಮತ್ತೆ ಹೇಳುತ್ತೇನೆ, ಈ ಸಭೆಯು ಕ್ರಮಬದ್ಧವಾದ ಸದನವಲ್ಲ, ನೀವು ಜಗತ್ತಿನ ಎಲ್ಲ ಸಂವಿಧಾನಗಳನ್ನೂ ಅಧ್ಯಯನ ಮಾಡಿದ್ದೀರಿ ಆದರೆ ನೀವು ಹೊಸ ಹಾಗೂ ಉತ್ತಮವಾದ ಸಂವಿಧಾನಗಳನ್ನು ನೋಡಿಲ್ಲ. ಎರಡನೆಯ ಅಂಶವೆಂದರೆ, ನಮ್ಮ ಸಂವಿಧಾನ ರಚನಾಸಭೆಯನ್ನು ಆಯ್ಕೆ ಮಾಡಲು ಉಪಯೋಗಿಸಿರುವ ಮಾನದಂಡಗಳೇನು? ಈ ಮಂಡಲಿಯನ್ನು ಕೋಮುದೃಷ್ಟಿಯಿಂದ ಆಯ್ಕೆ ಮಾಡಲಾಗಿದೆ. ಮುಸ್ಲಿಮರು ಮುಸ್ಲಿಮರನ್ನು ಮತ್ತು ಹಿಂದೂಗಳು ಹಿಂದೂಗಳನ್ನು ಆಯ್ಕೆ ಮಾಡಿದ್ದಾರೆ, ಆದರೆ ರಾಜ್ಯಗಳು ಇಲ್ಲಿ ಪ್ರಾತಿನಿಧ್ಯವನ್ನು ಪಡೆದಿಲ್ಲ. ಸಂವಿಧಾನ ರಚನಾಸಭೆಯ ಮೊದಲ ಸಭೆಯು ನಡೆದಾಗಿದ್ದ ಪರಿಸ್ಥಿತಿ ಯಾವುದು? ನೀವೇ ಒಪ್ಪಿಕೊಂಡಿರುವ ಹಾಗೆ ಆಗ ಮೂರು ಪಕ್ಷಗಳು ಇದ್ದವು – ಕಾಂಗ್ರೆಸ್, ಮುಸ್ಲಿಮ್ ಲೀಗ್ ಮತ್ತು ರಾಜ್ಯಗಳು; ಅಲ್ಲಿಯವರೆಗೆ ರಾಜ್ಯಗಳು ಪ್ರವೇಶಿಸಿರಲಿಲ್ಲ. ಇನ್ನೂ ಮುಸ್ಲಿಮ್ ಲೀಗ್‌ನ ಯಾವ ಸದಸ್ಯರೂ ಭಾಗವಹಿಸಿರಲಿಲ್ಲ. ಅದರ ಪರಿಣಾಮವೆಂದರೆ, ಸಂವಿಧಾನದ ರಚನೆಯಲ್ಲಿ ಒಂದೇ ಪಕ್ಷದ ಕೈವಾಡವಿದೆ. ನೀವು ಅದನ್ನು ಇತರರ ಮೇಲೆ ಹೇಗೆ ಹೇರುತ್ತೀರಿ? ನಾನು ಹೇಳುವುದೇನೆಂದರೆ, ಒಂದೇ ಪಕ್ಷವು ರೂಪಿಸಿರುವ ಸಂವಿಧಾನದ ಮೇಲೆ ನಾವು ವಿಶ್ವಾಸವನ್ನು ಇರಿಸಲು ಸಾಧ್ಯವಿಲ್ಲ. ಈಗ ಇರುವ ಪರಿಸ್ಥಿತಿಯಲ್ಲಿಯೂ ಅದನ್ನೇ ನೋಡುತ್ತಿದ್ದೇವೆ, ಅಂದರೆ, ಇಲ್ಲಿ ಇರುವುದು ಒಂದೇ ಪಕ್ಷ. ಇದರ ಅರ್ಥ, ಮುಸ್ಲಿಮ್ ಲೀಗ್ ತನ್ನ ಅಸ್ತಿತ್ವವನ್ನು ಕಳೆದುಕೊಂಡಿದೆ, ಅದು ತನ್ನನ್ನು ತಾನೇ ವಿಸರ್ಜಿಸಿಕೊಂಡಿದೆ, ಎಲ್ಲ ರಾಜ್ಯಗಳೂ ಭಾರತದ ಒಕ್ಕೂಟದಲ್ಲಿ ಒಂದಾಗಿ ಹೋಗಿವೆ, ಈಗ ಇರುವುದು ಭಾರತ ಸರ್ಕಾರವೊಂದೇ, ಅದು ಒಂದೇ ಪಕ್ಷವು ಇರುವ ಸರ್ಕಾರ. ಈ ಕಾರಣಕ್ಕಾಗಿಯೇ ನಾವು ರಾಜಕೀಯ ಪಕ್ಷಗಳನ್ನು ರಚಿಸಿಕೊಳ್ಳಬೇಕಾಗಿದೆ, ಅದರಿಂದ ನಿಮ್ಮ ಸಮಸ್ಯೆಯು ಕೊನೆಗಾಣಲಿದೆ.]*

**ಶ್ರೀ ಸತ್ಯನಾರಾಯಣ ಸಿನ್ಹ** (ಬಿಹಾರ : ಸಾಮಾನ್ಯ) : *[ನೀವು ಯಾವುದಾದರೂ ಪರಿಹಾರ ಮಾರ್ಗವನ್ನು ಕಂಡುಕೊಂಡಿದ್ದೀರಾ?]*

**ಮೌಲಾನಾ ಹಸರತ್ ಮೋಹಾನಿ** : *[ನಾನು ಆ ವಿಷಯಕ್ಕೆ ಬರುತ್ತಿದ್ದೇನೆ. ಬಹುಸಂಖ್ಯಾತರ ಪಕ್ಷವು ಅಲ್ಪಸಂಖ್ಯಾತರ ಪಕ್ಷಕ್ಕೆ ಅನುಕಂಪವನ್ನು ತೋರಿಸಬೇಕು ಎಂದು ಡಾ. ಅಂಬೇಡ್ಕರ್ ಅವರು ಈಗ ತಾನೆ ಹೇಳಿದರು. ನಾನು ಹೇಳುತ್ತೇನೆ: ನಮಗೆ ಅದು ಬೇಕಾಗಿಲ್ಲ. ನೀವು ಸಂವಿಧಾನದಲ್ಲಿ ಮುಸ್ಲಿಮರಿಗಾಗಿ ಶೇ. ೧೪ರ ಮೀಸಲಾತಿಯನ್ನು ನೀಡಿದ್ದೀರಿ. ನೀವು ಶೇ ೮೬ರಷ್ಟು ಇದ್ದೀರಿ ಮತ್ತು ಮುಸ್ಲಿಮರು ಶೇ. ೧೪ರಷ್ಟು ಇದ್ದಾರೆ ಎಂದು ನೀವು ಇನ್ನೂ ಭಾವಿಸಿದ್ದೀರಿ. ನಿಮ್ಮಲ್ಲಿ ಈ ಕೋಮುಭಾವನೆ ಇರುವ ವರೆಗೂ ಏನನ್ನೂ ಮಾಡಲು ಸಾಧ್ಯವಿಲ್ಲ. ಮುಸ್ಲಿಮರು ಅಲ್ಪಸಂಖ್ಯಾತರಾಗಿದ್ದಾರೆ ಎಂದು ನೀವು ಏಕೆ ಹೇಳುತ್ತೀರಿ? ಎಲ್ಲಿಯವರೆಗೆ ನೀವು ಕೋಮುಬಣ್ಣದಲ್ಲಿ ಸಮಾಜವನ್ನು ಚಿತ್ರಿಸುತ್ತಿರುತ್ತೀರಿ, ಅಲ್ಲಿಯ ವರೆಗೆ ಮುಸ್ಲಿಮರು ಅಲ್ಪಸಂಖ್ಯಾತರಾಗಿಯೇ ಉಳಿಯುತ್ತಾರೆ. ನಾವು ಒಂದು ರಾಜಕೀಯ ಪಕ್ಷವಾಗಿ ಅಥವಾ ಸ್ವತಂತ್ರ ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿ ಅಥವಾ ಸಮಾಜವಾದಿಗಳಾಗಿ ಬಂದು ಒಂದು ಸಮ್ಮಿಶ್ರ ಪಕ್ಷವಾದರೆ, ಅವರೆಲ್ಲರನ್ನೂ ಉಳಿದವರ ವಿರುದ್ಧವಾಗಿ ನಿಲ್ಲಿಸುತ್ತೀರಿ.

ಬಹಳ ಕಾಲವು ಸಂದಿದೆ ಮತ್ತು ಹಲವು ಘಟನೆಗಳು ಘಟಿಸಿವೆ ಹಾಗೂ ನೀವು ಬಹಳ ಕಷ್ಟವನ್ನು ಪಟ್ಟಿದ್ದೀರಿ ಎಂದು ನೀವು ಹೇಳುತ್ತೀರಿ. ಮಾನ್ಯ ಸಭಾಧ್ಯಕ್ಷರೆ, ಪಂಡಿತ್ ಜವಾಹರಲಾಲ್ ನೆಹರೂ ಅವರು

ಕರಡು ಸಂವಿಧಾನವನ್ನು ಮಂಡಿಸಿದಾಗ ನಾನು ಆಕ್ಷೇಪಣೆಯನ್ನು ಎತ್ತಿದ್ದೆ. ಆಗ ಅವರು ನನಗೆ ಪ್ರಾಥಮಿಕ ಹಂತದ ವಿಷಯಗಳನ್ನು ಬಿಟ್ಟುಬಿಡುವಂತೆ ಸಲಹೆಯನ್ನು ನೀಡಿದ್ದರು ಎಂಬುದು ನನ್ನ ನೆನಪಿನಲ್ಲಿ ಇದೆ. ಆಗ 'ಮೊದಲು ಪರಿಹರಿಸಬೇಕಾದ ವಿಷಯವನ್ನು ತ್ಯಜಿಸುವುದು ಅಸಂಬದ್ಧ' ಎಂದು ನಾನು ಅವರಿಗೆ ಹೇಳಿದ್ದೆ. ಅಲ್ಲದೆ, ಹಾಗೆ ಮಾಡುವುದರಿಂದ ಗಟ್ಟಿಯಾದ ಹಾಗೂ ಸ್ಥಿರವಾದ ನಿಲುವನ್ನು ತೆಗೆದುಕೊಳ್ಳುವುದಕ್ಕೆ ಅವರಿಗೆ ಸಾಧ್ಯವಾಗುವುದಿಲ್ಲ, ಬದಲಿಗೆ ಅನಾವಶ್ಯಕ ವಿಷಯಗಳನ್ನು ಎಲ್ಲೆಡೆ ತುಂಬಲಿದ್ದಾರೆ ಎಂದೂ ಹೇಳಿದ್ದೆ. ಯಾವ ನಿರ್ಣಯವನ್ನೂ ತೆಗೆದುಕೊಳ್ಳದೆ, ಸಂವಿಧಾನವನ್ನು ರೂಪಿಸಲು ತೊಡಗಿದರೆ ಇವೇ ಪ್ರಶ್ನೆಗಳು ಎದುರಾದಾಗ ಏನು ಮಾಡುತ್ತೀರಿ ಎಂದು ಅವರನ್ನು ನಾನು ಕೇಳಿದ್ದೆ. ಇದು ನಿರರ್ಥಕ. ಯಾವ ರೀತಿಯ ಸಂವಿಧಾನವು ಇರಬೇಕು ಎಂಬುದನ್ನು ನಾವು ಯೋಚಿಸಬೇಕು. ನಾವು ಒಂದು ಚಿತ್ರವನ್ನು ಬರೆಯಬೇಕೆಂದಿದ್ದೇವೆ, ಆದರೆ ಅದನ್ನು ಸರಿಯಾಗಿ ಬರೆಯದಿದ್ದರೆ, ಅದು ಚಿತ್ರವೇ ಆಗುವುದಿಲ್ಲ. ನೀವು ಬಹಳ ಕಷ್ಟಪಟ್ಟಿದ್ದೀರಿ ಮತ್ತು ಸಾಕಷ್ಟು ಸಮಯವು ಕಳೆದಿದೆ ಎಂದು ನೀವು ಹೇಳುತ್ತೀರಿ. ನಾನು ಹೇಳುವ ಉತ್ತರವೆಂದರೆ, ಅದರಲ್ಲಿ ಕಷ್ಟವೇನೂ ಇರಲಿಲ್ಲ ಮತ್ತು ಅಪಾಯವೂ ಇರಲಿಲ್ಲ. ಆಗಲೂ ನಾನು ಅದನ್ನು ಪ್ರತಿಭಟಿಸಿದ್ದೆ. ಆದರೆ, ಆಗ ಮಾನ್ಯ ಅಧ್ಯಕ್ಷರು ಈ ವಿಷಯವನ್ನು ಪರಿಶೀಲಿಸಲಾಗುತ್ತದೆ ಎಂದು ಹೇಳಿದ್ದುದರಿಂದ ನನಗೆ ಸಂತೋಷವಾಗಿತ್ತು ಮತ್ತು ಅದರ ಆಧಾರದ ಮೇಲೆ ಈ ನಿರ್ಣಯವನ್ನು ಚರ್ಚಿಸಿದ್ದೆವು. ನಿಮಗೆ ತಿಳಿದಿರಬಹುದು, ಪಾಕಿಸ್ತಾನದಲ್ಲಿಯೂ ಇದೇ ರೀತಿ ನಡೆದಿತ್ತು. ಎಲ್ಲಿಯವರೆಗೆ ಸಂವಿಧಾನ ರಚನಾಸಭೆಯು ಚುನಾಯಿತವಾಗಿರುವುದಿಲ್ಲವೋ ಅಲ್ಲಿಯವರೆಗೆ ಸಂವಿಧಾನವನ್ನು ಅಂಗೀಕರಿಸಲಾಗುವುದಿಲ್ಲ ಎಂದು ಶ್ರೀ ಜಿನ್ನಾ ಅವರು ಹೇಳಿದ್ದರು. ಈ ಕಾರಣದಿಂದಲೇ ನಾನು ಕೋಮುದೃಷ್ಟಿಯಿಂದ ಹೊರತಾಗಿ ಸಂವಿಧಾನ ರಚನಾಸಭೆಯನ್ನು ಆಯ್ಕೆಮಾಡದೆ ಇದ್ದರೆ, ಈ ಸಭೆಯಲ್ಲಿ ನಿಮಗೆ ಸಂವಿಧಾನವನ್ನು ಅಂಗೀಕರಿಸಲು ಹಕ್ಕು ಇರುವುದಿಲ್ಲ. ನಿಮಗೆ ಬಹುಮತವಿದೆಯಾದಕಾರಣ ಯಾವ ನಿರ್ಣಯವನ್ನು ಬೇಕಾದರೂ ಸಭೆಯಲ್ಲಿ ಅಂಗೀಕರಿಸಬಹುದು ಎಂಬ ಭಾವನೆಯಿಂದ ನೀವು ಕೂಡಿರುವುದರಿಂದ ನಿಮ್ಮಿಂದ ಏನನ್ನೂ ನಿರೀಕ್ಷಿಸುವುದು ಸಾಧ್ಯವಿಲ್ಲ. ನಿಮ್ಮ ಮೇಲೆ ಯಾರೂ ಆಪಾದನೆಯನ್ನು ಮಾಡುವುದಿಲ್ಲವೆಂದು ಊಹಿಸಿಕೊಳ್ಳಬೇಡಿ. ನಾನು ಹೇಳಬೇಕಾದುದನ್ನೆಲ್ಲ ಹೇಳುತ್ತಿದ್ದೇನೆ. ನೀವು ಒಪ್ಪದೆ ಇರಬಹುದು. ವಾಸ್ತವವಾಗಿ ಹಿಂದೆ ಬ್ರಿಟಿಷ್ ಸರ್ಕಾರವು ಮಾಡುತ್ತಿದ್ದುದೆಲ್ಲವನ್ನೂ ನೀವೂ ಮಾಡುತ್ತಿದ್ದೀರಿ. ಅನಂತರ ಅವರು ನಮಗೆ ಪಿಂಚಣಿಯನ್ನು ನೀಡಿ ನಮ್ಮನ್ನು ಮನೆಯಲ್ಲಿಯೇ ಕುಳಿತಿರುವಂತೆ ಹೇಳುತ್ತಿದ್ದರು. ನಾವೇಕೆ ಹಾಗೆ ಮಾಡಬೇಕು?

ನೀವು ಹೈದರಾಬಾದಿನಲ್ಲಿ ಏನನ್ನು ಮಾಡುತ್ತಿದ್ದೀರಿ ಎಂದು ನಾನು ಕೇಳುತ್ತೇನೆ. ಸಂವಿಧಾನವನ್ನು ರಚಿಸುವುದಕ್ಕೆ ಒಂದು ಸಂವಿಧಾನ ರಚನಾಸಭೆಯನ್ನು ರಚಿಸುವುದಾಗಿ ಹೇಳುತ್ತೀರಿ. ಹೈದರಾಬಾದಿಗಾಗಿ ಈ ತತ್ತ್ವವನ್ನು ಒಪ್ಪಿಕೊಳ್ಳುತ್ತೀರಿ. ಅದನ್ನು ಇಲ್ಲಿ ಏಕೆ ಮಾಡುವುದಿಲ್ಲ. ಇವೆಲ್ಲವನ್ನೂ ಕೋಮುದೃಷ್ಟಿಯಿಂದ ಮಾಡುತ್ತಿರುವುದು ಸ್ಪಷ್ಟವಾಗಿದೆ. ಇದರಲ್ಲಿ ಸತ್ಯಕ್ಕೆ ಮತ್ತು ನ್ಯಾಯಕ್ಕೆ ಜಾಗವಿಲ್ಲ.

ಅವರು ಇದನ್ನು ಮಾಡಲು ತಮಗೆ ಸಾಧ್ಯವಿಲ್ಲವೆಂದು ಹೇಳಿದರೆ, ಹೊಸ ಸಂವಿಧಾನ ರಚನಾಸಭೆಯನ್ನು ಜಂಟಿ ಮತದಾನದ ಆಧಾರದ ಮೇಲೆ ಆಯ್ಕೆ ಮಾಡಲು ಅವರಿಗೆ ಹಕ್ಕು ಇಲ್ಲ. ಅಥವಾ ಸಂವಿಧಾನವು ಅಂಗೀಕರಿಸಲ್ಪಟ್ಟ ಅನಂತರ ಇದನ್ನು ಮಾಡಲಾಗುತ್ತದೆ ಎಂದರೆ ನಾನು ಈಗಾಗಲೇ ಹೇಳಿರುವುದನ್ನು ಮತ್ತೆ ಹೇಳುತ್ತೇನೆ: 'ಅತಿ ಸೂತ್ರನಿಷ್ಠತೆ' ಮತ್ತು 'ಅನಮ್ಯತೆ'ಗಳನ್ನು ಕಿತ್ತೆಸೆಯಿರಿ. ಹೈದರಾಬಾದಿನಲ್ಲಿ ನಿಜಾಮರ ಕಡೆಯವರನ್ನು ಸೇರಿಸಿಕೊಳ್ಳದೆ ಸಂವಿಧಾನ ರಚನಾಸಭೆಯನ್ನು ಅವರು ಹೈದರಾಬಾದಿನಲ್ಲಿ ರಚಿಸಬಲ್ಲರೇ ಎಂದು ನಾನು ಅವರನ್ನು ಕೇಳುತ್ತೇನೆ. ಆದರೆ, ನಾವು ಇಲ್ಲಿ ನಮ್ಮ ಅಗತ್ಯಕ್ಕೆ ತಕ್ಕಂತೆ ಸಂವಿಧಾನ ರಚನಾಸಭೆಯನ್ನು ರಚಿಸಿಕೊಳ್ಳುತ್ತೇವೆ; ಆದ್ದರಿಂದ ನಾವು ಹಾಗೆ ಮಾಡಲಾಗುವುದಿಲ್ಲ ಎಂದು ಹೇಳುವುದು ತಪ್ಪಾಗುತ್ತದೆ. "ಮನಸ್ಸಿದ್ದಲ್ಲಿ ಮಾರ್ಗವು ಇದ್ದೇ ಇರುತ್ತದೆ". ನಿಮ್ಮಲ್ಲಿ ದೇಶದ ಬಗ್ಗೆ ನ್ಯಾಯಯುತವಾದ ಕಾಳಜಿಯಿದ್ದರೆ,

ನೀವು ಎಲ್ಲರನ್ನೂ ಸಮಾನವಾಗಿ ಕಾಣಬೇಕೆಂದಿದ್ದರೆ, ಎಲ್ಲರನ್ನು ಒಂದಾಗಿಸುವ ಹಾಗೂ ಭಾರತಕ್ಕೆ ಸಾರ್ವಭೌಮ ಪದವನ್ನು ಗಳಿಸಿಕೊಡಬೇಕೆಂಬ ನಿಮ್ಮ ಈ ಪ್ರಯತ್ನಗಳು ನಿಮಗೆ ಅಪಾರವಾದ ಅನರ್ಥವನ್ನು ತಂದೊಡ್ಡುತ್ತವೆ ಎಂಬ ಎಚ್ಚರಿಕೆಯನ್ನು ನಾನು ನಿಮಗೆ ನೀಡುತ್ತಿದ್ದೇನೆ. ಇದಕ್ಕೆ ಇತ್ತೀಚಿನ ಉದಾಹರಣೆಯೆಂದರೆ, ಚಕ್ರವರ್ತಿ ಔರಂಗಜ್ಹೇಬನದು. ಇಡೀ ಭಾರತವನ್ನು ಗೆದ್ದಮೇಲೆ, ಅಖಂಡ ಸಾಮ್ರಾಜ್ಯವನ್ನು ಸ್ಥಾಪಿಸಲೋಸುಗ ಆತ ಬಿಜಾಪುರ ಮತ್ತು ಗೋಲ್ಕೊಂಡಾ ಈ ಎರಡು ದಕ್ಷಿಣದ ರಾಜ್ಯಗಳನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡ. ಪರಿಣಾಮವೇನಾಯಿತು? ಔರಂಗಜೇಬನು ತನ್ನ ಸಾಮ್ರಾಜ್ಯವನ್ನು ತನ್ನ ಧರ್ಮಾಂಧತೆಯಿಂದಾಗಿ ಕಳೆದುಕೊಂಡ ಎಂದು ಹೇಳುತ್ತಾರೆ. ಆದರೆ ನಾನು ಹೇಳುತ್ತೇನೆ, ಅವನು ತನ್ನ ಸಾಮ್ರಾಜ್ಯಶಾಹಿ ಹಂಬಲದಿಂದ ಅದನ್ನು ಕಳೆದುಕೊಂಡ. ಅವನು ಹಾಗೆ ಮಾಡಿರದಿದ್ದಿದ್ದರೆ, ಅವನು ತನ್ನ ರಾಜ್ಯವನ್ನು ಕಳೆದುಕೊಳ್ಳುತ್ತಿರಲಿಲ್ಲ. ಎಲ್ಲರನ್ನೂ ಹೆದರಿಸಿ, ನಿಮ್ಮ ತೆಕ್ಕೆಗೆ ತೆಗೆದುಕೊಂಡು ಏಕಾತ್ಮಕವಾದ ಒಂದು ಹೊಸ ಸಾಮ್ರಾಜ್ಯವನ್ನು ಕಟ್ಟುವುದು ಸುಲಭ ಎಂದು ಭಾವಿಸಬೇಡಿ. ಅದು ಬಹಳ ಕಾಲ ಬಾಳುವುದಿಲ್ಲ. ಕೋಮುದೃಷ್ಟಿಯನ್ನು ತ್ಯಜಿಸಿ, ಜಂಟಿ ಮತದಾನದ ಆಧಾರದ ಮೇಲೆ ನೀವು ಹೊಸದಾಗಿ ಸಂವಿಧಾನ ರಚನಾಸಭೆಯನ್ನು ರಚಿಸಿ. ಆಗ ನೀವು ಯಾವ ಸಂವಿಧಾನವನ್ನು ಕೊಟ್ಟರೂ ನಾವು ಅದನ್ನು ಸ್ವೀಕರಿಸುತ್ತೇವೆ. ಆದರೆ ಈಗ ನೀವು ನೀಡಿರುವ ಸಂವಿಧಾನವು ಕಸದ ಬುಟ್ಟಿಗೆ ಎಸೆಯಲ್ಪಡಬೇಕಾದ ಗೌರವವನ್ನು ಮಾತ್ರ ಹೊಂದಿದೆ ಎಂದು ನಾವು ಭಾವಿಸುತ್ತಿದ್ದೇವೆ.]*

**ಶ್ರೀ ಬಿ. ದಾಸ್ :** ಮಾನ್ಯ ಡಾ. ಅಂಬೇಡ್ಕರ್ ಅವರು ಮಂಡಿಸಿದ ಕರಡು ಸಂವಿಧಾನದ ಮೇಲಿನ ಚರ್ಚೆಯನ್ನು ಮುಂದೂಡುವಂತೆ ಕೇಳುತ್ತಿರುವ ಈ ಗೊತ್ತುವಳಿಯನ್ನು ಮಂಡಿಸಲು ಅನುಮತಿಯನ್ನು ಪೀಠವು ೩೧ನೆಯ ನಿಯಮದ ಎರಡನೆಯ ಉಪಖಂಡದ ಪ್ರಕಾರ ನಿರಾಕರಿಸಬೇಕಾಗಿತ್ತು.

**ಮಾನ್ಯ ಸಭಾಧ್ಯಕ್ಷರು :** ಸದ್ಯಃ ಮಂಡಿಸಲ್ಪಟ್ಟಿರುವ ಚರ್ಚೆಯನ್ನು ಮುಂದೂಡುವಂತೆ ಕೇಳುತ್ತಿರುವ ಈ ಗೊತ್ತುವಳಿಗೆ ನಾನು ೨೫ನೆಯ ನಿಯಮ, ೫ನೆಯ ಖಂಡ(ಬಿ) ಉಪ ಖಂಡದ ಅಡಿಯಲ್ಲಿ ಚರ್ಚೆಗೆ ಅನುಮತಿಯನ್ನು ನೀಡಿದ್ದೇನೆ.

**ಶ್ರೀ ಬಿ. ದಾಸ್ :** ಅವರು ದೇಶದಲ್ಲಿ ಹೊಸದಾಗಿ ಚುನಾವಣೆಯಾಗಬೇಕೆಂದು ಬಯಸುತ್ತಿದ್ದಾರೆ. ಇದು ನಮ್ಮ ಇಡೀ ಯೋಜನೆಯನ್ನು ನಿರಾಕರಿಸುತ್ತಿದೆ.

**ಮಾನ್ಯ ಸಭಾಧ್ಯಕ್ಷರು :** ನಾನು ಹೇಳಿದ ಹಾಗೆ ಉದಾರವಾಗಿ ಈ ಚರ್ಚೆಯನ್ನು ೨೫ನೆಯ ನಿಯಮ, ೫ನೆಯ ಖಂಡ, (ಬಿ) ಉಪ ಖಂಡದ ಅಡಿಯಲ್ಲಿ ತೆಗೆದುಕೊಂಡು ಮಾನ್ಯ ಸದಸ್ಯರಿಗೆ ಅನುಮತಿಯನ್ನು ನೀಡಿದ್ದೇನೆ.

**ಬೇಗಮ್ ಐಜ್ಹಾಜ್ ರಸೂಲ್** (ಸಂಯುಕ್ತ ಪ್ರಾಂತ್ಯಗಳು : ಮುಸ್ಲಿಮ್) : ಮಾನ್ಯರೆ, ನಾವು ಈ ದಿನದ ಸಭೆಯನ್ನು ಮುಂದೂಡುವ ಮೊದಲು, ಡಾ. ಅಂಬೇಡ್ಕರ್ ಅವರ ಗೊತ್ತುವಳಿಯ ಮೇಲೆ ಸಾಮಾನ್ಯ ಚರ್ಚೆಯನ್ನು ನಡೆಸಲು ಎಷ್ಟು ದಿನವನ್ನು ಪೀಠವು ನಿಗದಿ ಪಡಿಸಿದೆ ಎಂಬುದನ್ನು ತಿಳಿದುಕೊಳ್ಳಬಹುದೇ?

**ಮಾನ್ಯ ಸಭಾಧ್ಯಕ್ಷರು :** ಈಗಾಗಲೇ ಹೇಳಿರುವಂತೆ, ಈ ಚರ್ಚೆಯನ್ನು ನಾಳೆಗೆ ಮುಕ್ತಾಯಗೊಳಿಸುವ ಆಶಯವಿದೆ. ಪ್ರತಿಯೊಬ್ಬ ಸದಸ್ಯರೂ ಮಾತನಾಡುವ ಸಮಯವನ್ನು ನಾನು ಮಿತಗೊಳಿಸಲಿದ್ದೇನೆ. ಈ ವಿಷಯದ ಬಗ್ಗೆ ಚರ್ಚೆಯನ್ನು ಮುಂದುವರಿಸಬೇಕೆಂದು ಹೆಚ್ಚಿನ ಸದಸ್ಯರು ಬಯಸಿದರೆ, ಇನ್ನೂ ಹೆಚ್ಚು ಕಾಲಾವಕಾಶವನ್ನು ನೀಡಬಹುದು.

ಅನಂತರ ಸಂವಿಧಾನ ರಚನಾಸಭೆಯನ್ನು ೧೯೪೮ರ ನವೆಂಬರ್ ೫ ಶುಕ್ರವಾರ ಬೆಳಗ್ಗೆ ಹತ್ತು ಗಂಟೆಗೆ ಮುಂದೂಡಲಾಯಿತು.

*[ಹಿಂದೂಸ್ಥಾನ ಭಾಷಣದ ಇಂಗ್ಲಿಷ್ ಅನುವಾದ]*